# ಅಪರಂಜಿ


ತಿಳಿನಗೆಯ ಕಾರಂಜಿ

ಜುಲೈ–2024



**ಇಷ್ಟು ವರ್ಷದಿಂದ ಕೂತು ಕೂತು
ಈ ನಡುವೆ ಮಂಡಿ ನೋವು ಶುರು ಆಗಿದೆ...
ಅದಕ್ಕೆ ಹೇಳೋದು ..ಸಾಧ್ಯವಾದ ಮಟ್ಟಿಗೆ
ಓಡಾಡ್ತಿರಿ ! ಆರೋಗ್ಯಕ್ಕೆ ಒಳ್ಳೆಯದು !**


ಬಿಡಿ ಪ್ರತಿ: ರೂ. 10/–



Ravi Graphics
OFFSET PRINTERS
Bringing colours alive
What we specialize into :
Books
Brochures
Catelogues
Boxes
Mono Cartons
53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com





Bag is everything
bag factory
bagfactory.co.in
Our Promise
100% recyclable paper bags & pouches
Pan-India delivery
Premium customisation for high-street brands
Reach us for your paper bag requirements
+91 89719 95599 | sales@bagfactory.co.in | bagfactory.co.in


ಕೆಲವು ಕಳ್ಕೊಂಡಿದೀರ...ಆದ್ರೂ ಆಗೀಬೋದು !
ಮಿಕ್ಕಿರೋವನ್ನಾದ್ರೂ ಚೆನ್ನಾಗ್ ನೋಡ್ಕೊಳ್ಳಿ... ಆಗ ಕಳ್ಕೊಳಲ್ಲ !
AVOID TEETHING TROUBLE

# ಅಂದ ಹಾಗೆ...!

ರಾಂಕಿ ಬೆಳ್ಳೂರ್


ಎಲೆಕ್ಷನ್ ರಿಸಲ್ಟ್ ಬಂದ ಮೇಲೆ ಏನು ಜೀರ್ಣ ಆಗ್ತಿಲ್ಲ ಡಾಕ್ಟರ್..
ನ್ಯೂಸ್ ಫಾಲೋ ಮಾಡೋದು ನಿಲ್ಲಿಸಿ.... ಸರಿ ಹೋಗ್ತೀರ...
KILL VIRUS
Extra Fittings ಇರೋದ್ರಿಂದ ಐದು ವರ್ಷ ತೊಂದರೆ ಆಗಬಾರದು ! ಆದ್ರೂ ನಿಮ್ ಹುಷಾರಲ್ಲಿರಿ !
BJP
NDA
TDP
OTHERS
JDU

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

www.mallige.com

NABH ACCREDITED
PATIENT SAFETY & QUALITY OF CARE

Certificate No.: MC-2068




Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages : 40+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 41
ಸಂಚಿಕೆ – 10
ಜುಲೈ – 2024

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ವಾರ್ಷಿಕ ಚಂದಾ : ರೂ. 100/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ...*


| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಅಬ್ಬಾ ಬಿಸಿಲು ಎಷ್ಟೊಂತಂದ್ರೆ......... | ಕುಮುದಾ ಪುರುಷೋತ್ತಮ್ | 7 |
| ಗಂಧೋಪಾಸನೆ | ಜ್ಯೋತಿ ರಾಜೇಶ್ | 10 |
| ನಾನು ಮೋನಾಲಿಸಪ್ಪಾ... | ಎಚ್. ಗೋಪಾಲಕೃಷ್ಣ | 13 |
| ರೆಸೊಲ್ಯೂಷನ್...... | ಕವಿತಾ ಹೆಗಡೆ ಅಭಯಂ | 16 |
| ಪುಸ್ತಕ ಪರಿಚಯ | ಕೆ.ಎನ್. ಭಗವಾನ್ | 19 |
| ಶೂಟಿಂಗ್ ಶಾಕ್ | ಅರವಿಂದ. ಜಿ. ಜೋಷಿ | 20 |
| ಮಲೆನಾಡಿನಲ್ಲೊಂದು ಪ್ರಸಂಗ | ಪುಷ್ಪಲತಾ. ಟಿ.ಜಿ. | 23 |
| ಋತು ಸಂಹಾರ | ಇ.ಆರ್. ರಾಮಚಂದ್ರನ್ | 26 |
| ಫ್ರಾನ್ಸ್ ಪ್ರವಾಸದಲ್ಲಿ ಒಂದು...... | ಲಕ್ಷ್ಮೀ ಶ್ರೀಧರ್ | 29 |
| ತುಂತುರು | ದಂನಆ | 31 |
| ನಗೆಗಾರ ಗಾಂಧಿ | ಬೇಲೂರು ರಾಮಮೂರ್ತಿ | 32 |
| ಮುಗಿಯದ ಆಟ, ಆ ತುಂಟಾಟ! | ಪ್ರಭಾಮಣಿ ನಾಗರಾಜ | 35 |
| ಎಮ್ಮೆ್ವರ್ಥ್ಸಾಹೇಬರ ಕನ್ನಡಕ | ಪಾಲಹಳ್ಳಿ ವಿಶ್ವನಾಥ್ | 37 |
| ಪುಸ್ತಕ ಪರಿಚಯ | ಇ.ಆರ್. ರಾಮಚಂದ್ರನ್ | 40 |


ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ,
ಒಳಪುಟಗಳು : ರಾಂಕಿ ಬೆಳ್ಳೂರ್, ಅಶೋಕ್ ಹೆಮ್ಮಿಗೆ
ರಘುಪತಿ ಶೃಂಗೇರಿ

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ಮೊ: 9845264304. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

***ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ***



# ಅಪರಂಜಿ ಕಿಡಿ

● ಪ್ರಕಾಶ್

254 "ನಮ್ಮ ಕ್ಲಿನಿಕ್" ಗಳಿಗೆ ಸ್ಥಳ ಗುರುತಿಸಿ

ಆರೋಗ್ಯ ಸಚಿವರು

ವೈದ್ಯರನ್ನು ಈಗಲಿಂದಲೇ ಗುರುತಿಸುವುದು ಆರೋಗ್ಯಕರ !!

* * *

ವಾಲ್ಮೀಕಿ ನಿಗಮದ ಭಾರಿ ಭಾರಿ ಹಗರಣ ತಾರಕಕ್ಕೆ

ಪತ್ರಿಕೆ

ಹಾಯ್ ರಾಮ, ರಾಮ !!!

* * *

ಸರ್ಕಾರದ ರಚನೆಗೆ ಯತ್ನ ಇಲ್ಲ

ಇಂಡಿಯಾ ವಕ್ತಾರರು

ಅಗಾಧವಾದ ಸೂಕ್ತ ನಿರ್ಧಾರ !!

* * *

ಬದಲಾದ ಜೀವನ ಶೈಲಿಯಿಂದ ಅನಾರೋಗ್ಯ

ಮಾನ್ಯ ಮುಖ್ಯ ಮಂತ್ರಿಗಳು

ಇದು ರಾಜಕಾರಣಿಗಳಿಗೆ ಅಪ್ಲೈ ಆಗುವ ತರಹ ಕಂಡು ಬರುಲ್ಲ!!

* * *

ಪೊಲೀಸ್ ಕಛೇರಿ ಜಾಗ ತಮ್ಮದೆಂದು ದಾಖಲೆ ಸೃಷ್ಟಿಸಿ,
ಮೂರುಜನ ಬಂಧನದಲ್ಲಿ !!

ದಿನಪತ್ರಿಕೆ

ಮೂರ್ಖತನದ ಪರಮಾವಧಿಯೆಂದರೆ ಉದಾಹರಣೆ !!

* * *

ದೇವದಾರಿಯಲ್ಲಿ ಗಣಿಗಾರಿಕೆ ; ಎಚ್ ಡಿ ಕೆ ಒಪ್ಪಿಗೆ

ದೆಹಲಿ ಸುದ್ದಿ

ಅವರ ಉತ್ಸಾಹ ಹೀಗೇ "ಉಕ್ಕು"ತ್ತಿರಲಿ !!

* * *

ನಿವೃತ್ತ ಎ ಟಿ ಎಂ ಸಿಬ್ಬಂದಿಗಳಿಂದ ಲೂಟಿ; ಬಂಧನ

ಸುದ್ದಿ

ಅಭ್ಯಾಸ ಬಲದ ಫಲಶ್ರುತಿ ?!?

* * *

■

ಶಿವಕುಮಾರ್

# ನಮ್ಮ ನಿಮ್ಮಲ್ಲಿ

"ಹಗಲಿನಬ್ಬರ ತಣ್ಣಗಾಯಿತು, ಸಂಜೆ ರಂಜಿಸಿ ಮೆರೆಯಿತು" ಎಂದು ನರಸಿಂಹಸ್ವಾಮಿಯವರು ಹಾಡಿದಂತೆ ನಾಡಿನಲ್ಲಿ ಚುನಾವಣೆಯ ಆಟಾಟೋಪವೆಲ್ಲ ಮುಗಿದು, ಈಗ ಮಳೆ, ಪಾಟ್ ಹೋಲು, ವಿದ್ಯುತ್ ಕಡಿತ ಮುಂತಾದ ಚಿರಪರಿಚಿತ ಸಂಗಾತಿಗಳೊಂದಿಗೆ ಶಾಂತಿಯುತ ಸಹಬಾಳ್ವೆ ಮಾಡುವ ದಿನಗಳು ಹಿಂತಿರುಗಿದ್ದವು. ಅಂತಹ ಒಂದು ಸಂಜೆ ಪುಸ್ತಕದ ಕಪಾಟಿನಲ್ಲಿ ಕೈಯ್ಯಾಡಿಸುತ್ತಿದ್ದಾಗ ವೈದ್ಯರ "ಅಗ್ನಿಕಾರ್ಯ" ಪುಸ್ತಕ ಕಣ್ಣಿಗೆ ಬಿತ್ತು. ಪುಸ್ತಕ ನೋಡುತ್ತಿದ್ದಂತೆ ಆ ಆಪ್ತ ಗೆಳೆಯರೊಡನೆ ಕಳೆದಿದ್ದ ಅಸಂಖ್ಯಾತ ಮಧುರ ಕ್ಷಣಗಳು ಒಮ್ಮೆಲೆ ನೆನಪಿನಂಗಳವನ್ನು ತುಂಬಿದವು. ಅವುಗಳಲ್ಲಿ ಒಂದು ಅಪೂರ್ವ ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುವೆ.

ಸುಮಾರು ಎರಡು ದಶಕಗಳ ಹಿಂದಿನ ಸಂಗತಿ. ಆಗತಾನೆ ಜೆ.ಪಿ. ನಗರದಲ್ಲಿ ರಂಗಶಂಕರ ನಾಟಕಶಾಲೆ, ಉತ್ತಮ ನಾಟಕಗಳ ಪ್ರದರ್ಶನ ನೀಡುವ ಕಾರ್ಯವನ್ನು ಪ್ರಾರಂಭಿಸಿತ್ತು. ಇಂತಹ ಒಳ್ಳೆಯ ಕೊಡುಗೆಯನ್ನು ಶ್ರೀಮತಿ ಅರುಂಧತಿಯವರು ಸಾಧಿಸಿ ಬೆಂಗಳೂರಿನ ನಾಟಕ ರಸಿಕರಿಗೆ ಒಂದು ಅಚ್ಚುಕಟ್ಟಾದ ರಂಗಭೂಮಿಯನ್ನು ಒದಗಿಸಿದ್ದಾರೆ. ಇಲ್ಲಿ ನಾಟಕಗಳು ಕರಾರುವಾಕ್ಕಾಗಿ ಸಂಜೆ ಏಳೂವರೆಗೆ ಶುರು. ಒಂದು ಸಂಜೆ ನಾನು ವೈದ್ಯ ದಂಪತಿಗಳ ಜೊತೆ ರಂಗಶಂಕರದಲ್ಲಿ ನಾಟಕವೊಂದನ್ನು ನೋಡುವ ಹಂಚಿಕೆಯನ್ನು ಮಾಡಿದ್ದೆ. ನಾನು ಮಲ್ಲೇಶ್ವರದಿಂದ ಹೊರಟು ಆರು ಗಂಟೆಯ ಹೊತ್ತಿಗೆ ಜಯನಗರದಲ್ಲಿನ ವೈದ್ಯರ ಮನೆ "ಋತುರಾಜ"ದಲ್ಲಿ ಹಾಜರಾಗಿದ್ದೆ. ಅವರ ಪತ್ನಿ ಸುಹಾಸಿನಿ, ನನ್ನನ್ನು ಆದರದಿಂದ ಬರಮಾಡಿಕೊಂಡು ಚಹಾ, ಚೂಡಗಳಿಂದ ಸತ್ಕರಿಸಿದರು. ಆರೂವರೆಯಾದರೂ ಅವರುಗಳು ಎದ್ದು ಹೊರಡುವ ಸೂಚನೆ ಕಾಣಲಿಲ್ಲ. ನನ್ನ ಚಡಪಡಿಕೆ ನೋಡಿ ವೈದ್ಯರು ನಗುತ್ತಾ, "ಇಲ್ಲಿಂದ ಕೇವಲ ಹತ್ತು ನಿಮಿಷದಲ್ಲಿ ಥೇಟರ್ ಮುಟ್ಟಬಹುದು. ಕಾಳಜಿ ಬೇಡ." ಅಂತ ಅಶ್ವಾಸನೆ ಕೊಟ್ಟರು. ಕೊನೆಗೆ ಆರೂ ಮುಕ್ಕಾಲಿಗೆ ಅಲ್ಲಿಂದ ಹೊರಟು, ಏಳೂಕಾಲಿಗೆ "ಥೇಟರ್" ಸೇರಿದೆವು. ನಾಟಕಮಂದಿರದಲ್ಲಿ ಒಂದೇ ಜನಜಂಗುಳಿ. ಮಂದಿರದ ಕಟ್ಟಡದ ವಿನ್ಯಾಸವೇ ಒಂದು ವಿಶಿಷ್ಟ ಶೈಲಿ. ಈ ರಂಗಮಂದಿರವನ್ನು ಭಾರಿ ಕಾಂಕ್ರೀಟ್ ತೊಲೆಗಳ ಮೇಲೆ ತೂಗು ಬಿಟ್ಟಿದ್ದು, ಒಂದು ರೀತಿಯಲ್ಲಿ ಇಡೀ ರಂಗಮಂದಿರವೇ ಗಾಳಿಯಲ್ಲಿ ತೇಲುತ್ತಿರುವಂತೆ ಭಾಸವಾಗುತ್ತದೆ. ರಂಗಮಂದಿರದ ಕೆಳಭಾಗದಲ್ಲಿ, ಪುಸ್ತಕದ ಅಂಗಡಿ, ಕಾಫಿ ಷಾಪ್ ಇತ್ಯಾದಿ. ಈ ಆವರಣದ ಮಧ್ಯಭಾಗದಿಂದ ಒಮ್ಮೆಲೇ ಆಕಾಶಕ್ಕೇರುವ ಮೆಟ್ಟಲುಗಳ ಸಾಲು. ಸುತ್ತಿ ಸುತ್ತಿ ಹತ್ತುವ ಮೆಟ್ಟಲುಗಳ ತುದಿಯಲ್ಲಿ ಪ್ರೇಕ್ಷಾಗಾರದ ಬಾಗಿಲುಗಳು. ರಂಗಸ್ಥಳವನ್ನು ಅರ್ಧ ವೃತ್ತಾಕಾರದಲ್ಲಿ ಸುತ್ತುವರೆದಿರುವ ಸುಖಾಸನಗಳು ಮೆಟ್ಟಲು ಮೆಟ್ಟಲಾಗಿ ಮೇಲಕ್ಕೇರಿ, ಕೊನೆಯ ಸಾಲಿನಲ್ಲಿರುವವರಿಗೂ ರಂಗಸ್ಥಳದ ಪೂರ್ಣ ಸಾಮೀಪ್ಯವನ್ನು ದೊರಕಿಸುವುದರಲ್ಲಿ ಯಶಸ್ವಿಯಾಗಿದೆ ಎನ್ನಬಹುದು.

ಅಂದು ನಾವು ನೋಡಲು ಹೋಗಿದ್ದ ನಾಟಕ, "ಋತುಸಂಹಾರ". ಮಣಿಪುರದ ಖ್ಯಾತ ನಾಟಕಕಾರ ರತನ್ ಥೇಯಮ್ ರಚಿಸಿ ನಿರ್ದೇಶಿಸಿದ್ದ ನಾಟಕ ಇದು. ಆರು ಋತುಗಳನ್ನು ಈಶಾನ್ಯ ಭಾರತದ ವಿವಿಧ ನಾಟ್ಯಶೈಲಿಗಳಲ್ಲಿ ಬಿಂಬಿಸಿ, ನರ್ತನದ ಮೂಲಕ ಆ ಋತುವಿನ ಅನುಭವವನ್ನು ನೋಟಕರಿಗೆ ಸಂವಹನಗೊಳಿಸುವ ಸಂಕೀರ್ಣ ಪ್ರಯತ್ನ ಈ "ಋತುಸಂಹಾರ".

ಏಳೂವರೆಗೆ ಸರಿಯಾಗಿ ರಂಗಮಂದಿರದ ದೀಪಗಳೆಲ್ಲಾ ಆರಿದವು. ಧ್ವನಿವಾಹಕದಿಂದ ಗಿರೀಶ ಕಾರ್ನಾಡರ ಧ್ವನಿ ಮುದ್ರಿತ ದನಿ, "ಪ್ರದರ್ಶನಕ್ಕೆ ವ್ಯತ್ಯಯ ಬರದಂತೆ" ನಮ್ಮ ಮೊಬೈಲ್ ಗಳನ್ನು ನಿಷ್ಕ್ರಿಯಗೊಳಿಸುವ ವಿನಂತಿಯ ನಂತರ, ರಂಗಭೂಮಿಯ ಮಂದ ಬೆಳಕಿನಲ್ಲಿ ಎಲ್ಲ ನರ್ತಕ ನರ್ತಕಿಯರೂ ಸಾಲಾಗಿ ನಿಂತು ಪ್ರಕೃತಿಗೆ ಕೃತಜ್ಞತೆಯನ್ನು ಸಲ್ಲಿಸುವ ಮಣಿಪುರಿ ಗೀತೆಯೊಂದನ್ನು ಸುಶ್ರಾವ್ಯವಾಗಿ ಹಾಡಿದರು.

ಪ್ರಾರಂಭದ ಸಮೂಹ ನರ್ತನ ಗ್ರೀಷ್ಮ ಋತುವನ್ನು ಕುರಿತದ್ದು. ಮೇಘಾಲಯದ ನೃತ್ಯಶೈಲಿಯಲ್ಲಿ ಇದನ್ನು ಮೂಡಿಸಿದ್ದರು. ಅನಂತರ ವರ್ಷಋತು. ಇದನ್ನು ಪ್ರಸ್ತುತ ಪಡಿಸಿದ್ದು ಅರುಣಾಚಲದ ನೃತ್ಯಪಟುಗಳು. ಧಾರಾಕಾರವಾದ ಮಳೆಯನ್ನು ಸೂಚಿಸಲು ಈ ತರುಣಿಯರು ಕೊಡೆಗಳನ್ನು ಹಿಡಿದು ನರ್ತಿಸಿದ ರೀತಿ ಬಹು ಮನೋಹರವಾಗಿತ್ತು. ಶಿಶಿರ ಋತುವಿನ ತಂಡದ ಎಲ್ಲರೂ ಷರ್ಲಾಕ್ ಹೋಮ್ಸ್‌ನಂತೆ ಉದ್ದ ನಿಲುವಂಗಿ ಹ್ಯಾಟ್‌ಗಳನ್ನು ಧರಿಸಿ ಮೈಖಲ್ ಜಾಕ್ಸನ್ ನೃತ್ಯವನ್ನು ಅನುಕರಿಸಿದ್ದು ನಿಜಕ್ಕೂ ಮೋಜಿನದಾಗಿತ್ತು. ಇಡೀ ಕಾರ್ಯಕ್ರಮದಲ್ಲಿ ಮನಸೆಳೆದ ಸಮೂಹ ನೃತ್ಯವೆಂದರೆ, ವಸಂತ ಋತುವನ್ನು ರಂಗಭೂಮಿಯ ಮೇಲೆ ಸೃಷ್ಟಿಸಿದ ಮಣಿಪುರದ ನರ್ತಕ ನರ್ತಕಿಯರು. ಪ್ರಾರಂಭದಲ್ಲಿ ವೇದಿಕೆಯ ಮೇಲೆ ಹಲವು ಪಾತ್ರಧಾರಿಗಳು ಪ್ರೇಕ್ಷಕರಂತೆ ನಿಂತು ವೇದಿಕೆಯ ಎಡಭಾಗದ ನೇಪಥ್ಯದ ಕಡೆ ಕುತೂಹಲದಿಂದ ನೋಡುತ್ತಿರುತ್ತಾರೆ. ಅಲ್ಲಿಂದ ಕೋಲಾಹಲ ಭರಿತ ಉತ್ಸವದ ಸದ್ದುಗಳು ಹೊರಹೊಮ್ಮುತ್ತಿರುತ್ತವೆ. ಆ ಭಾಗದಿಂದ ಪ್ರಜ್ವಲಿಸುತ್ತ ಹೊರಹೊಮ್ಮುತ್ತಿದ್ದ ಬೆಳಕಿನಲ್ಲಿ ವೇದಿಕೆಯ ಮೇಲಿದ್ದ ಪ್ರೇಕ್ಷಕ ಪಾತ್ರಧಾರಿಗಳ ಮುಖಗಳು ಹೊಳೆಯುತ್ತಿರುತ್ತವೆ. ಕ್ರಮೇಣ ಉತ್ಸವದ ಸದ್ದು ಹೆಚ್ಚುತ್ತಾ



ಹೋಗಿ ತಾರಕಕ್ಕೇರಿದಾಗ ವಸಂತೋತ್ಸವದ ತೇರು ವೇದಿಕೆಯನ್ನು ಪ್ರವೇಶಿಸುತ್ತದೆ. ಆ ನರ್ತಕರ ಉತ್ಸಾಹ, ಕುಣಿದಾಟ, ಢೋಲುಗಳ ಬಡಿತ, ಕೊಂಬು ಕಹಳೆಗಳ ಸಿಂಹನಾದ ಇವೆಲ್ಲಾ ಒಂದುಗೂಡಿ ಒಂದು ಮಾಯಾಲೋಕವೇ ನಮ್ಮ ಮುಂದೆ ಸೃಷ್ಟಿಯಾಯಿತು. ಕೊನೆಗೆ ತಂಡದ ಎಲ್ಲ ನರ್ತಕರೂ ತಮ್ಮ ಪರಿಕರಗಳನ್ನು ಕೆಳಗಿಟ್ಟು ಸಾಲಾಗಿ ನಿಂತು ಒಂದು ಗೀತೆಯನ್ನು ಹಾಡಿದನಂತರ, ಎಲ್ಲರೂ ಒಟ್ಟಿಗೆ ಮಂಡಿಯೂರಿ, ತಲೆಯನ್ನು ವೇದಿಕೆಗೆ ತಾಗಿಸಿ ನಮ್ಮೆಲ್ಲರಿಗೂ ನಮಸ್ಕರಿಸಿದರು. ಆ ಗುಂಪಿನ ಮುಂಚೂಣಿಯಲ್ಲಿ

ನಾಟಕದ ನಿರ್ದೇಶಕ ರತನ್ ಥೇಯಮ್ ಸಹಾ ಇದ್ದರು. ಕಿವಿ ಗಡಕಿಚ್ಚುವ ಚಪ್ಪಾಳೆ ರಂಗಶಂಕರವನ್ನು ತುಂಬಿತು. ಅದೊಂದು ಮ್ಯಾಜಿಕಲ್ ಅನುಭವ. ಎರಡು ದಶಕಗಳ ನಂತರ ಇಂದಿಗೂ ಆ ನೆನಪು ಮರುಕಳಿಸಿದಾಗ ಒಂದು ಬೆಚ್ಚಗಿನ ಭಾವನೆ ಮನವನ್ನು ತುಂಬುತ್ತದೆ.

ಸಹಜವಾಗಿಯೇ ಎಲ್ಲರ ಜೀವನದಲ್ಲೂ ಇಂತಹ ಮ್ಯಾಜಿಕಲ್ ಕ್ಷಣಗಳು ಒಂದಲ್ಲ ಒಂದುಬಾರಿ ಅನುಭವಕ್ಕೆ ಬಂದಿರುತ್ತವೆ. ನಮ್ಮ ಸೆಪ್ಟೆಂಬರ್ ಸಂಚಿಕೆಯನ್ನು ಮ್ಯಾಜಿಕಲ್ ಅನುಭವ ವಿಶೇಷಾಂಕವನ್ನಾಗಿ ಹೊರತರುತ್ತಿದ್ದೇವೆ. ಈ ಕುರಿತ ಪ್ರಕಟಣೆ ಈ ಲೇಖನದ ಕೊನೆಯಲ್ಲಿದೆ. ಈ ವಿಶೇಷಾಂಕಕ್ಕೆ ಬರಹವನ್ನು ನೀಡಿ ಈ ಸಮೂಹ ಸಂತಸದಲ್ಲಿ ಭಾಗವಹಿಸಲು ನಿಮಗೆ ಆದರದ ಆಹ್ವಾನ.

## "ಮ್ಯಾಜಿಕಲ್ ಅನುಭವ" ವಿಶೇಷಾಂಕ

ಸೆಪ್ಟೆಂಬರ್ 2024 ರ ಸಂಚಿಕೆಯನ್ನು " ಮ್ಯಾಜಿಕಲ್ ಅನುಭವ" ವಿಶೇಷಾಂಕವನ್ನಾಗಿ ಹೊರತರುತ್ತಿದ್ದೇವೆ. ಮೇಲಿನ ಬರಹ ಕೇವಲ ಒಂದು ನಿದರ್ಶನ. ನಿಮಗೆ ಆಪ್ತವಾದ, ಮುದವನ್ನು ತಂದ, ಮರೆಯಲಾಗದ, ಅಪೂರ್ವ ಅನುಭವವೊಂದನ್ನು ದಾಖಲಿಸುವ ಬರಹಕ್ಕೆ ಇದೊಂದು ಸುವರ್ಣಾವಕಾಶ. ಅನುಭವವು ಒಂದು ನಾಟಕವೇ ಆಗಬೇಕೆಂದಿಲ್ಲ. ಸಂಗೀತ, ಭಾಷಣ, ಚುರುಕಿನ ಸಂಭಾಷಣೆ, ಪ್ರಕೃತಿಯ ಮನೋಹರ ದೃಶ್ಯ ಯಾವುದಾದರೂ ಆಗಬಹುದು. ಮುಖ್ಯವಾಗಿ ಅದು ಹೃದಯಸ್ಪರ್ಶಿಯಾಗಿರಬೇಕು. ಲೇಖನ ಸುಮಾರು ಐನೂರು ಪದಗಳನ್ನು (ಅಪರಂಜಿಯ ಎರಡು ಪುಟಗಳು) ಮೀರದಿರಲಿ. ಆಗಸ್ಟ್ ಮೊದಲ ವಾರದಲ್ಲಿ ನಿಮ್ಮ ಲೇಖನ ನಮ್ಮ ಕೈ ಸೇರುವಂತಾಗಲಿ. ಗುಡ್ ಲಕ್.

**–ಶಿವಕುಮಾರ್, ಸಂಪಾದಕ.**

## ಶ್ರದ್ಧಾಂಜಲಿ



ಕನ್ನಡ ನಾಟಕ ರಂಗದ ಹಿರಿಯ ರಂಗಕರ್ಮಿ, ಸಮತೆಂತೋ (ಸರಸ್ವತಿಪುರಂ ಮಧ್ಯದ ತೆಂಗಿನ ತೋಪು) ರಂಗ ತಂಡ ಕಟ್ಟಿ ನಿರಂತರ 50 ವರ್ಷಗಳಿಗೂ ಹೆಚ್ಚು ಕಲಾ ಸೇವೆ ಮಾಡಿದ ಮತ್ತು ಅಪರಂಜಿಯ ಅಭಿಮಾನಿ, ಓದುಗ ಮತ್ತು ಲೇಖಕರಾದ **ಡಾ. ನ. ರತ್ನ** ಅವರು ನಮ್ಮನ್ನು ಅಗಲಿದ್ದಾರೆ. ಅವರಿಗೆ ಅಪರಂಜಿ ಬಳಗದಿಂದ ಹೃದಯತುಂಬಿದ ಶ್ರದ್ಧಾಂಜಲಿ.


ಅಪರಂಜಿಯ 41ರ ಹಬ್ಬದ ಪ್ರಯುಕ್ತ
ಕೊರವಂಜಿ ಅಪರಂಜಿ ಟ್ರಸ್ಟ್ ಅರ್ಪಿಸುವ
ಕೈಲಾಸಂರ ಹಾಸ್ಯ ನಾಟಕ
ಹೋಂ
ರೂಲು
ನಿರ್ದೇಶನ
ವೈ. ವಿ. ಗುಂಡೂರಾವ್
ಮೈದಾನದ ಹೆಬ್ಬುಲಿ... ಮನೆಯ ಮೂಗಿಲಿ
ಮತ್ತು
ವೈ.ವಿ. ಗುಂಡೂರಾವ್ ಅವರ
ಕೈಲಾಸಂ ಝಲಕ್
ಶನಿವಾರ 19.10.2024, ಸಂಜೆ 7 ಗಂಟೆಗೆ
ಸ್ಥಳ : ಡಾ|| ಸಿ. ಅಶ್ವಥ್ ಕಲಾ ಭವನ
ಎನ್.ಆರ್. ಕಾಲೋನಿ, ಬಸ್ ನಿಲ್ದಾಣದ ಎದುರು
ಬಸವನಗುಡಿ, ಬೆಂಗಳೂರು–04
ನಿರ್ವಹಣೆ:
ಬೇಲೂರು ರಾಮಮೂರ್ತಿ
ಪ್ರವೇಶ ದರ
ರೂ. 200/–
ಮಿಕ್ಕ ವಿವರಗಳು ಮುಂದಿನ
ಸಂಚಿಕೆಯಲ್ಲಿ
ಅಪರಂಜಿ ಚಂದಾದಾರಿಗೆ
ಶೇ. 25% ರಿಯಾಯಿತಿ. (ರೂ. 150/-)

# ಅಬ್ಬಾ ಬಿಸಿಲು ಎಷ್ಟೊಂತಂದ್ರೆ.........


ಕುಮುದಾ ಪುರುಷೋತ್ತಮ್

ಮಹಾಲಕ್ಷಮ್ಮ ಎಲ್ಲಾ ಸಂಪ್ರದಾಯಗಳನ್ನೂ ಚಾಚೂ ತಪ್ಪದೆ ಪಾಲಿಸುವ ಮಹಾ ಸಂಪ್ರದಾಯಸ್ಥೆ. ಮುಂಜಾನೆ ಎದ್ದೊಡನೆ ಸ್ನಾನ, ಸ್ತೋತ್ರ ಪಠಣ. ಪೂಜೆ ಪುನಸ್ಕಾರ ಎಲ್ಲವೂ ಮುಗಿಯುವವರೆಗೂ ಬಾಯಿಗೆ ಒಂದು ಹನಿ ನೀರೂ, ಯಜಮಾನರಿಗೆ ಒಂದು ತೊಟ್ಟು ಕಾಫೀ ಕೊಟ್ಟವರಲ್ಲ. ಎಲ್ಲ ಮುಗಿಯುವವರೆಗೆ ಪತಿದೇವರಿಗೆ ಮುಂಜಾನೆಯ ಉಪಾಹಾರಕ್ಕೂ ಏಕಾದಶಿ. ಅವರು ಬೇಸತ್ತು ಅಡುಗೆ ಮನೆಗೆ ಹೋಗಿ ತಾವೇ ಏನಾದರೂ ಮಾಡಿಕೊಳ್ಳುವೆ ಎಂದರೆ ಅದಕ್ಕೂ ಗಲಾಟೆ. ನೀವು ಎಂಜಲು ಕೈನಲ್ಲಿ ಮುಟ್ಟಿ ಅಲ್ಲೆಲ್ಲಾ ಮೈಲಿಗೆ ಮಾಡಿಬಿಡುತ್ತೀರಾ ಎಂಬ ರಾದ್ಧಾಂತ. ಇದೆಲ್ಲಾ ಬೇಡವೆಂದು ಅವರು ನೆಪಕ್ಕೆ ಮುಂದೆ ಪೇಪರ್ ಕೈಯಲ್ಲಿ ಹಿಡಿದು ಕಾಫಿ ತಿಂಡಿಗಾಗಿ ಹಪಹಪಿಸುತ್ತಾ ಪೂಜೆ ಮುಗಿಯಲು ಕಾಯುವರು.

ಬಿಸಿಲ್ಗಾಲ ಬಂತು. ಬಂತೆಂದರೆ ಅಂತಿತಹುದಲ್ಲ. ಸೀದುಹಾಕಿ ಬಿಡುವಂತಹ ಬಿಸಿಲು. ಫ್ಯಾನ್ ಕೆಳಗೆ ಕುಳಿತು ಪತ್ನಿಯ ಪೂಜಾಕಾರ್ಯ ಮುಗಿಯಲು ಕಾಯುತ್ತಾ ಕುಳಿತಿದ್ದಾರೆ. ಆಕೆ ದೇವರ ನಾಮ ಗುಣುಗುಣಿಸುತ್ತಾ ದೇವರ ಪಠಗಳಿಗೆ ಏರಿಸಿದ್ದ ಹೂವಿನ ನಿರ್ಮಾಲ್ಯವನ್ನು ತೆಗೆಯಹತ್ತಿದರು. ಕೈಯಲ್ಲಿ ತೆಗೆದ ಅವರಿಗೆ ಏನೋ ವಿಚಿತ್ರ ಎನಿಸಿತು. ಹೂಗಳು ಒಣಗಿ ಒಂದೇ ದಿನಕ್ಕೆ ಒಣಸಂಡಿಗೆಯಂತಾಗಿ ಚಟಚಟ ಸದ್ದುಮಾಡಿತ್ತಾ ಪುಡಿಪುಡಿಯಾದವು! ಖ್ಖೊಕ್ .. ಖ್ಖೊಕ್.. ಶಬ್ದ ಕೇಳಿ ಮಹಾಲಕ್ಷಮ್ಮ ತಿರುಗಿ ನೋಡಿದರು. ಪತಿ ಪೇಪರ್ ಹಿಂದೆ ಮುಖ ಹುದುಗಿಸಿ ನಗುತ್ತಿದ್ದಾರೆ! "ಇದ್ರಲ್ಲಿ ನಗೋಕ್ಕೆ ಏನಿದೆ?" ಗದರಿದರು." ನಗ್ದೆ ಇನ್ನೇನು ತಾನೆ ಮಾಡ್ಲಿ? ನೆನ್ನೆ ದೇವರಿಗೇರಿಸಿದ್ದ ಹೂಗಳೆಲ್ಲಾ ಇಂದು ಒಣ ಸಂಡಿಗೆಯಾಗಿದೆ. ಜಾಗ್ರತೆಯಾಗಿ ಎಲ್ಲಾ ತೆಗೆದಿಟ್ಟು ಎಣ್ಣೆಯಲ್ಲಿ ಹುರಿದಿಡು. ಯಾರೂ ಕಂಡು ಕೇಳರಿಯದ ಮಲ್ಲಿಗೆ ಸಂಡಿಗೆ, ತುಳಸಿ ಸಂಡಿಗೆ, ಗುಲಾಬಿ ಸಂಡಿಗೆ ಎಲ್ಲಾ ಪ್ರಸಾದದಂತೆ ತಿಂದು ಪಾವನರಾಗೋಣ." ಮೇಲಿನಿಂದ ಮತ್ಯಾರೋ ಖ್ಖೊಕ್... ಖ್ಖೊಕ್ ಎಂದು ನಕ್ಕರು. ಯಾರೆಂದು ನೋಡಿದರೆ ಕಿಟಕಿಯಿಂದ ಇಣುಕುತ್ತಿದ್ದ ಸೂರ್ಯ ತಾನೂ ನಕ್ಕು ಪತಿದೇವರಿಗೆ ಜೊತೆಯಾದ.

****

ಸುನಂದಳಿಗೆ ಭಾನುವಾರ ಬಂತೆಂದರೆ ವಿಪರೀತ ಕೆಲಸ. ವಾರದಿಂದ ಶೇಖರವಾಗಿದ್ದ ಒಗೆಯಲು ಹಾಕಿದ್ದ ಬಟ್ಟೆಗಳನ್ನು ವಾಷಿಂಗ್ ಮೆಶಿನ್ನಿಗೆ ಹಾಕಿ ಒಗೆದು ಒಣಗಿಸಿ ಸಾಯಂಕಾಲದ ವೇಳೆಗೆ ಒಣಗಿದ ಬಟ್ಟೆಗಳನ್ನು ಮಡಚಿ ಓರಣವಾಗಿ ಬೀರುವಿನಲ್ಲಿ ಜೋಡಿಸಿಡುವ ಕೆಲಸ. ಮೊನ್ನೆ ಒಂದು ತಮಾಷೆ ನಡೆಯಿತು. ವಾಡಿಕೆಯಂತೆ ಬಟ್ಟೆಗಳನ್ನು ಮೆಷಿನ್ನಿಗೆ ಹಾಕಿ ಅಳತೆ ಮಾಡಿದ ಸೋಪಿನ ದ್ರವ ಸುರಿದು ಗುಂಡಿ ಒತ್ತಿದಳು. ಮುಗಿಯಲು ಒಂದೂವರೆ ಗಂಟೆ ಯಾಗುತ್ತೆ ಎಂದು ಮೆಷಿನ್ ಸೂಚಿಸಿತು. ಅಷ್ಟರಲ್ಲಿ ಅಡುಗೆ ತಯಾರಿ ನಡೆಯಿತು. ಕುಕ್ಕರ್ ಕೂಗಿಸಿ ತರಕಾರಿ ಹೆಚ್ಚಿ ಮಸಾಲೆ ರುಬ್ಬಿ ಒಗ್ಗರಣೆ ಹಾಕುವ ವೇಳೆಗೆ ಮೆಷಿನ್ ಒಗೆದಾಯಿತೆನ್ನುವ ಸೂಚನೆ ನೀಡಿತು. ಅಟ್ಟದ ಮೇಲಿದ್ದ ಗೂಡೆ ಕೆಳಗಿಳಿಸಿ ಒಗೆದ ಬಟ್ಟೆಗಳನ್ನು ಅದರಲ್ಲಿ ಗೋಪುರದಂತೆ ಪೇರಿಸಿ ಹಿತ್ತಲಿಗೆ ತಂದಳು. ಕಣ್ಣು ಕೋರೈಸುವ, ಚರ್ಮ ಚುರ್ ಎನಿಸುವ ಬಿಸಿಲಿನ ಬೇಗೆ. ಒಂದೊಂದಾಗಿ ಬಟ್ಟೆಗಳನ್ನು ಒದರಿ ತಂತಿಯಮೇಲೆ ಹರವುತ್ತಾ ಹೋದಳು. ಕೊನೆಯ ಬಟ್ಟೆ ಹರವಿ



ಗೂಡೆ ಹಿಡಿದು ಇನ್ನೇನು ಒಳಬರಬೇಕು. ಎಲ್ಲಕ್ಕಿಂತ ಮೊದಲು ಹರವಿದ್ದ ಟವೆಲು ತುಸು ಮುದುರಿತ್ತು. ಸರಿಮಾಡಲು ಕೈ ಇಟ್ಟರೆ ಅದಾಗಲೇ ಸಂಪೂರ್ಣ ಒಣಗಿಹೋಗಿತ್ತು. ಪರವಾಗಿಲ್ಲವೇ ಎಂದುಕೊಳ್ಳುತ್ತಾ ಪಕ್ಕದ ಬಟ್ಟೆಗೆ ಕೈಇಟ್ಟಳು. ಅದೂ ಒಣಗಿತ್ತು. ಒಂದಾದನಂತರ ಒಂದನ್ನು ನೋಡುತ್ತಾ ಹೋದರೆ ಎಲ್ಲಾ ಒಣಗಿಬಿಟ್ಟಿತ್ತು!. ಎಲ್ಲವನ್ನೂ ಮಡಚಿ ಗೂಡೆಯಲ್ಲಿಟ್ಟಳು. ಒಂದೇ ಏಟಿಗೆ ಎಲ್ಲಾ ಕೆಲಸ ಮುಗಿದಿದ್ದಕ್ಕೆ ಹಿಗ್ಗುತ್ತಾ ಮನೆಯೊಳಕ್ಕೆ ಬರುತ್ತಿದ್ದಂತೆ ಸಂಪೂರ್ಣ ಗಾಢಾಂಧಕಾರ! ಅಯ್ಯಯ್ಯೋ ನನ್ನ ಕಣ್ಣಿಗೇನಾಗಿಹೋಯಿತು? ಬಿಸಿಲಿಗೆ ಸುಟ್ಟುಹೋಯಿತೇ ಎಂದು ಹಲುಬುತ್ತಿದ್ದಂತೆ ಸ್ವಲ್ಪಸ್ವಲ್ಪವೇ ದೃಷ್ಟಿ ತಿಳಿಯಾಗುತ್ತಾ ಹೋಯಿತು. ಆಷ್ಟರಲ್ಲಿ ಬಟ್ಟೆಗಳಂತೆ ತಾನೂ ಸಂಪೂರ್ಣವಾಗಿ ಒಣಗಿಹೋಗಿದ್ದು ಅರಿವಿಗೆ ಬಂತು. ತುಂಬಿದ ಚೊಂಬಿನಿಂದ ನೀರನ್ನು ನೇರಾಗಿ ಗಂಟಲಿಗೆ ಸುರಿದುಕೊಂಡಳು. ಜೀವ ತಂಪಾಯಿತು. ಕಿಟಕಿಯಿಂದ ಇದೆಲ್ಲಾ ನೊಡುತ್ತಿದ್ದ ಸೂರ್ಯದೇವ ನನ್ನ ಪ್ರತಾಪ ಕಂಡೆಯಾ ಎನ್ನುತ್ತಾ ಮೀಸೆ ತಿರುವಿದ.

****

ಸರೋಜಮ್ಮನ ಬೀಗರು ಊರಿಗೆ ಬಂದಿದ್ದರು. ಹೆಣ್ಣು ಮಗಳನ್ನು ಮನೆ ತುಂಬಿಸಿಕೊಂಡ ಬೀಗರು ವಿಶೇಷ ಗೌರವಕ್ಕೆ ಪಾತ್ರರು ತಾನೇ? ಅವರನ್ನು ಮನೆಗೆ ಕರೆದು ಮೃಷ್ಠಾನ್ನ ಭೋಜನವಿತ್ತು ಸತ್ಕರಿಸಲು ಆಹ್ವಾನವಿತ್ತರು. ಅವರೂ ಬರಲೊಪ್ಪಿದರು. ಅಂದು ಸರೋಜಮ್ಮನ ಉತ್ಸಾಹ ಹುರುಪಿಗೆ ಸಾಟಿ ಇರಲಿಲ್ಲ. ಮುಂಜಾನೆ ಏಳಕ್ಕೆಲ್ಲಾ ಅಡುಗೆಮನೆ ಪ್ರವೇಶಿಸಿದಾಕೆ ಹತ್ತಕ್ಕೆ ಹೊರಬಂದರು. ಊಟದ ಟೇಬಲ್ ಮೇಲೆ ಮಾಡಿದ್ದ ಅಡುಗೆ ಆಕರ್ಷಕವಾದ ಪಾತ್ರೆಗಳಲ್ಲಿ ಹಾಕಿ ಮುಚ್ಚಿಟ್ಟರು. ಗುಲಾಬಿ ಸುಗಂಧರಾಜ ಹೂಗುಚ್ಛ ತರಿಸಿ ಟೇಬಲಿನ ಎರಡೂ ಬದಿ ಜೋಡಿಸಿದರು. ವಿದೇಶದಿಂದ ತರಿಸಿದ್ದ ತಟ್ಟೆ, ಲೋಟಗಳು, ಸ್ಪೂನುಗಳು, ಬಟ್ಟಲುಗಳನ್ನು ತೆಗೆದಿಟ್ಟರು. ಎಲ್ಲಾ ಸರಿಯಾಗಿದೆಯೇ ಎಂದು ವಿವಿಧ ಕೋನಗಳಿಂದ ಪರೀಕ್ಷಿಸಿ ಫೋಟೋ ತೆಗೆದು ಮಗಳು ಅಳಿಯನಿಗೆ ವಾಟ್ಸಪ್ ಮಾಡಿದ್ದೂ ಆಯ್ತು. ಒಲೆಯ ಮುಂದೆ ನಿಂತು ಬೆವರಿದ್ದರಿಂದ ಮತ್ತೊಮ್ಮೆ ಸ್ನಾನ ಮಾಡಿ ರೇಷ್ಮೆ ಸೀರೆ, ಅದಕ್ಕೊಪ್ಪುವ ರವಿಕೆ, ಅದಕ್ಕೆ ಮ್ಯಾಚ್ ಆಗುವ ನಕಲಿ ಆಭರಣ ಧರಿಸಿ ಸಿದ್ಧವಾದರು. ಮಾಸಿದಷರ್ಟು ಸುಕ್ಕಾಗಿದ್ದ ಪಂಚೆಯೊಡನೆ ಕುಳಿತಿದ್ದ ಪತಿದೇವರಿಗೆ ಅಷ್ಟೋತ್ತರ ಪೂಜೆ ಮಾಡಿ ಹೊಸ ಜುಬ್ಬಾ, ಪೈಜಾಮಾ ಧರಿಸಿ ನೀಟಾಗಿ ತಲೆ ಬಾಚಿಕೊಳ್ಳಲು ಕಾರಣೀಭೂತರಾದರು. ಹನ್ನೆರಡಕ್ಕೆ ಬರಬೇಕಾಗಿದ್ದ ಬೀಗರು ಒಂದು ಘಂಟೆಯಾದರೂ ಕಾಣಿಸಿಕೊಳ್ಳಲಿಲ್ಲ. ಒಂದೂವರೆ ಘಂಟೆಯ ವೇಳೆಗೆ ವಾಹನ ದಟ್ಟಣೆಯ ಮೇಲೆ ಗೂಬೆ ಕೂರಿಸುತ್ತಾ ಬಿಸಿಲಿಗೆ ಬಸವಳಿದು ಒಳಬಂದರು. ಬಾಯೊಣಗಿದವರಿಗೆ ಎಳನೀರಿನ ವಿತರಣೆಯಾಯಿತು. ನಂತರ ಟೇಬಲನ್ನು ಅಲಂಕರಿಸಿದ ಬೀಗರು ಊಟ ಮಾಡಲು ಕುಳಿತರೆ ಸರೋಜಮ್ಮ ಬಡಿಸಲು ನಿಂತರು. ಬಲಕ್ಕೆ ಪಾಯಸದ ಸ್ಯಾಂಪಲ್

ಬಡಿಸಲಾಯ್ತು. ಹೆಸರು ಬೇಳೆ ಕೋಸಂಬರಿ ಹಾಕಿದೊಡನೆ ಎಂಥದ್ದೋ ವಾಸನೆ ಬಡಿಯಿತು. ಅದರ ಪಕ್ಕಕ್ಕೆ ಪಲ್ಯ ಬಿದ್ದೊಡನೆ ವಾಸನೆ ಗಾಢವಾಯ್ತು. ಸ್ವಲ್ಪ ವಿಚಲಿತರಾದ ಸರೋಜಮ್ಮ ಬಿಸಿಬೇಳೇಬಾತ್ ಬಡಿಸಲು ಸೌಟನ್ನು ಒಳತಳ್ಳಿ ಮೇಲಕ್ಕೆತ್ತಿದರೆ ಬಳುಕುವ ನಾಟ್ಯಮಯೂರಿಯಂತೆ ಬಿಸಿಬೇಳೆಯೂ ಬಳುಕುತ್ತಾ ಜಾರುತ್ತಾ ಪಾತ್ರೆಯೊಳಕ್ಕೇ ಬಿತ್ತು. ನೋಡುತ್ತಿದ್ದ ಅನುಭವಿ ಬೀಗಿತ್ತಿ "ಅಯ್ಯೋ, ಎಲ್ಲಾ ಹಳಸಿಹೋಗಿದೆ" ಎಂದು ತೀರ್ಪುಕೊಟ್ಟು ಮೇಲೆದ್ದರು. ಮೊಸರನ್ನ ಹುಳಿಹೆಂಡವಾಗಿ ಗುಳ್ಳೆಗಳೇಳುತ್ತಿದ್ದವು. ಒಟ್ಟಿನಲ್ಲಿ ಬಿಸಿಲಿಗೆ ಮಾಡಿದ್ದ ಅಡುಗೆಯೆಲ್ಲಾ ಕೆಟ್ಟು ಕುಲಗೆಟ್ಟುಹೋಗಿತ್ತು. ಹಸಿದಿದ್ದ ಬೀಗರನ್ನು ಸಮೀಪದ ರೆಸ್ಟೋರೆಂಟ್ಗೆ ಕರೆದೊಯ್ದು ಊಟ ಮಾಡಿಸಿ ಬೀಳ್ಕೊಟ್ಟರು. ಎಲ್ಲವನ್ನೂ ಗಮನಿಸುತ್ತಿದ್ದ ಸೂರ್ಯ ಸರೋಜಮ್ಮನ ಅತ್ಯಾತುರದ ಸ್ವಭಾವ ಕಂಡು ಕೇಕೆಹಾಕಿದ್ದು ಯಾರ ಕಿವಿಗೂ ಬೀಳಲೇ ಇಲ್ಲ.

****


ಕಲ್ಬುರ್ಗಿಯ ವಿಠಲ, ಬಳ್ಳಾರಿಯ ರಂಗಶಾಯಿ ಪ್ರತಿವರ್ಷ ಕುಟುಂಬದೊಂದಿಗೆ ಬೆಂಗಳೂರಿಗೆ ಬಂದು ಬೇಸಿಗೆ ರಜೆ ಕಳೆಯುವುದು ವಾಡಿಕೆ, ತಮ್ಮೂರಿನ ಬೇಸಿಗೆಯ ತಾಪ ತಪ್ಪಿಸಿಕೊಳ್ಳುವುದರೊಂದಿಗೆ ಮಕ್ಕಳಿಗೆ ಅಲ್ಲಿನ ವಿವಿಧ ಸುಂದರ ಸ್ಥಳಗಳನ್ನು ತೋರಿಸುವುದು ಅವರ ಗುರಿ.ಈ ವರ್ಷವೂ ಕೆಂಪೇಗೌಡ ರೈಲು ನಿಲ್ದಾಣದಲ್ಲಿ ಬಂದಿಳಿದರು. ಮರುಮುಂಜಾನೆಯೇ ಬಲು ಉತ್ಸಾಹದಿಂದ ಬನ್ನೆರುಘಟ್ಟದ ರಾಷ್ಟ್ರೀಯ ಉದ್ಯಾನವನಕ್ಕೆ ಹೊರಟರು. ಬಿಸಿಲ ಧಗೆ. ಕಣ್ಣು ಕೋರೈಸುವ ಸುಡು ಬಿಸಿಲು. ಎಷ್ಟು ಮಿನರಲ್‌ವಾಟರ್ ಬಾಟಲುಗಳನ್ನು ಖಾಲಿಮಾಡಿದರೂ ಪರ್ಸು ಹಗುರವಾಯಿತೇ ಹೊರತು ದಾಹ ತಣಿಯಲಿಲ್ಲ. ಎಲ್ಲಾ ಸಂಕಟವನ್ನು ಮೆಟ್ಟಿನಿಂತು ವನ್ಯಪ್ರಾಣಿಗಳನ್ನು ವೀಕ್ಷಿಸಲು ಅಲ್ಲಿನ ವಾಹನವೇರಿದರು. ಮರದ ನೆರಳಲ್ಲಿ ಕೊಂಬೆಯಿಂದ ಕೊಂಬೆಗೆ ನೆಗೆಯುತ್ತಿದ್ದ ಮಂಗಗಳ ಗುಂಪನ್ನು ಬಿಟ್ಟರೆ ಮತ್ತ್ಯಾವ ಪ್ರಾಣಿಯೂ ಕಣ್ಣಿಗೆ ಬಿದ್ದಿದ್ದರೆ! ಅವೆಲ್ಲಾ ಜಾಣತನದಿಂದ ತಮ್ಮತಮ್ಮ ತಾಣದಲ್ಲಿ ಅವಿತು ವಿಶ್ರಮಿಸಿಕೊಳ್ಳುತ್ತಾ ಯಾರಿಗೂ ದರ್ಶನ ನೀಡಲೇ ಇಲ್ಲ. ಅಲ್ಲಿ ಸುತ್ತಿ ಸುಣ್ಣವಾಗಿ ನಿತ್ರಾಣರಾಗಿ ಮನೆಗೆ ಬಂದರು.

"ಬೆಂಗಳೂರು ಗಿರಿಧಾಮದಂತೆ ತಂಪಾಗಿರುತ್ತೆ ಅಂತ ಬಂದೆವು. ಇದೂ ನಮ್ಮೂರಿನಂತೆಯೇ ಬಿಸಿಲಾಗಿದ್ದರೆ ಹಣ ಖರ್ಚು ಮಾಡಿ ಇಲ್ಲೇಕೆ ಬರಬೇಕು? ಇನ್ನು ಮೇಲೆ ಒದ್ದಾಡಿಕೊಂಡು ನಮ್ಮೂರಿನಲ್ಲಿಯೇ ಇದ್ದುಬಿಡುತ್ತೇವೆ" ಎನ್ನುತ್ತಾ ಮಾರನೇ ದಿನವೇ ವಾಪಸ್ಸು ಹೋಗಲು ರೈಲೇರಿದರು.

ಇದನ್ನು ಕಂಡ ಸೂರ್ಯದೇವ ಅವಾಕ್ಕಾದ. ಇದ್ರಲ್ಲಿ ನಂದೇನು ತಪ್ಪು? ಇದೆಲ್ಲಾ ನೀವೇ ಮಾಡ್ಕೊಂಡಿದ್ದು. ಮಾಡಿದ್ದುಣ್ಣೊ ಮಹಾರಾಯ ಎನ್ನುತ್ತಾ ತನ್ನ ಕಾಯಕ ಮುಂದುವರೆಸಿದ.

■

ನಿರ್ಮಾಪಕರ ಬಲವಂತಕ್ಕೆ ದಂಡ ಚಿತ್ರವನ್ನು ನೋಡಲು ಬೀಚಿ ಥಿಯೇಟರಿಗೆ ಹೋಗಿ ಕೂತು ಚನ್ನಾಗಿ ನಿದ್ದೆ ಮಾಡಿದರು. ಆಚೆ ಬಂದಾಗ ನಿರ್ಮಾಪಕರು ಈ ಚಿತ್ರದಲ್ಲಿ ನಿಮಗೆ ತುಂಬಾ ಮೆಚ್ಚುಗೆಯಾದ ಅಂಶ ಯಾವುದು ಅಂತ ಕೇಳಿದಾಗ ಬೀಚಿ ಹಿಂದೆ ಮುಂದೆ ನೋಡದೇ ಹೇಳಿದ್ದು ಇಂಟರ್‌ವಲ್ ಅಂತ.



# ಗಂಧೋಪಾಸನೆ

ಜ್ಯೋತಿ ರಾಜೇಶ್

ಯಾವ ಯಾವುದೋ ಉಪಾಸನೆಗಳನ್ನು ಕೇಳಿದ್ದೀವಿ, ಇದ್ಯಾವುದಪ್ಪ ಗಂಧೋಪಾಸನೆ ಅಂದ್ಕೊಂಡ್ರಾ? ಅದೇರಿ, ಎಲ್ಲಿ ಹೋದರೂ ನಮ್ಮ ನಾಸಿಕವೊಂದು ಯಾವಾಗಲೂ ಎಚ್ಚರವಾಗಿದ್ದು, ಎಲ್ಲ ಕಡೆಯೂ ಮೂಗು ತೂರಿಸಿ, ಆಘ್ರಾಣಿಸುತ್ತಲ್ಲ ಅದೇ ಗಂಧೋಪಾಸನೆ. ಇದು ಸುಗಂಧೋಪಾಸನೆಯೂ ಆಗಬಹುದು, ದುರ್ಗಂಧೋಪಾಸನೆಯೂ ಆಗಬಹುದು. ಯಾವುದು ನಮಗೆ ಸಿಗುತ್ತದೆಂಬುದು ಮಾತ್ರ ನಮ್ಮ ಆ ಸಮಯದ ಪುಣ್ಯ ವಿಶೇಷವಷ್ಟೆ.

ಮನೆಗಳಲ್ಲಿ ಬೆಳ್ಳಂ ಬೆಳಿಗ್ಗೆ ಮೊಬೈಲ್ನಲ್ಲೋ, ಅಲೆಕ್ಸಾದಲ್ಲೋ ಕೇಳುವ ಸುಪ್ರಭಾತದ ಜೊತೆಗೆ ಗೃಹಲಕ್ಷ್ಮಿ ಮಾಡುವ ಕಾಫಿ/ಚಹ/ಕಷಾಯದ ಘಮ ಇದೆಯಲ್ಲ. ಅದು ಎಲ್ಲರ ನಾಸಿಕಕ್ಕೆ ತಲುಪಿ, ಪ್ರತಿಯೊಬ್ಬರನ್ನೂ ಉತ್ತೇಜಿಸುವ ಗಂಧೋಪಾಸನೆಯೇ. ನಂತರ ದೇವರ ಮನೆಯ ದಿವ್ಯ ಸನ್ನಿಧಿಯಲ್ಲಿ ಪೂಜೆಯ ಸಮಯ ಹಚ್ಚುವ ತುಪ್ಪದ ದೀಪದ ಘಮ, ತೇಯುವ ಶ್ರೀಗಂಧದ ಘಮ, ನೈವೇದ್ಯ, ಮಂಗಳಾರತಿಯ ಘಮವೆಲ್ಲ ದಿವ್ಯಾನುಭೂತಿ ಕೊಡುವ ದೈವೀಕವಾದ ಗಂಧೋಪಾಸನೆ.


ಇನ್ನು ಮನೆಗಳಲ್ಲಿ ಉಪಯೋಗಿಸುವ ಸೋಪು, ಶಾಂಪೂ, ಟೂಥ್ ಪೇಸ್ಟಿನಿಂದ ಹಿಡಿದು, ಕೇಶಕ್ಕೆ ಲೇಪಿಸುವ ಎಣ್ಣೆ, ದೇಹಕ್ಕೆ ಪೂಸುವ ಸುಗಂಧ ದ್ರವ್ಯಗಳದ್ದೆಲ್ಲ ಇನ್ನೊಂದು ಬಗೆಯ ಆಹ್ಲಾದ ತರುವ ಸುಗಂಧೋಪಾಸನೆ.

ನಂತರ ಹೊಟ್ಟೆ ಪೂಜೆಗಾಗಿ ನಿತ್ಯ ಅಡುಗೆ ಮನೆಯಲ್ಲಿ ತಯಾರಿಸುವ, ದಿನಕ್ಕೊಂದು ಬಗೆಯ ವಿಧ ವಿಧ ತಿಂಡಿ–ತಿನಿಸುಗಳ, ಅಡುಗೆಯ, ಒಗ್ಗರಣೆಯ, ಬಾಯಲ್ಲಿ ನೀರೂರಿಸುವ ಖಾದ್ಯಗಳ ಗಂಧೋಪಾಸನೆ. ಕೆಲ ಹಬ್ಬ–ಹರಿದಿನ ಅಥವಾ ವಿಶೇಷ ದಿನಗಳಲ್ಲಂತೂ, ಪಾಕ ಗೃಹದಿಂದ ಬರುವ ಈ ಪರಿಮಳ, ಮನವನ್ನು ಪುಳಕಗೊಳಿಸುವುದು ಶತಃಸಿದ್ಧ. ಅದರಲ್ಲೂ ಸೊಗಸಾದ ಇಂಗಿನೊಗ್ಗರಣೆಯ ಪರಿಮಳ ಬಂದು ಬಿಟ್ಟರಂತೂ, ಅಡಿಗೆ ಮುಗಿದ ಸೂಚನೆ ಮೆದುಳಿಗೆ ತಲುಪಿ, ಹೊಟ್ಟೆ ತಾನಾಗೇ ತಾಳ ಹಾಕಲು ಆರಂಭಿಸುತ್ತದೆ. ಕೆಲವರ ಮನೆಯ ಅಡುಗೆ ಪರಿಮಳವಂತೂ, ಅಕ್ಕ~ಪಕ್ಕದ ಮನೆಯವರನ್ನೂ ತನ್ನೆಡೆಗೆಳೆಯುವಷ್ಟು ಸದೃಢವಾಗಿರುತ್ತೆ.

ಅದರಲ್ಲೂ ಈ ವಾಕಿಂಗ್ ಹೋಗುವಾಗ, ಈ ಗಂಧೋಪಾಸನೆಯ ಅನುಭವ ಹೆಚ್ಚು. ಹತ್ತು ಹೆಜ್ಜೆಗಳಿಗೊಂದು ರೀತಿಯ ವಾಸನೆ/ಸುವಾಸನೆ ಸಿಗುತ್ತ ಹೋಗುತ್ತೆ. ಕೆಲವೆಡೆ ವಾಕಿಂಗ್ ಪಾರ್ಕ್ ಎಂದಿರುತ್ತೆ. ಇನ್ನು ಜನ ದಟ್ಟಣೆ ಇರದೆಡೆ, ಹಳ್ಳಿಗಳಲ್ಲಿ ಅರಾಮಾಗಿ ವಾಯು ವಿಹಾರ ಮಾಡಬಹುದಾದರೂ, ಈ ಪೇಟೆಗಳಲ್ಲಿ ಅನಿವಾರ್ಯವಾಗಿ ವಾಸ ಮಾಡುವ ನಮ್ಮಂಥ ಪಾಮರರಿಗೆ ಯಾವಾಗಲೂ, ಬೇಕಾಗಲೀ, ಬೇಡವಾಗಲೀ, ಈ ಗಂಧದ ಉಪಾಸನೆ ಆಗುತ್ತಲೇ ಇರುತ್ತೆ.

ಹಣ್ಣಿನ ಅಂಗಡಿಯ ಮುಂದೆ ಹೋಗುವಾಗ, ಅದೂ ಮಾವಿನ, ಹಲಸಿನ ಹಣ್ಣಿನ ಸೀಜನ್ ಆದರಂತೂ ನಾಸಿಕಕ್ಕೆ ಖುಷಿಯೋ ಖುಷಿ. ಅದರ ಪಕ್ಕದಲ್ಲೇ ಹೂವಿನ, ಅದರಲ್ಲೂ ಮೊಲ್ಲೆ ಹೂವಿನ ಅಂಗಡಿ ಸಿಕ್ಕರೆ ಸ್ವರ್ಗಕ್ಕೆ ಮೂರೇ ಗೇಣು. ನಯನವು, ಆ ಸುವಾಸನೆಗೆ ಅರಿವಿಲ್ಲದೇ ಅರ್ಧ ನಿಮೀಲಿತವಾಗುತ್ತೆ. ಪಂಚೇಂದ್ರಿಯಗಳಲ್ಲಿ ನಾಸಿಕವೇ ಪರಮ ಪುಣ್ಯ ಮಾಡಿದ್ದು ಎನ್ನುವಷ್ಟು ಸಂಭ್ರಮವಾಗುತ್ತೆ. ಹೀಗೆಯೇ ದಾರಿಯುದ್ದಕ್ಕೂ ಇದೇ ಪರಿಮಳ ಬರುತ್ತಿದ್ದರೆ ಅದೆಷ್ಟು ಸುಖ ಅಂತೀರ. ಆದರೆ ಆ ಭಾಗ್ಯ, ಈ

ನಗರಗಳಲ್ಲಿ ಎಲ್ಲಿ? ಇಲ್ಲಿ ಹೆಜ್ಜೆಗೊಂದು ವಾಸನೆ ಬದಲಾಗುತ್ತಿರುತ್ತದೆ.



ಆದರೆ ಎಲ್ಲಕ್ಕಿಂತ ನನಗೆ ಅನ್ಯಾಯ ಮಾಡೋದು ಈ ದಾರಿ ಬದಿಯ ಚಾಟ್ಸ್ ಮತ್ತು ಬೇಕರಿಗಳ ಪರಿಮಳ ನೋಡಿ. ವಾಕಿಂಗ್ ಹೋಗುವಾಗಾದರೂ ಸರಿ ಅಥವಾ ಶಾಪಿಂಗ್ ಹೋದಾಗಾದ್ರೂ ಸರಿ. ಈ ಅಂಗಡಿಗಳನ್ನು ನೋಡಿದಾಗ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಬಹುದಾದರೂ, ಅಲ್ಲಿ ತಯಾರಾಗುವ ತಿನಿಸುಗಳಿಂದ ಹರಡುವ ಪರಿಮಳವಿದೆಯಲ್ಲ, ಅದರಿಂದಾಗುವ ಅಘಾತ ಅಷ್ಟಿಷ್ಟಲ್ಲ. ಅದು ನನ್ನ ಮನದ ನಿಯಂತ್ರಣವನ್ನೆಲ್ಲ ಕಿತ್ತು ಹಾಕಿ ಬಿಡುವಷ್ಟು ಶಕ್ತಿಯುತವಾದದ್ದು. ನಾಸಿಕ ಅದರ ಪರಿಮಳವನ್ನು ಆಸ್ವಾದಿಸೋದಷ್ಟೇ ಅಲ್ಲ, ಮೆದುಳಿಗೆ ಅದರ ಸೊಗಸನ್ನು ತಿಳಿಸಿ, ಅಲ್ಲಿಂದ ರಸನಕ್ಕೆ ಆ ತಿನಿಸಿನ ರುಚಿಯನ್ನು ನೋಡಲೇ ಬೇಕೆಂಬ ಆಸೆಯನ್ನು ಮೂಡಿಸುತ್ತದೆ. ಆಗ ನನಗೆ ನಾನೇ ಶಿಕ್ಷೆ ಕೊಟ್ಟುಕೊಳ್ಳುವುದಾಗುತ್ತೆ ಶಿಕ್ಷೆ ಯಾಕೆ ಅಂದ್ರಾ? ಮತ್ತೇನು ಮಾಡೋದು? ಬೇಕರಿಯಲ್ಲಿ ಕೊಂಡು ತಿನ್ನುತ್ತೇನಾದ್ರೂ, ಈ ದಾರಿ ಬದಿಯಲ್ಲಿನ ಪಾನಿ, ಭೇಲ್, ಮಸಾಲ ಮುಂತಾದ, ಪೂರಿ ಬಳಗವನ್ನು ತಿನ್ನದ ನಾನು, ಆಸೆ ತಡೆಯಲಾರದೇ ಮನೆಗೆ ಬಂದು, ಕಷ್ಟ ಪಟ್ಟು ಅವನ್ನೆಲ್ಲ ಮಾಡಿ ತಿಂದು ನನ್ನ ತ್ರಿ ಇಂದ್ರಿಯಗಳನ್ನು ಸಂತೃಪ್ತಿ ಪಡಿಸಲೇಬೇಕಲ್ಲ. ಅದೇನು ಸುಮ್ಮನೆ ಆಗುತ್ತ? ಎಷ್ಟು ಕೆಲಸ, ಖರ್ಚು. ಜೊತೆಗೆ ತೂಕ ಹೆಚ್ಚಾದ ಮಾನಸಿಕ ಹಿಂಸೆ ಬೇರೆ. ತಿನ್ನುವ ತನಕ ಮರೆಯಾದ ಡಯಟ್ ಕಾನ್ಷಿಯಸ್, ತಿಂದಾದ ಮರುಕ್ಷಣವೇ ಮನಸನ್ನು ಬಾಧಿಸುವುದು ಎಂಥ ವಿಪರ್ಯಾಸ!? ಇದೆಲ್ಲಕ್ಕೂ ಮೂಲ ಕಾರಣ ಆ ಗಂಧೋಪಾಸನೆಯೇ ಅಲ್ವೇ!.

ಆದರೆ, ಪ್ರಪಂಚದಲ್ಲಿ ಬರೀ ಒಳ್ಳೆಯದಷ್ಟೇ ಇಲ್ಲವಲ್ಲ, ಆಹಾ! ಎಂಥ ಅದ್ಭುತ ಸುವಾಸನೆ, ಎಂದು ಆನಂದಿಸುತ್ತ ಹೋಗುತ್ತಿರಬೇಕಾದರೇನೆ, ಅದರ ಪಕ್ಕದಲ್ಲೇ ಮಾರಲು ಕೆಲವೆಡೆ ಸಮುದ್ರದ/ನದಿಯ ತರಕಾರಿ ಇಟ್ಟುಕೊಂಡಿರುತ್ತಾರೆ ನೋಡಿ,.... ಅದನ್ನು ಸಮೀಪಿಸಿದ ತಕ್ಷಣ ಅದೆಷ್ಟು ರಸಭಂಗವಾಗುತ್ತದೆಂದರೆ,.... ನಾಸಿಕ ಯಾಕಾದರೂ ಇದೆಯೋ ಅನ್ನುವಷ್ಟು ಬೇಸರವಾಗುತ್ತೆ. ಇನ್ನು ಚರಂಡಿಯ ನೀರಿನ, ಸತ್ತ ಇಲಿ, ಪಕ್ಷಿ ಮುಂತಾದವುಗಳ ವಾಸನೆಯಂತೂ, ಈ ನಾಸಿಕವೆನ್ನೋದು ಯಾಕಾದ್ರೂ ಇದೆಯೋ!..... ಚರ್ಮದಿಂದಲೇ ಉಸಿರಾಟ ಪೂರ್ತಿಯಾಗೋ ಹಾಗಿದ್ರೆ ಎಷ್ಟು ಒಳಿತಿತ್ತು ಅನ್ನಿಸುವಂತೆ ಮಾಡುತ್ತೆ. ಬಸ್, ರೈಲು ನಿಲ್ದಾಣಗಳಲ್ಲಿ, ಪ್ರಯಾಣಿಸುವಾಗ ಪಕ್ಕದಲ್ಲಿ ಕುಳಿತ ಕೆಲವರದು ಸುಗಂಧ ಪೂಸಿತ ಸುವಾಸನೆಯಾದರೆ, ಇನ್ನು ಕೆಲವರದು ಹೊಟ್ಟೆಯಲ್ಲಿ ಸಂಕಟ ಉಂಟು ಮಾಡುವ, ಬೆವರಿನ, ಬಾಯಲ್ಲಿ ಅಗಿಯುವ, ಗುಟ್ಕಾ, ಪಾನ್ ಪರಾಗ್‌ನ

ದುರ್ವಾಸನೆ. ಇನ್ನು ಕೆಲವರದ್ದಂತೂ ಏನೆಂದೇ ಹೇಳಲಾಗದ, ಅಸಹ್ಯ ಹುಟ್ಟಿಸುವ ಕೆಟ್ಟ ವಾಸನೆ. ಸಾರ್ವಜನಿಕ ಶೌಚಾಲಯಗಳ ಹತ್ತಿರವೆಲ್ಲ ದುರ್ಗಂಧೋಪಾಸನೆ ಕಟ್ಟಿಟ್ಟದ್ದೇ. ಎಷ್ಟು ಸ್ವಚ್ಛತಾ ಆಂದೋಲನಗಳಾದರೂ ಇವು ಮಾತ್ರ ಬದಲಾಗೋದಿಲ್ಲ. ಎಲ್ಲ ಕಡೆಯೂ ಸ್ವಚ್ಛಗೊಳಿಸುವವರಷ್ಟೇ ಕೊಳಕು ಮಾಡುವವರೂ ನಮ್ಮ ಸಮಾಜದಲ್ಲಿರೋದೇ ಇದಕ್ಕೆ ಮೂಲ ಕಾರಣ. ಸ್ವಚ್ಛ ಭಾರತ್ ಅಂತ ನಾವುಗಳು ಸ್ವಚ್ಛ ಮಾಡುತ್ತಲೇ ಹೋಗೋದು, ಅಸ್ವಚ್ಛ ಭಾರತ್ ಅಂತ ಈ ಬುದ್ಧಿಗೇಡಿಗಳು ಕೊಳಕು ಮಾಡುತ್ತ ದುರ್ವಾಸನೆಯನ್ನು ಹರಡೋದು ತುಂಬಾ ಸ್ಥಳಗಳಲ್ಲಿ ಕಾಣ ಬರುತ್ತೆ. ಮೊದಲಿನ ಪರಿಸ್ಥಿತಿಗೆ ಹೋಲಿಸಿದರೆ ಈಗ ಇದೆಷ್ಟೋ ಕಡಿಮೆ ಎನ್ನುವುದು ಸ್ವಲ್ಪ ಸಮಾಧಾನವಷ್ಟೆ.

ಇನ್ನು 'ಊಟ ತನ್ನಿಚ್ಛೆ, ನೋಟ ಪರರಿಚ್ಛೆ' ಎನ್ನುವ ಗಾದೆಯಂತೆ, ಗಂಧೋಪಾಸನೆಯೂ ಅವರವರಿಚ್ಛೆ. ಕೆಲವೊಂದು ಪರಿಮಳ ಎಲ್ಲರಿಗೂ ಇಷ್ಟವಾಗುತ್ತದಾದ್ರೂ, ಎಲ್ಲವೂ ಎಲ್ಲರಿಗೂ ಇಷ್ಟವಾಗಬೇಕೆಂದೇನಿಲ್ಲ. ನನಗೆ ಮಲ್ಲಿಗೆಯ, ತುಂಬ ಮೈಲ್ಡ್ ಆದ ಸೆಂಟ್ ನ ಪರಿಮಳವೊಂದು ಬಿಟ್ಟು ಮತ್ತೆಲ್ಲ ಪರಿಮಳ ದ್ರವ್ಯವೂ ವಾಕರಿಕೆ ಬರಿಸುವ ವಾಸನೆಯೇ. ಕೆಲವರಿಗೆ ಸಂಪಿಗೆಯ ಗಾಢ ಪರಿಮಳ ತಲೆನೋವು ಬರಿಸಿದರೆ ಇನ್ನು ಕೆಲವರಿಗೆ ಪೆಟ್ರೋಲ್ ಪರಿಮಳ ಕೂಡ ಇಷ್ಟ. ಈ ಧೂಮ ಪಾನಿಗಳಲ್ಲೇ ಕೆಲವರಿಗೆ ಅದರ ವಾಸನೆ ಆಗದಿರೋದು ಅತ್ಯಂತ ದೊಡ್ಡ ವಿಪರ್ಯಾಸ. ಅವರಿಗೆ ತಾವು ಸೇದುವಾಗ ಬಿಟ್ಟು ಬೇರೆ ಸಮಯದಲ್ಲಿ ಆ ವಾಸನೆ ಆಗೋಲ್ವಂತೆ, ವಿಚಿತ್ರ ಅಲ್ವ!.....

ಇನ್ನು ಕೆಲವರಿದ್ದಾರೆ, ಸುಗಂಧ, ದುರ್ಗಂಧ ಎರಡಕ್ಕೂ ವಾಸನೆ ಅಂತಲೇ ಹೇಳಿ ನನಗೆ ಆಶ್ಚರ್ಯ ಉಂಟು ಮಾಡುವರು. ಎಷ್ಟೋ ಜನರಿಗೆ ವಾಸನೆ ಅಂದರೆ ಕೆಟ್ಟದ್ದೂ, ಒಳ್ಳೇದೂ ಎರಡೂ ಇರುತ್ತೆ, ದುರ್ಗಂಧಕ್ಕೆ ಕೆಟ್ಟ ವಾಸನೆ, ಸುಗಂಧಕ್ಕೆ ಪರಿಮಳ/ಸುವಾಸನೆ ಎಂದು ಹೇಳಿ ಅಂತ ತಿದ್ದಿದ್ದೇನೆ ಕೂಡ.... ಆಗ ಕೋಪದಿಂದ ಅವರ ನಾಸಿಕ ಕೆಂಪಾಯ್ತು ಅಂತ ಮಾತ್ರ ಗಮನಿಸಲು ಹೋಗಲ್ಲ.

ಹೀಗೆ ಹೇಳ್ತಾಹೋದರೆ ಈ ಗಂಧೋಪಾಸನೆಯ ಚರಿತ್ರೆ ಮುಗಿಯುವುದಲ್ಲ. ಇದನ್ನ ನಿಮಗೆ ಹೇಳೋದ್ರಲ್ಲೇ ಮಗ್ನಳಾಗಿ, ಅಡುಗೆ ಮನೆಯನ್ನು ಮರೆತ ಫಲವಾಗಿ, ಅಲ್ಲಿಂದ ಸೀದು ಹೋದ ಗಂಧ ನಾಸಿಕವನ್ನಡರುತ್ತಿದೆ. ನೀವೂ ಏನಾದ್ರೂ ಸ್ಟೌ ಮೇಲಿಟ್ಟಿದ್ದರೆ, ಹೋಗಿ ನೋಡಿ. ■



# ನಾನು ಮೋನಾಲಿಸಪ್ಪಾ...

ಎಚ್. ಗೋಪಾಲಕೃಷ್ಣ

ನಾನು ಮೊನಾಲಿಸಾಪ್ಪ ಆದ ಕತೆ ನಿಮಗೆ ಹೇಳಿದ ನೆನಪು ನನಗಿಲ್ಲ. ನಿಮಗೂ ಅದನ್ನು ಕೇಳಿದ ನೆನಪು ಇರಲಾರದು ಅಂತ ನನ್ನ ನಂಬಿಕೆ. ಈಗ ನಿಮಗೆ ಆ ಕತೆ ಒಪ್ಪಿಸಲೇ? ಅದಕ್ಕೆ ಮೊದಲು ಯಾರು ಈ ಮೊನಾಲಿಸಾ ಅಂತಾ ಹೇಳಿಬಿಡುತ್ತೇನೆ, ಒಂದೇ ನಿಮಿಷ ಕೇಳಿಸ್ಕೊಳ್ಳಿ. ಇಟಲಿ ದೇಶದ ಚಿತ್ರಕಾರ ಡ ವಿಂಚಿ ಬರೆದ ಹಲವು ಸಹಸ್ರ ಚಿತ್ರಗಳಲ್ಲಿ ಈ ಮೊನಾಲಿಸಾ ಸಹಾ ಕಾಣಿಸುತ್ತಾಳೆ. ಇದು ಅಂದರೆ ಈ ಮೊನಾಲಿಸಾ ಚಿತ್ರ ಎಷ್ಟು ಫೇಮಸ್ ಅಂದರೆ ಈ ಚಿತ್ರದ ಬಗ್ಗೆ ಅಚ್ಚಾಗಿರುವ, ಚಿತ್ರ ಕುರಿತು ಬರೆದಿರುವ, ಚಿತ್ರದ ವಿಮರ್ಶೆ ಮಾಡಿರುವ ಲೇಖನಗಳು ಜಗತ್ತಿನ ಮತ್ಯಾವುದೇ ಚಿತ್ರದ ಬಗ್ಗೆ ಆಗಿಲ್ಲವಂತೆ! ಈಗ ಅಂತಹ ದೊಡ್ಡ ಸಂತೆಗೆ ನನ್ನದೂ ಒಂದು ಕೊಡುಗೆ ಸಲ್ಲಿಕೆ ಆಗುತ್ತಿದೆ.

ಐವತ್ತರ ಆಸುಪಾಸಿನಲ್ಲಿ ಹಲ್ಲಿನ ತೊಂದರೆ ಆರಂಭ ಆಗುವುದು ನಮ್ಮ ವಂಶದಲ್ಲಿ ಅತಿ ಸಹಜ. ನಿಮ್ಮ ವಂಶದಲ್ಲಿ ಸಹ ಇದು ಹಾಗೇ ಇರಬಹುದು. ಕೆಲವು ಜೀನ್ಸ್‌ನಲ್ಲಿ ಇದು ಇನ್ನೂ ಬೇಗ ಆರಂಭ ಅಂದರೆ ಮೂವತ್ತಕ್ಕೇ ಹಲ್ಲು ಕೀಳಿಸಿ ಸುಖ ಪಡುತ್ತಾರೆ. ಆದರೆ ಮತ್ತೆ ಕೆಲವರಲ್ಲಿ ಇದು ತುಂಬಾ ಅಂದರೆ ತುಂಬಾ ಲೇಟು. ಈಗ ಅಂತಹ ಒಬ್ಬ ದಂತ ಚಿರಂಜೀವಿಯ ಕತೆ. ಮೊನ್ನೆ ಒಬ್ಬ ನನ್ನ ಸಹೋದ್ಯೋಗಿ ಸಿಕ್ಕಿದ್ದ. ನನಗಿಂತ ಐದಾರು ವರ್ಷ ಮೊದಲೇ ಸೂರ್ಯನ ಬೆಳಕು ಕಂಡವನು. ಈಗಲೂ ಕೆನ್ನೆ ತುಂಬಿಕೊಂಡು ಡಬಲ್ ಚಿನ್ ಅಂತಾರಲ್ಲಾ ಹಾಗಿದ್ದಾನೆ. ಅವನನ್ನು ನೋಡಿದರೆ ನನಗೆ ಖುಶಿ ಆಗುತ್ತೆ, ಕೆನ್ನೆ ಡುಮ್ಮಗಿದೆ ಎಷ್ಟು ಸುಲಭವಾಗಿ ಅವನು ಶೇವ್ ಮಾಡ್ಕೋತಾನೆ ಅಂತ. ಸಿಕ್ಕಿದವನು ರಸ್ತೆಯ ಮಧ್ಯೆ ನಿಂತು ಬಾಯಿ ತುಂಬಾ ತುಂಬಿರುವ ಹಲ್ಲು ತೋರಿಸಿ ಒಂದೊಂದೇ ಹಲ್ಲಿನ ಕತೆ ಹೇಳಿದ–,ಹನ್ನೆರಡು ಗಂಟೆ ಇಂದ ಮೂರೂವರೆ ತನಕ. ಯಾವ ಹಲ್ಲು ಯಾವ ಡಾಕ್ಟರು ನೋಡಿದ್ದು ಇಂದ ಹಿಡಿದು ಯಾವ ಡಾಕ್ಟರು ರೂಟ್ ಕೆನಾಲ್ ಮಾಡಿದರು ಅನ್ನುವ ಪ್ರತಿ ವಿವರ ಡೇಟ್ ಮತ್ತು ಗಂಟೆ ಸಮೇತ ಹೇಳಿದ. ಅವನ ಎಲ್ಲಾ ಹಲ್ಲು ಗಳು ಇನ್ನೂ ಸೊಗಸಾಗಿವೆ ಮತ್ತು ಡಜನ್ ಡಜನ್ ಚಕ್ಕಿ ಕೋಡುಬಳೆ ಒಟ್ಟಿಗೆ ತಿನ್ನುತ್ತಾನೆ. ಅವನ ಕತೆ ಕೇಳಿ ಹೊಟ್ಟೆ ಉರಿದು ಹೋಯಿತು. ಮುಂದಿನ ಜನ್ಮದಲ್ಲಿ ನಿನಗೆ ಹಲ್ಲು ಹುಟ್ಟದಿರಲಿ ಅಂತ ಮನಸಿನಲ್ಲೇ ಶಾಪ ಕೊಟ್ಟೆ. ಖಂಡಿತ ಅವನಿಗೆ ಮುಂದಿನ ಜನ್ಮದಲ್ಲಿ ಒಂದೇ ಒಂದು ಹಲ್ಲೂ ಹುಟ್ಟೋದಿಲ್ಲ, ನೋಡಿ ಬೇಕಾದರೆ. ಈಗ ಅವನಿಗೆ ಶಾಪ ಯಾಕೆ ಕೊಡಬೇಕಾಯಿತು ಅನ್ನುವ ಕತೆ:..

ಐವತ್ತರ ಆಸು ಪಾಸಿನಲ್ಲಿ ಹಲ್ಲಿನ ತೊಂದರೆ ಶುರು ಅಂದೆ ಅಲ್ವೇ. ನಮ್ಮ ಹಿಂದಿನ ಪೀಳಿಗೆಗೆ ಹೀಗೆ ನೋವು ಶುರು ಆದಾಗ ಮೊದಲು ಮನೆ ವೈದ್ಯ, ಸಂಸಾರದಲ್ಲಿ ಹಿರಿಯರು ಹೇಳಿದ ವೈದ್ಯ ಮಾಡುತ್ತಿದ್ದರು. ಇದು ನೂರಕ್ಕೆ ಇನ್ನೂರು ಫೈಲ್ ಕೇಸು. ಮನೆ ವೈದ್ಯ ಹಿರಿಯರ ವೈದ್ಯ ಬಗ್ಗೆ ಇನ್ನೊಮ್ಮೆ ಹೇಳ್ತೀನಿ. ಈಗ ಟು ದಿ ಪಾಯಿಂಟ್... .ಅದು ಸರಿ ಹೋಗದೇ ಇದ್ದಾಗ ನೆಂಟರು ಇಷ್ಟರು ಹೇಳಿದ ವೈದ್ಯ. ಇದೂ ಸಹ ಮೊದ ಲಿನದರ ಹಾಗೆ ಹಳ್ಳ ಹಿಡಿದಾಗ ಹಲ್ಲಿನ ಡಾಕ್ಟ್ರ ಹತ್ತಿರ ಹೋಗೋದು ಇತ್ತು. ಸಾಮಾನ್ಯವಾಗಿ ಚಿಕ್ಕ ಪುಟ್ಟ ಹಳ್ಳಿ, ಊರಿನಲ್ಲಿ ಓದಿದ ಹಲ್ಲಿನ ಡಾಕ್ಟರು ಇರುತ್ತಿರಲಿಲ್ಲ. ಯಾರೋ ಕೆಲವರು ಹಲ್ಲು ಕಿತ್ತು ಕಿತ್ತು ಅದರ ಅಭ್ಯಾಸದ ಮೇಲೆ ಹಲ್ಲಿನ ಡಾಕ್ಟರು ಅಂತ ಅನಿಸಿಕೊಳ್ಳೋರು. ಅವರ ಹತ್ತಿರ ಹಲ್ಲು ನೋವು ಅಂತ ಹೋದ ಕೂಡಲೇ ಕುರ್ಚಿಯ ಮೇಲೆ ಕೂಡಿಸಿ ಯಾವ ಹಲ್ಲು ನೊಯ್ತಿದೆ ಅಂತ ಒಂದು ಸ್ಟೀಲ್ ರಾಡ್‌ನಲ್ಲಿ ಕುಟ್ಟಿ ಕುಟ್ಟಿ ಪರೀಕ್ಷೆ ಮಾಡ್ತಾ ಇದ್ದರಾ? ಆಮೇಲೆ ಇಕ್ಕಳ ತಗೊಂಡು ಅದರಿಂದ ಹಲ್ಲು ಹಿಡಿದು ಅಲ್ಲಾಡಿಸಿ ಕಿತ್ತು ಬಿಡೋ ರು! ಇದು ಅನಸ್ತೇಶಿಯಾ ಬರುವ ಮೊದಲು.




ಇಕ್ಕಳದಿಂದ ಹಲ್ಲು ಕಿತ್ತಾಗ ಆಗುವ ನೋವು ನೆನೆಸಿಕೊಂಡು ಸುಮಾರು ಜನ ಹಲ್ಲು ಕಿಳಿಸುವ ಯೋಚನೆ ಮಾಡ್ತಾ ಇರ್ಲಿಲ್ಲ! ನೋಯುತ್ತಿರುವ ಹಲ್ಲಿನ ಮೇಲೆ ಹೊಗೆ ಸೊಪ್ಪು ಇಟ್ಟು ಜಗೀತಾ ಜಗೀತಾ ನೋವು ಕಡಿಮೆ ಆದ ಮನಸ್ಥಿತಿ ತಲುಪ್ತೋವು, ಇದು ನಮ್ಮ ಹಿಂದಿನ ಪೀಳಿಗೆ. ನಮ್ಮ ಪೀಳಿಗೆಗೆ ಬನ್ನಿ. ಹಲ್ಲಿನ ಆರೋಗ್ಯ ಹಾಗೂ ಚಿಕಿತ್ಸಾ ಕ್ರಮ ಹೆಮ್ಮರವಾಗಿ ಬೆಳೆಯಿತು ಮತ್ತು ಮೊದಲು ಹಲ್ಲು ನೋವಿ ಗೆ ಹಲ್ಲು ಕೀಳಿಸೋದು ಒಂದೇ ದಾರಿ ಅನಿಸಿದ್ದು ಈಗ ಸಾವಿರ ಹೊಸ ಹಾದಿ ಸಿಕ್ತು. ಒಮ್ಮೆ ಹುಟ್ಟಿದ ಹಲ್ಲು ಕೊನೆಯವರೆಗೆ ಎನ್ನುವ ಧ್ಯೇಯ ವಾಕ್ಯ ಹುಟ್ಟಿತು. ಇದರ ಪರಿಣಾಮ ಅಂದರೆ ಹಲ್ಲುನೋವು ಅಂತ ಡಾಕ್ಟರ ಬಳಿ ನೀವು ಹೋದರೆ ಅವರು ಸೀದಾ ಇಕ್ಕಳ ತಗೊಳ್ಳೋದಿಲ್ಲ! ಎಷ್ಟೋ ದಂತ ಡಾಕ್ಟರ ಬಳಿ ಇಕ್ಕಳವೇ ಇರೋಲ್ಲ ಅಂತ ಒಂದು ಜೋಕು ಈಗ ಹುಟ್ಟಿದೆ. ಬದಲಿಗೆ ಎಕ್ಸ್‌ರೇ ಪಕ್ಸ್ ರೇ ಅಂತ ತೆಗೆಸ್ತಾರೆ ಮತ್ತು ರೂಟ್ ಕನಾಲ್ ಚಿಕಿತ್ಸೆ ಮಾಡ್ತಾರೆ .ರೂಟ್ ಕೆನಾಲ್ ಚಿಕಿತ್ಸೆ ಆದರೆ ಹಲ್ಲು ಮರುಜನ್ಮ ಪಡೆಯುತ್ತದೆ ಅಂತ ಹಲ್ಲು ಡಾಕ್ಟರ ನಂಬಿಕೆ. ಇದೇ ನಂಬಿಕೆ ಹಲ್ಲುನೋವು ಅನುಭವಿಸೋರ ನಂಬಿಕೆ ಸಹ ಆಗಿದೆ. ಇದು ಮೊದಮೊದಲು ನಿಜ. ಆದರೆ ಇನ್ನೂ ವಯಸಾಗುತ್ತಾ ರೂಟ್ ಕೆನಾಲ್ ಆಗಿದ್ದ ಹಲ್ಲು ಗಳು ಚಕ್ಕುಲಿ ಕೋಡುಬಳೆ ತಿನ್ನಬೇಕಾದರೆ ಅರ್ಧಕ್ಕೆ ಮುರಿದು ಬಾಯಲ್ಲೇ ಕೋಡುಬಳೆ ಜತೆ ಪುಡಿಯಾಗದೆ ಹೋಗಿ ಬಾಯಲ್ಲೇ ಕಲ್ಲಿನ ಹಾಗೆ ಉಳಿದಾಗ, ಆಚೆ ತೆಗೆದು ಕನ್ನಡಕ ಹಾಕಿಕೊಂಡು ಟೆಸ್ಟ್ ಮಾಡಿದಾಗಲೇ ಹಲ್ಲು ಅರ್ಧ ಗೋವಿಂದ ಅಂತ ಗೊತ್ತಾಗೋದು! ಹೀಗೆ ಗೋವಿಂದ ಆದರೆ ಏನು ಮಾಡುತ್ತೀರಿ ಅಂದರೆ ನೋವು ಇಲ್ಲ ಅಂದರೆ ದೆವ್ವದ ಕಾಟ ಇಲ್ಲ ಅಂತಾ ಹಾಯಾಗಿ ಇರುವಿರಿ. ಆದರೆ ನಿಮ್ಮ ವಿಧಿ ನಿಮ್ಮನ್ನು ಹಾಯಾಗಿರಲು ಬಿಡುತ್ತದೆಯೇ..?ಅದು ಹೊಂಚು ಹಾಕಿ ಕಾಯುತ್ತೆ. ನಿಮ್ಮಾಕೆಯ ಬಳಿಯಲ್ಲಿ ನೀವು ಅರ್ಧ ಹಲ್ಲು ಗೋವಿಂದ ಆದ ಕತೆಯನ್ನ ಯಾವುದೋ ವೀಕ್ ಮೊಮೆಂಟ್ ನಲ್ಲಿ ಹೇಳ್ತೀರಿ ತಾನೇ..? ಸರಿ, ಆಕೆ ದಿವಸಕ್ಕೆ ಹತ್ತು ಸಲ 'ಬನ್ನಿ ಹಲ್ಲಿನ ಡಾಕ್ಟರ ಹತ್ತಿರ ಹಲ್ಲು ತೋರಿಸೋಣ' ಅಂತ ಪ್ರೆಶರ್ ಹಾಕುತ್ತಾಳೆ. ಈ ಪ್ರೆಶರ್‌ಗೆ ಯೀಲ್ಡ್ ಆಗಲೇ ಬೇಕು ತಾನೇ! ನಾನೂ ಹಾಗೇ ಯೀಲ್ಡ್ ಆಗಿದ್ದು. ಆಮೇಲೆ ಡೆಂಟಲ್ ಡಾಕ್ಟ್ರ ಹತ್ತಿರ ಹೋದೆ ನಾ,. ಅವರು ಒಂದೂವರೆ ಗಂಟೆ ಬಾಯನ್ನ ಆ ಅಂತ ಅಗಲಿಸಿ ಎಷ್ಟು ಹಲ್ಲು ಅರ್ಧ ಮುರಿದಿದೆ, ಯಾವುದು ಮುಕ್ಕಾಲು ಹೋಗಿದೆ, ಯಾವುದಕ್ಕೆ ಇನ್ನೂ ಆಯಸ್ಸು ಇದೆ ಅಂತ ಲೆಕ್ಕ ಹಾಕಿದ್ರಾ..? ಲೆಕ್ಕ ಹಾಕಿ 'ಇರಿ ಒಂದು ಎಕ್ಸ್‌ರೇನೂ ತೆಗೆಯಾನ' ಅಂದ್ರಾ? ಅದೂ ಆಯ್ತಾ. ಬನ್ನಿ ಕೂತ್ಕಳಿ ಅಂದರು. 'ನೋಡಿ, ಎಂಟು ಹಲ್ಲು ಅರ್ಧ ಮುರಿದದೆ, ಆರು ಹಲ್ಲು ಮುಕ್ಕಾಲು ಹೋಗದೆ, ಮಿಕ್ಕಿದ್ದು ಬೇಸಗೊಂಡವೆ. ಎರಡು ಹಲ್ಲು ಉಳಿಸ್ಕೋ ಬೋದು. ಮೊದಲು ಇವನ್ನ ತೆಗಿಬೇಕು' ಅಂದ್ರ... 'ಸರಿ ಸಾರ್' ಅಂತ ಅವರು ಹೇಳಿದ

ದಿವಸ ಹೇಳಿದ ಸಮಯಕ್ಕೆ ಅರ್ಧ ಗಂಟೆ ಮೊದಲೇ ಅವರ ಶಾಪ್ ಸೇರಿದೇನಾ?, ದಿನಕ್ಕೆ ಇಷ್ಟು ಅಂತ ಲೆಕ್ಕ ಹಾಕಿ ಮಧ್ಯೆ ಮಧ್ಯೆ ಬ್ರೇಕ್ ಕೊಟ್ಟು ಒಂದು ತಿಂಗಳಲ್ಲಿ ಬಾಯನ್ನು ಎರಡು ಹಲ್ಲು ಬಿಟ್ಟು ಪೂರ್ತಿ ವಾಷ್ ಔಟ್ ಮಾಡಿದ್ರಾ... ಆಗಲೇ ನನಗೆ ಮೊನಾಲಿಸಪ್ಪ ಅಂತ ನನ್ನ ಬಂಧು ನಾಮಕರಣ ಮಾಡಿದ್ದು. ಮೊನಾಲಿಸಾ ನಕ್ಕ ಹಾಗೆ ಇರುವ ಆಕೆಯ ಪೇಂಟಿಂಗ್ ತರಹ ನಾನು ಕಾಣ್ತೀನಿ ಅಂತ ಅವರ ಅನಿಸಿಕೆ. ಮೊನಾಲಿಸಾ ಹೆಂಗಸು, ನೀನು ಗಂಡಸು. ಆದ್ದರಿಂದ ನೀನು ಮೊನಾಲಿಸಾಪ್ಪ ಅಂತ ಹೊಸಾ ಹೆಸರು ಇಟ್ಟರು. ಇದೇ ಸಮಯದಲ್ಲೇ ಬಾಯಿ ತುಂಬಾ ಹಲ್ಲು ಇನ್ನೂ ಇರುವ ಗೆಳೆಯ ಸಿಕ್ಕಿ ಅವನ ಒಂದೊಂದೂ ಹಲ್ಲಿನ ಕತೆ ಹೇಳಿ ನನ್ನ ಕೈಲಿ ಶಾಪ ಹಾಕಿಸಿಕೊಂಡಿದ್ದು...!

ಬಾಯಿ ತುಂಬಾ ಕಟ್ಟಿಸಿದ ಹಲ್ಲು ತುಂಬಿಸಿಕೊಂಡಿದ್ದು ಮತ್ತು ಹಲ್ಲು ಇಂಪ್ಲಾಂಟ್ ಮಾಡಿಸಿಕೊಂಡ ಕತೆ ಇನ್ನು ಯಾವಾಗಲಾದರೂ ಸಿಕ್ತೀರಲ್ಲಾ ಆಗ.......

■

## ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.

"ಈಗ ನೋಡು, ಅದಕ್ಕೆ ಈ ಕಡೆ ಬರೋದು ಬೇಡ ಓಡಬೇಕಾಗ್ತದೇಂದೆ............"



# ರೆಸೊಲ್ಯೂಷನ್ ರೆವಲ್ಯೂಷನ್

ಕವಿತಾ ಹೆಗಡೆ ಅಭಯಂ

**"ಪಥ್ಯವೇ ನಮ್ಮ ತಂದೆ ತಾಯಿ**

**ಪಥ್ಯವೇ ನಮ್ಮ ಬಂಧು ಬಳಗ**

**ಪಥ್ಯ ಪಾಲನೆಗೆ ತಪ್ಪಿ ನಡೆದರೆ**

**ಮೆಚ್ಚನಾ ಪರಮಾತ್ಮನು"**

ಎಂದು ಹೊಸ ವರ್ಷದ ಹಿಂದಿನ ದಿನ ಡೇಂಜರಸ್ ರೆಸೊಲ್ಯೂಷನ್ ಒಂದನ್ನು ಮಾಡಿಯೇ ಬಿಟ್ಟೆ. ಅದನ್ನು ಮುರಿಯೋದಿಲ್ಲ ಎಂದು ಎರಡನೇ ರೆವಲ್ಯೂಷನರಿ ರೆಸೊಲ್ಯೂಷನ್ ಕೂಡ ಘೋಷಣೆ ಮಾಡಿ ಪೆದ್ದ ಮುಖ ಮಾಡಿ ಕುಳಿತೆ. ಅದೇ ರಾತ್ರಿ ಹೊಸ ವರ್ಷದ ಆಚರಣೆಗೆಂದು ಅಪ್ಪ ಮಗಳು ರಸಭರಿತವಾದ ದೊಡ್ಡ ಕೇಕ್ ಮತ್ತು ಆಲೂ ಚಿಪ್ಸ್ ತಂದು ಅರೇಂಜ್ ಮಾಡತೊಡಗಿದರು. ಅವರ ಫ್ರೆಂಡ್ಸ್ ಕೂಡ ಬಂದು ವಿಶೇಷ ಖಾದ್ಯ, ಪೇಯಗಳಿಂದ ಚಂದಮಾಮನಂಥ ರೌಂಡ್ ಟೇಬಲ್ಲಿನ ಮೇಲೆ ಅಲಂಕಾರಿಕವಾಗಿ ಜೋಡಿಸತೊಡಗಿದಾಗ ರೆಸೊಲ್ಯೂಷನ್ ಮಾಡಿದ್ದನ್ನೇ ಮರೆತು...

"ವಾವ್! ವಾಟ್ ಅ ಸರ್ಪ್ರೈಸ್!. ಥ್ಯಾಂಕ್ಸ್" ಎಂದು ಥೈ ಥಕಾ ಕುಣಿಯುವುದನ್ನು ನೋಡಿ ಮಗಳು ಯಾರು, ತಾಯಿ ಯಾರು ಎನ್ನುವುದು ನಮ್ಮ ಮನೆಯವರಿಗೂ ಮರೆತು ಅವರಿಗೂ ಜೋಷ್ ಬಂದು ಡ್ಯಾನ್ಸ್ ಬಾರದೆ ಇದ್ದರೂ  ಡಾನ್ಸ್ ಮಾಡಲು ಶುರು ಹಚ್ಚಿಕೊಂಡರು. ಅವರು ತಮ್ಮ ಸಿಗ್ನೇಚರ್ ಸ್ಟೆಪ್ ಆದ ಪೆಂಗ್ವಿನ್ ಸ್ಟೆಪ್, ಆಸ್ಟ್ರಿಚ್ ಸ್ಟೆಪ್, ಸೀಲ್ ಸ್ಟೆಪ್ ಹಾಕಿ ಡ್ಯಾನ್ಸ್ ಮಾಡುವಾಗ "ವಾಹ್, ಸೂಪರ್ ಪಪ್ಪಾ, ಸೂಪರ್, ನೀವು ನಿಜ್ವಾಗ್ಲೂ ಪೆಂಗ್ವಿನ್ ಮರೀನೇ, ಆಸ್ಟ್ರಿಚ್ ಮರೀನೇ, ಸೀಲ್ ಮರೀನೇ" ಎಂದು ಚಪ್ಪಾಳೆ ಹಾಕಿ ಇನ್ನಷ್ಟು ಪ್ರೋತ್ಸಾಹ ಕೊಟ್ಟಳು. ಅವರ ನೃತ್ಯ ನೋಡಿ ಫ್ರೆಂಡ್ಸ್ ಕೂಡ ಕಂಡ ಕಂಡ ಹಾಗೆ ನರ್ತಿಸಿ ತಾವೂ ಚಪ್ಪಾಳೆ ಗಿಟ್ಟಿಸಿದರು.

ಡ್ಯಾನ್ಸ್ ಮಾಡಿದ್ದು ಅವರಾದರೂ ಯಾವಾಗ ನೃತ್ಯಪ್ರದರ್ಶನ ಮುಗಿಯುತ್ತೋ ಅಂತ ಕಾದು ಕೂತಿದ್ದು ನಾನು.

**"ಬಗೆಬಗೆಯ ಪಕ್ವಾನ್ನಗಳು ಕೈಬೀಸಿ ಕರೆಯೆ**

**ಕರೆ ಕೇಳದಂತಿರುವ ಮರುಳ**

**ನೀನಾಗಬಹುದೇ?"**

**ಎಂದು ನನಗೆ ನಾನೇ ಹೇಳಿಕೊಂಡು ಕಾಯುತ್ತಿದ್ದೆ.**

ಅಂತೂ ನೃತ್ಯ ಪ್ರದರ್ಶನ ಮುಗೀತು. ಹಾಡು, ಅಂತ್ಯಾಕ್ಷರಿ ಶುರುವಾದವು.

"ಹೇ ಭಗವಂತಾ! ಹಸಿದ ಹೊಟ್ಟೆಗೆ ಕೇಕು ಚಿಪ್ಸು ತುಂಬಿ ಝಿಪ್ ಹಾಕು ಅಂದರೆ ಕಂಠ ಶೋಷಣೆ ಮಾಡಿಕೊಳ್ಳುತ್ತಿದ್ದರಲ್ಲಾ"

ಎಂದು ಕೆಟ್ಟ ಕೋಪ ಬಂತು. ಬಂದ ಸಿಟ್ಟಿಗೆ ಒಂದು ಹಾಡೂ ನೆನಪಾಗದೆ "ಹಿ ಹಿ..ಹಿ ನಾನು  ಎಲ್ರದೂ ಪಾರ್ಟಿ... ಅಲ್ಲಲ್ಲ... ಯಾರದೂ ಅಲ್ಲ ; ಅಲ್ಲಲ್ಲ... ಅಂಪಾಯರ್  ಟಿಕ್ ಟಿಕ್ ವನ್... ಟಿಕ್ ಟಿಕ್ ಟೂ... " ಎಂದು ಪೆದ್ದು ಪೆದ್ದಾಗಿ ಹೇಳುತ್ತಾ ಟೈಮ್ ಪಾಸ್ ಮಾಡಿದೆ. ಇನ್ನೂ ಹತ್ತೂವರೆ! ದೇವರೇ....

ಅಂತೂ ಅಂತಾಕ್ಷರಿ ಮುಗಿದು ಜೋಕ್ ಹೇಳಲು ಶುರುಮಾಡಿಕೊಂಡರು. ಆಗಲೇ ನನಗೆ ಇದು ಮಿಡ್ ನೈಟ್ ಪಾರ್ಟಿ ಎಂದು ಗೊತ್ತಾಗಿದ್ದು. ನನ್ನ ಹತ್ತಿರ ಒಂದು ಜೋಕ್ ಹೇಳು ಅಂದರೆ "ಒಂದು ಜೋಕ್" ಎಂದು ಹೇಳಿ ತೆಪ್ಪಗೆ ಕುಳಿತೆ. ಎಲ್ಲರೂ ನಕ್ಕರೆ ನಾನು ಅಯೋಮಯಳಾಗಿ ನಕ್ಕೆ. ಅಂತೂ 12 ಗಂಟೆ ಆಯಿತು. ಎಲ್ಲರೂ ಜಾತ್ರೆಯಲ್ಲಿ ಕೆಲವರಿಗೆ ಮೈಮೇಲೆ ಬರುತ್ತದಲ್ಲ, ಹಾಗೆ ಇದ್ದಕ್ಕಿದ್ದಂತೆ "ಹ್ಯಾಪಿ ನ್ಯೂ ಇಯರ್" ಎಂದು ಕೂಗಿ, ಚೀರಿ ಒಬ್ಬರನ್ನೊಬ್ಬರು ಅಪ್ಪಿ, ವಿಶ್ ಮಾಡಿ ಹೊಸ ವರ್ಷವೇ ಗಾಬರಿ ಬೀಳುವ ಹಾಗೆ ವರ್ತಿಸಿದರು.

ಇಂಥಾ ಗದ್ದಲ ಮಾಡಿ ಬಂದ ಹೊಸ ವರ್ಷವನ್ನೂ ಓಡಿಸಿಬಿಟ್ಟರೆ ಮತ್ತೆ ಒಂದು ವರ್ಷ ಊಟಕ್ಕೆ ಕಾಯಬೇಕೋ ಎಂಬ ಯೋಚನೆ ಬಂದು ಇನ್ನಷ್ಟು ಹಸಿವಾಗಿ ಮುಖ ಸಣ್ಣವಾಯಿತು. ಒಬ್ಬರಿಗೂ ಊಟದ ಖಬರೇ ಇಲ್ಲ. ಬರೀ ವಿಶ್ ಮಾಡುವುದೇ ಆಗಿದ್ದರೆ ಅಷ್ಟು ಊಟ ಯಾಕೆ ತಂದಿರಿ ಎಂದು ಮನಸ್ಸಿನಲ್ಲೇ ಬೈದೆ.




ಅಂತೂ ಮಗಳು ಮತ್ತು ಅವಳ ಗೆಳತಿ ಊಟದ ತಯಾರಿ ನಡೆಸಿದ್ದು ಕಂಡು ಒಳಗೊಳಗೇ ಸಂತೋಷವಾಯಿತು. ಅಂತೂ ಖುಷಿಂದಾಗಿ "ನಾನು ಬಡಿಸ್ತೀನಿ,.. ನೀವೆಲ್ಲ ಕೂತ್ಕೊಳ್ಳಿ" ಅನ್ನುವಷ್ಟು ಸಹನೆ, ಸೌಜನ್ಯ ಇಲ್ಲದೆ "ಬಫೆ ಸಿಸ್ಟಮ್ ಆಯ್ತಾ?" ಎಂದು ಸಾರಿ ನಾನೇ ಎಲ್ಲರಿಗಿಂತ ಮುಂಚೆ ತಟ್ಟೆ ಹಿಡಿದುಕೊಂಡು ಬೇಕಷ್ಟು ಬಡಿಸಿಕೊಂಡೆ! ಎಲ್ಲ ಸೇರಿ ಖಾಲಿಮಾಡಿಬಿಟ್ಟರೆ ಎಂಬ ಭಯ ಬೇರೆ.

ಆಹಾ! ಎಷ್ಟೊಂದು ವಿಧದ ಸ್ವೀಟ್ಗಳು, ರೋಟಿ, ಕರ್ರಿ, ಸ್ನಾಕ್ಸ್, ಸೈಡ್ಸ್, ಜ್ಯೂಸ್ ಎಂದು ಎಕ್ಸಯ್ಟ್ ಆಗುತ್ತ ಆಗುತ್ತಾ ತಿಂದು ಮುಗಿಸಿದಾಕ್ಷಣ ರೆಸೊಲ್ಯೂಷನ್ ನೆನಪಾಯಿತು! ಹಾಳಾಗಿ ಹೋಗಲಿ ಎಂದು ತಟ್ಟೆಯಲ್ಲಿ ಬಿಟ್ಟ ಕರಿಬೇವಿನ ಚೂರಿನ ಹಾಗೆ ರೆಸೊಲ್ಯೂಷನ್ನನ್ನೂ ಕಸದ ಬುಟ್ಟಿಗೆ ಹಾಕಿ, ಮುಚ್ಚಿ, ಎಲ್ಲರ ಜೊತೆಗೆ ಖುಷಿಯಾಗಿ ಮಾತಾಡಿ, ಅವರನ್ನು ಕಳಿಸಿ ಮಲಗಿದೆ.

ಹೀಗೆ "ಮೊದಲ ಚುಮ್ಮಾ ಹಲ್ಲು ಗುಮ್ಮಾ" ಆದ ಮೇಲೆ ಈ ವರ್ಷ ಜನವರಿ, ಫೆಬ್ರವರಿಯಲ್ಲಿ ಮಾತ್ರವೇ ಮದುವೆ ಮುಹೂರ್ತಗಳು ಹೆಚ್ಚಾಗಿ ಇವೆ ಎನ್ನುವ ಅನಾಹುತಕಾರೀ ಸುದ್ದಿಯೂ ಒಂದರ ಹಿಂದೆ ಒಂದರಂತೆ ಅಹ್ವಾನ ಪತ್ರಿಕೆಗಳೂ ಟೀಪಾಯ್ ತುಂಬ ಪ್ರದರ್ಶನಕ್ಕೆ ಇಟ್ಟವರ ಹಾಗೆ ತುಂಬಿಹೋದವು.

"ಕ್ಲೋಸ್ ಫ್ರೆಂಡ್ಸ್ ಮದುವೇಲಿ ಸಾಲಡ್ ತಿಂದು ಬರೋದಾ?"

"ಅಕ್ಕನ ಮಗನ ಮದುವೇಲಿ ಬರೀ ಜ್ಯೂಸ್ ಕುಡಿದು ಬರೋದಾ?"

**"ಚಿಕ್ಕಪ್ಪನ ಮಗನ ಮದುವೇಲಿ ಬರೀ ಚಕ್ಲಿ ತಿಂದು ಬರೋದಾ?"** ಎಂದು ನನಗೆ ನಾನೇ ಸಮಾಧಾನ ಹೇಳಿಕೊಂಡು ಎಲ್ಲವನ್ನೂ ಧಮಾಸ್ ಮಾಡಿ ಸಂತೋಷ ಪಟ್ಟಿದ್ದಾಯ್ತು. ಮಧ್ಯೆ ಮಧ್ಯೆ ಗೃಹಪ್ರವೇಶ, ಮುಂಜಿ, ಹುಟ್ಟುಹಬ್ಬ, ಸೀಮಂತಗಳ ಒಗ್ಗರಣೆ ಬೇರೆ. ಇದರಲ್ಲಿ ನನ್ನದೇನೂ ತಪ್ಪಿಲ್ಲ ಅಲ್ವಾ?

**"ಮಾನವ ಜನ್ಮ ದೊಡ್ಡದು**

**ತಿನ್ನದೇ ಬಳಲಬೇಡಿರೋ**

**ಹುಚ್ಚಪ್ಪಗಳಿರಾ"**

ಎಂದು ಹಾಡಿಕೊಳ್ಳುತ್ತ ಮುಂದಿನ ವರ್ಷದ ವರೆಗೂ ಕಾದಿರುತ್ತೇನೆ. ಮೂವತ್ತೊಂದರ ರಾತ್ರಿ ಮತ್ತೆ ರೆಸೊಲ್ಯೂಷನ್ ಮಾಡಿದರೆ ಆಯ್ತು. ಏನಂತೀರಾ?

■



## ಪುಸ್ತಕ ಪರಿಚಯ


# ನಮ್ಮೂರ ಚಿತ್ರ ವಿಚಿತ್ರಗಳು

**ಲೇಖಕರು: ವೈ.ಎನ್.ಗುಂಡೂರಾವ್**

**ಪ್ರಕಾಶಕರು: ನ್ಯೂವೇವ್ ಬುಕ್ಸ್, ಬೆಂಗಳೂರು**

**ಪುಟ:228. ಬೆಲೆ: ರೂ.250**

ಲೇಖಕನೊಬ್ಬನಿಗೆ ತನ್ನ ಬಾಲ್ಯವನ್ನು ನೆನೆಸಿಕೊಂಡಾಗ, ಬದುಕಿನಲ್ಲಿ ಎಡತಾಕಿದ ಸಂಗತಿಗಳ ಮೆಲುಕು ಮುದ ಕೊಡುವುದಲ್ಲದೆ, ಅಂಥ ಅನುಭವಗಳನ್ನು ಓದುಗರಿಗೆ ಮುಟ್ಟಿಸಬೇಕೆಂಬ ಹಂಬಲ ಸಹಜವಾದುದೇ. ಬಾಲ್ಯದ ಬದುಕನ್ನು ಅದು ಬಂದ ರೀತಿಯಲ್ಲೇ ಒಗ್ಗಿಸಿಕೊಳ್ಳುತ್ತ, ಸಾಂದರ್ಭಿಕ ವಿನೋದ ಪ್ರಸಂಗಗಳನ್ನು ಬರಹದ ಮೂಲಕ ಹಂಚಿಕೊಳ್ಳುವಲ್ಲಿ ಆತ್ಮ ಸಂತೋಷವಿದೆ.




'ನನ್ನೂರು ಸುಗ್ರಾಮ' ಎಂದು ಲೇಖಕರು ಆರಂಭದಲ್ಲೇ ಹೆಮ್ಮೆ ಪಡಲು ಇರುವಂಥ ಐತಿಹಾಸಿಕ ಸಂಗತಿಗಳು ಇಲ್ಲಿವೆ. ಊರಿನ ಪ್ರಾಕೃತಿಕ, ನೈಸರ್ಗಿಕ ಚಿತ್ರಗಳನ್ನಲ್ಲದೆ, ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ಬಾಲಕರಿಗೆ ಪ್ರೀತಿಯಿಂದ ಬೆಣ್ಣೆ, ಮಜ್ಜಿಗೆ ನೀಡುವ ಪಕ್ಕದೂರಿನ ಮುದ್ದಮ್ಮ, ಪಕ್ಕದ ಮನೆಯಾಕೆಗೆ ವಿಶ್ವಾಸದಿಂದ ಉಡಲು ಕೊಟ್ಟ ಸೀರೆ ಅಚಾತುರ್ಯದಿಂದ ರೂಪಾಯಿನಷ್ಟಗಲ ಸುಟ್ಟಾಗಲೂ ಮನ್ನಿಸುವ ವನಜಮ್ಮ, ಚೋರವೃತ್ತಿಯ ಹಂಡೆ ಹನುಮ –ಇಂಥ ಪ್ರಾಮಾಣಿಕ ಚಿತ್ರಗಳು ಇಲ್ಲಿವೆ. ಹುಲಿಬಾಯಿ ಕಟ್ಟುವ 'ಮಾಂತ್ರಿಕ' ಹುಲಿಗಪ್ಪ, ಏಮಾರಿಸುವುದನ್ನೇ ಕಲೆಯಾಗಿಸಿಕೊಂಡ 'ತಾಳ–ತಂಟ್ರಿ'ಯಂಥ ವಿಚಿತ್ರಗಳೂ ಇಲ್ಲಿವೆ.

ಪ್ರಬಂಧ ಸ್ವರೂಪದ ಇಲ್ಲಿನ 34 ಲೇಖನಗಳ ನೇರಾ ನೇರ ನಿರೂಪಣೆ ಓದುಗರ ಮನಸ್ಸನ್ನು ತಟ್ಟಬಲ್ಲವು.

**–ಕೆ.ಎನ್.ಭಗವಾನ್.**

# ಶೂಟಿಂಗ್ ಶಾಕ್

ಅರವಿಂದ. ಜಿ. ಜೋಷಿ

ಪತಿರಾಯನನ್ನು ಕಚೇರಿಗೆ ಕಳುಹಿಸಿ, ಬಾಗಿಲು ಭದ್ರಪಡಿಸಿ ಬಂದ ಪಮ್ಮೀ ಎಂದಿನಂತೆ ಟಿವಿ ವೀಕ್ಷಣೆಯಲ್ಲಿ ದ್ದಾಗ ಕರೆ ಗಂಟೆ ಶಬ್ದ ವಾಯಿತು. ವಟಗುಟ್ಟುತ್ತಲೇ ಎದ್ದು ಹೋಗಿ ಬಾಗಿಲು ತೆರೆಯುವ ಮುನ್ನ, ವೆರಾಂಡಾದ ಕಿಟಕಿಯಿಂದ ಇಣುಕಿದಳು. ಸುಮಾರು ಐವತ್ತರ ಆಸುಪಾಸಿನ ವ್ಯಕ್ತಿ ಟ್ರಿಂ ಆಗಿ ಡ್ರೆಸ್ ಮಾಡಿಕೊಂಡವ ಜಗುಲಿಯ ಕೆಳಗೆ ನಿಂತಿದ್ದ. ಪಮ್ಮೀ ತಾನು ನಿಂತಲ್ಲಿಂದಲೇ "ಯಾರು ಬೇಕಿತ್ತು..?" ಎಂದು ಪ್ರಶ್ನೆ ಹಾಕಿದಳು. ಆತ ಕೃತ್ರಿಮ ನಗೆ ಬೀರುತ್ತ "ನಮಸ್ತೆ ಮೇಡಂ. ನನ್ನ ಹೆಸರು ವಿಶಾಲ್, ಹರಿ ಓಂ ಸಿನೇ ಪ್ರೊಡಕ್ಷನ್ ಮೇನೆಜರ್" ಎನ್ನುತ್ತ ಜೇಬಿನಿಂದ ವಿಸಿಟಿಂಗ್ ಕಾರ್ಡ್ ತೆಗೆದು ಕೊಟ್ಟ. ಕಾರ್ಡ ಓದಿದ ಪಮ್ಮೀ ಬಾಗಿಲು ತೆರೆದು "ಬನ್ನಿ.." ಎಂದು ಒಳಗೆ ಕೂರಿಸಿ "ನಮ್ಮಿಂದೇನು ಆಗಬೇಕಿತ್ತು?" ಎಂದಾಗ ಆತ "ಈ ಮನೆ ಓನರ್..." ಎಂದು ರಾಗ ಎಳೆಯುತ್ತಿದ್ದಂತೆ ಪಮ್ಮೀ "ಹಾಂ... ನಾನೇ" ಎಂದಳು.

ಮುಂದುವರೆದ ವಿಶಾಲ್ "ಏನಿಲ್ಲಾ ಮೇಡಂ, ನಿಮ್ಮ ಮನೆ ಲುಕ್ಕು ತುಂಬಾ ಚೆನ್ನಾಗಿದೆ" ಎನ್ನುತ್ತಿದ್ದವನ ಮಧ್ಯೆ "so what?" ಎಂದು ಕೇಳಿದಾಗ ಆತ "ನಮ್ಮ ಪ್ರೊಡಕ್ಷನ್ ಯೂನಿಟ್‌ನವರು ಕಂಟೀನ್ಯೂಯಸ್ ಮೂರು ದಿನ ಇಲ್ಲಿ ಶೂಟಿಂಗ್ ಮಾಡ್ಬೇಕಂತಿದೀವಿ.... ನೀವು ಪರ್ಮಿಶನ್ ಕೊಟ್ರೆ ..." ಎಂದು ಆತ ಇನ್ನೂ ಹೇಳಿ ಮುಗಿಸುವ ಮುನ್ನವೇ, ಪಮ್ಮೀ ಕಣ್ಣು ಬಾಯಿ ಬಿಟ್ಕೊಂಡು "ಶೂಟಿಂಗಾ..? ಅದು ನಮ್ಮ ಮನೇಲಿ... ಐ... ಕಾಂಟ್ ಬಿಲೀವ್" ಎಂದು ಪ್ರಸನ್ನ ಚಿತ್ತಳಾಗಿ ಕೂಗಿದಳು. ಮನದಲ್ಲಿ," ಇಷ್ಟು ದಿನ ಆಯ್ತು ತಾನಂತು ಒಂದೂ ಶೂಟಿಂಗ್ ನೋಡೇ ಇಲ್ಲ, ಇಂದು ಅದಾಗಿಯೇ ಮನೆ ಬಾಗಿಲಿಗೆ ಬಂದಿದೆ ಎಂದರೆ ಅಬ್ಬಾ..." ಎಂದು ಖುಷಿಯ ಸಾಗರದಲ್ಲಿ ತೇಲುತ್ತಿದ್ದಾಗ, ಆತ "ಯಾಕೆ ಮೇಡಂ ಏನೂ ಮಾತಾಡ್ತಾನೇ ಇಲ್ಲ" ಎಂದ. ಸಂತೋಷದಿಂದ ತಡವರಿಸುತ್ತ "ಹಾಂ... ಮಾಡಿ ಸಾರ್. ಖಂಡಿತವಾಗಿ ಮಾಡಿ" ಎಂದಳು. ಮುಂದುವರೆದ ಆತ "ಏನಿಲ್ಲಾ ಮೇಡಂ... ಎರಡು ಮೂರು ದಿನ ನಿಮ್ಮ ಮನೇನ ಅದಕ್ಕೆ ಬಳಸ್ಕೋತೀವಿ, ಅದಕ್ಕೆ ಪ್ರತಿ ದಿನಕ್ಕೆ ಇಷ್ಟು ಅಂತ ಹಣಾನೂ ಕೊಡ್ತೀವಿ" ಎಂದಾಗಲಂತೂ ಪಮ್ಮೀಗೆ ಆಕಾಶದಲ್ಲಿ ಇದ್ದಂತೆ ಅನುಭವ ವಾಯಿತು. ಅದೇ ಮೂಡಿನಲ್ಲಿ "ಸಾರ್ ಹಿರೋಯಿನ್ ಯಾರು..?" ಎನ್ನುವ ಪ್ರಶ್ನೆಗೆ ಆತ "ಉದಯೋನ್ಮುಖ ನಟಿ ರಂಜನಾ" ಎಂದ. ಆ ಹೆಸರು ಕೇಳುತ್ತಿದ್ದಂತೆ ಫುಲ್ ಎಕ್ಸೈಟ್ ಆದವಳು "ಅಯ್ಯೋ ಹೌದಾ.. ಸಾರ್! ನಾನು ಅವಳ ಫ್ಯಾನ್!," ಎನ್ನುತ್ತಾ, "ಸ್ವಲ್ಪ ತಾಳಿ ನಮ್ಮ ಹಸ್ಬೆಂಡ್‌ಗೆ ಕಾಲ್ ಮಾಡ್ತೇನೆ" ಎನ್ನುತ್ತಾ ಪತಿ ಪರಮೇಶಿಗೆ ವಿಷಯ ತಿಳಿಸಲು ಫೋನಾಯಿಸಿದಳು. ಆ ಬದಿಯಿಂದ ಆತ "ಏನ್ಸಮಾಚಾರ..? ನಾನು ಅರ್ಜೆಂಟ್ ಮೀಟಿಂಗ್ನಲ್ಲಿದ್ದೇನೆ. ಆಮೇಲೆ ಮಾಡು" ಎಂದ್ಹೇಳಿ ಕಾಲ್ ಕಟ್ ಮಾಡಿದ.

ಸಾಯಂಕಾಲ ಕಚೇರಿಯಿಂದ ಬಂದ ಪತಿ ರಾಯನಿಗೆ ನಡೆದ ವಿಷಯ ತಿಳಿಸಿದಾಗ ಆತ "ಅಲ್ವೇ... ಯಾರ್ಯಾರೋ ಏನೇನೋ ಹೇಳ್ಕೊಂಡು ಬರ್ತಾರೆ. ಅವರನ್ನ ಒಳಗೆ ಕರೆದು ಮನೆ ತೋರಿಸ್ತಿಯಲ್ಲಾ... ನಿನ್ನ ಬುದ್ಧಿಗೆ ಏನು ಹೇಳಬೇಕೋ......."ಎಂದು ನುಡಿದಾಗ ಪಮ್ಮೀ "ರ್ರೀ... ನಾನೇನು ನಿಮ್ಮಷ್ಟು ಬುದ್ದೂ ಅಲ್ಲ ತಿಳಿತಾ... ಇಲ್ನೋಡಿ ಅವನ ಕಾರ್ಡ್ ಇದೆ. ತಗೊಂಡು ಫೋನ್ ಮಾಡಿ ಕನ್ಫರ್ಮ ಮಾಡ್ಕೊಳ್ಳಿ" ಎಂದು ಆತನ ಕೈಗೆ. ವಿಶಾಲ್ ಕೊಟ್ಟು ಹೋದ ಕಾರ್ಡ್ ಕೊಡುತ್ತಾ "ನಾನು ಬ್ಯೂಟಿ ಪಾರ್ಲರ್

ಹೋಗಿ ಬರ್ತೇನೆ"ಎಂದು ಹೇಳಿ ಹೊರಟು ನಿಂತಾಗ "ಪುನಃ ಆತ "ಅಲ್ವೇ, ಒಂದು ವಾರದ ಹಿಂದೆಯಷ್ಟೇ ಹೋಗಿ ಬಂದಿದ್ಯಲ್ಲಾ" ಎಂದು ರಾಗ ಎಳೆದಾಗ ಆಕೆ ತುಸು ಕೋಪದಿಂದ", "ರ್ೀ... ನಾಳೆ ಶೂಟಿಂಗ್ ಗೆ ಎಂತೆಂಥಾವರೋ ಬರ್ತಾರೆ, ನಾನು ಅವರ ಮುಂದೆ ದ್ರಾಬೆ ಥರ ಇರಬೇಕಾ..?" ಎಂದು ಸಣ್ಣ ಬಾಂಬ್ ಸಿಡಿಸಿ, ಆತನ ಯಾವ ಪ್ರತಿಕ್ರಿಯೆಗೂ ಕಾಯದೇ ಹೊರಟು ಬಿಟ್ಟಳು.

ಇತ್ತ ಕಾರ್ಡಿನಲ್ಲಿ ಇದ್ದ ನಂಬರ್‌ಗೆ ಫೋನಾಯಿಸಿದ ಪರಮೇಶಿ ಆತನಿಂದ ಎಲ್ಲ ವಿವರ ಪಡೆದು, ಒಂದು ದಿನದ ಶೂಟಿಂಗ್‌ಗೆ ಇಪ್ಪತ್ತೈದು ಸಾವಿರ ಕೊಡುತ್ತಾರೆ ಎನ್ನುವುದನ್ನು ಕನ್ಫರ್ಮ ಮಾಡಿಕೊಂಡ. ಅಷ್ಟರಲ್ಲಿ ಆತನ ಅರ್ಧಾಂಗಿ ಬಂದು "ರ್ೀ... ಅಡ್ವಾನ್ಸ್ ಗಿಡ್ವಾನ್ಸ ಕೇಳಬೇಡಿ , ಹ್ಯಾಗೋ ಮೂರು ದಿನ ಕಷ್ಟ ಪಟ್ಟರೆ ಒಟ್ಟಿಗೆ ಎಪ್ಪತ್ತೈದು ಸಾವಿರ ಎಣಿಸಿಕೊಳ್ಳಬಹುದು"ಎಂದು ಅಮೂಲ್ಯ ಸಲಹೆ ಇತ್ತಳು. ಅಷ್ಟಕ್ಕೆ ಆತ "ನಿಜಾ ಪಮ್ಮೀ  ನೀ ..ಹೇಳೋದು ಸರಿ" ಎಂದ. ಅದಾಗಿ ಅರ್ಧ ಗಂಟೆಯ ನಂತರ ಮತ್ತೆ ವಿಶಾಲ್ ನ ಕಡೆಯಿಂದ ಕಾಲ್ ಬಂದಿತು. ಆಗ ಆತ "ನೋಡಿ ಮಿಸ್ಟರ್ ಪರಮೇಶಿ ನಮ್ಮ ಹಿರೋಯಿನ್ ಭಾರೀ ನೀಟು. ಒಂದು ಸ್ವಲ್ಪ ಕೊಳೆ ಕಂಡ್ರೂ ಕ್ಯಾತೆ ತೆಗಿತಾಳೆ" ಎಂದಾಗ ಪರಮೇಶಿಯ ಕೈಯಿಂದ ಫೋನ್ ಕಿತ್ತುಕೊಂಡ ಪಮ್ಮೀ "ಆಯ್ತು ಸಾರ್. ನಾವೇನು ಮಾಡ್ಬೆಕು ಹೇಳಿ ಮಾಡ್ತೆವೆ. .ಹಾಂ... ನೀವು ನಮಗೆ ಅಡ್ವಾನ್ಸ್ ಕೊಡಬೇಡಿ, ಶೂಟಿಂಗ್ ಪೂರೈಸಿ ಹೊರಡುವಾಗ ಎಲ್ಲಾ ಒಟ್ಟಿಗೆ ಕೊಡಿ ಸಾಕು" ಎಂದು ಹೇಳಿದಳು. ಮುಂದುವರೆದ ವಿಶಾಲ್, "ನಾನು ನೋಡ್ದ ಹಾಗೆ ನಿಮ್ಮ ರೂಮಲ್ಲಿ ಇರೋ ಕಾಟು. ಸೊಳ್ಳೆ ಪರದೆ, ಟೇಬಲ್ಲು, ಟೀಪಾಯ್ ಕುರ್ಚಿಗಳು ಎಲ್ಲಾ ಬಣ್ಣ ಗೆಟ್ಟು ಮಾಸಿ ಹೋಗಿವೆ, ಏನೋ ಈ ಒಂದು ನೆಪದಲ್ಲಾದರೂ ಹೊಸಾ ಹೊಸ ಫರ್ನಿಚರ್ ಬಂದ್ಹಾಗೆ ಆಗುತ್ತೆ" ಎಂದು ಹೇಳುತ್ತಿದ್ದವನ ಮಧ್ಯಕ್ಕೆ ಪ್ರವೇಶಿಸಿದ ಪರಮೇಶಿ "ಎಲ್ಲಾ ಸೇರಿ ಎಷ್ಟಾಗಬಹುದು..?" ಎನ್ನುವ ಪ್ರಶ್ನೆ ಇಟ್ಟ. ಸ್ವಲ್ಪ ಯೋಚಿಸಿದವನಂತೆ ಮಾಡಿದ ವಿಶಾಲ್ "ಅಬ್ಬಬ್ಬಾ ಎಂದರೆ ಇಪ್ಪತ್ತು ಸಾವಿರ ಆಗಬಹುದು" ಎಂದು, "ನೀವೇನು ಯೋಚ್ನೆ ಮಾಡ್ಕೋ ಬೇಡಿ. ನಮಗೆ ಗೊತ್ತಿರೋನು ಒಬ್ಬ ಇದ್ದಾನೆ. ಅವನಿಗೆ ನಮ್ಮ ಹೆಸ್ರು ಹೇಳಿದ್ರೆ ಮಾರ್ಕೆಟ್ ರೇಟ್ ಗಿಂತ ಸ್ವಲ್ಪ ಕಡಿಮೆ ಕೊಡ್ತಾನೆ., ಹ್ಯಾಗೂ ಅಚಾನಕ್ಕಾಗಿ ಎಪ್ಪತ್ತೈದು ಸಾವಿರ ಬರತ್ತಲ್ಲ, ಆಮೇಲೆ ಅಡ್ಜಸ್ಟ್ ಮಾಡಿಕೊಳ್ಳಿ. ಆದ್ರೆ ಅವನಿಗೆ ಕ್ಯಾಷ್ ಆಂಡ್ ಕ್ಯಾರಿ... ಏನಂತೀರಾ?" ಎಂದಾಗ ಪರಮೇಶಿ "ಆಗ್ಲಿ ಸಾರ್. ತಾವು ಹೆಳಿದಮೇಲೆ ದೂಸರಾ ಮಾತೇ ಇಲ್ಲ."ಎಂದ. ಹೀಗೇ ಮಾತನಾಡುತ್ತಿದ್ದಾಗ ಮತ್ತೆ ಪತಿಯಿಂದ ಫೋನ್ ಪಡೆದ ಪಮ್ಮೀ "ಸಾರ್,.. ನಮ್ಮ ಕಡೆಯಿಂದ ನನ್ನ ನೆಚ್ಚಿನ ನಟಿ ಹಾಗೂ ತಂಡದವರಿಗೆ ಒಂದು ದಿನದ ಊಟ-ಉಪಹಾರ ಕೊಡಬಹುದಾ..?" ಎಂದು ಕೇಳಿದಳು. ಅದಕ್ಕವ "ಹೋ.!. ಮಾಡಿ ಮೇಡಂ ಆದ್ರೆ ರುಚಿಯಾಗಿ ಶುಚಿಯಾಗಿ ಇರಬೇಕಷ್ಟೆ" ಎಂದ. ಮುಂದುವರೆದ ಪಮ್ಮೀ "ಸಾರ್, ಯಾವತ್ತು ಶೂಟಿಂಗ್‌ಗೆ ಬರ್ತಿರಾ.?"ಎನ್ನುವ ಪ್ರಶ್ನೆ ಇಟ್ಟಾಗ, ಆತ "ಬರೋ ಸೋಮವಾರ ಮೇಡಂ"ಎಂದ. "ಥ್ಯಾಂಕ್ಯೂ" ಎಂದ್ಹೇಳಿ ಫೋನ್  ಕಾಲ್ ಕಟ್ ಮಾಡಿದಳು ಪಮ್ಮೀ. ಆನಂತರ ಪತಿಯತ್ತ ತಿರುಗಿ "ನೋಡಿ, ಇವತ್ತಾಗಲೇ ಗುರುವಾರ. ಬರೋ ಸೋಮವಾರ ದಿಂದಾನೇ ಶೂಟಿಂಗ್ ಗೆ ಬರ್ತಾರಂತೆ. ಅಷ್ಟರೊಳಗೆ ನೀವು ಹೋಗಿ ಅವರು ಹೇಳಿದಂತೆ ಎಲ್ಲಾ ಫರ್ನಿಚರ್ ಖರೀದಿ ಮಾಡ್ಕೊಂಡು ಬನ್ನಿ. ,ಹಾಂ! ಹಂಗೇ ನೀವು ಆ ರೂಮಿನಲ್ಲಿರುವ ಕಾಟು, ಕುರ್ಚಿ, ಟೇಬಲ್, ಟೀಪಾಯ್ ಎಲ್ಲಾನೂ ತಕ್ಕೊಂಡು ಹೋಗಿ ಮಹಡಿಯ ಮೇಲೆ ಸ್ಟೋರ್ ರೂಮ್ ಇದೆಯಲ್ಲಾ, ಅಲ್ಲಿ ಡಂಪ್ ಮಾಡ್ಸಿ., ಜೊತೆಗೆ ಅವರು ಶೂಟಿಂಗ್ ಮುಗ್ಸಿಕೊಂಡು ಹೋಗೋ ತನಕ ಅದೇ

ಸ್ಟೋರ್ ರೂಮ್‌ನಲ್ಲಿ ಸ್ವಲ್ಪ ಜಾಗಾ ಮಾಡ್ಕೊಂಡು ಇರಿ. ಗೊತ್ತಾಯ್ತಾ...?"ಎಂದು ಆದೇಶ ಹೊರಡಿಸಿದಳು. ಮನೆಯ ಹೈ ಕಮಾಂಡ್‌ನ್ನು ಎದುರು ಹಾಕ್ಕೊಂಡ್ರೆ ತನಗೆ ಉಳಿಗಾಲವಿಲ್ಲ ಎಂದರಿತ ಪರಮೇಶಿ ಓಕೆ ಎಂದ.

ಮರುದಿನ ಪರಮೇಶಿ ನಾಲ್ಕೈದು ಆಳುಗಳನ್ನು ಗೊತ್ತು ಮಾಡಿ ರೂಮಿನಲ್ಲಿದ ಹಳೇ ಫರ್ನೀಚರ್‌ಗಳನ್ನು ಮಹಡಿಯ ಮೇಲಿದ್ದ ಸ್ಟೋರ್ ರೂಮ್‌ಗೆ ಶಿಫ್ಟ್ ಮಾಡಿಸಿದ. ಪೇಂಟ್ ಮಾಡಿಸಿ ಮನೆಯ ಹೊರಗೆಲ್ಲ ಕ್ಲೀನ್ ಮಾಡಿಸಿದ., ಆನಂತರ ವಿಶಾಲ್ ಹೇಳಿದ ಅಂಗಡಿಗೆ ಹೋಗಿ ಎಲ್ಲಾ ಹೊಸ ಫರ್ನೀಚರ್ ತಂದು ಒಪ್ಪ ಓರಣವಾಗಿ ಜೋಡಿಸಿದ. ಒಟ್ಟಾರೆ ಆ ರೂಂಗೆ ಹೊಸ ಕಳೆ ಬರುವಂತೆ ವ್ಯವಸ್ಥೆ ಮಾಡಿದ. ಇತ್ತ ಪಮ್ಮೀ ಮೊದಲನೆಯ ದಿನದ ಊಟ ಉಪಹಾರದ ವ್ಯವಸ್ಥೆ ಮಾಡಿದಳು. ಅಂತೂ ಎಲ್ಲಾ ರೆಡಿ ಆಗುವಷ್ಟರಲ್ಲಿ ಪರಮೇಶಿಯ ಕೈಯಿಂದ ಬರಾಬ್ಬರಿ ಮೂವತ್ತು ಸಾವಿರ ಕೈ ಬಿಟ್ಟಿತ್ತು. ಅದಕ್ಕಿಂತ ಹೆಚ್ಚಾಗಿ ಪಮ್ಮೀ ಖುಷಿ ಖುಷಿ ಆಗಿದ್ದಳು, ಅಷ್ಟು ಸಾಕಿತ್ತು ಅವನಿಗೆ. ಭಾನುವಾರದ ಊಟದ ನಂತರ ಪಮ್ಮೀ ತನ್ನ ತೌರಿನವರಿಗೆ, ಆಪ್ತ ಗೆಳತಿಯ ಪರಿವಾರದವರಿಗೆ ಮನೆಯ ಆಜೂಬಾಜು ಇರುವವರಿಗೆ ತನ್ನ ಮನೆಯಲ್ಲಿ ಸೋಮವಾರದಂದು ನಡೆಯುವ ಶೂಟಿಂಗ್‌ಗೆ ಬರಬೇಕೆಂದು ಡಾಂಡಾಂ ಹೊಡೆದಳು.

ಸೋಮವಾರ ಬೆಳಿಗ್ಗೆ ಸುಮಾರು ಒಂಭತ್ತಕ್ಕೆ ಸಿನಿಮಾ ಯೂನಿಟ್ ನವರು ಬರುತ್ತಾರೆಂದು ತಿಳಿಸಿದ್ದರ ಹಿನ್ನೆಲೆಯಲ್ಲಿ ತಿಂಡಿಗಾಗಿ ಸ್ಪೆಷಲ್ ಉಪ್ಪಿಟ್ಟು, ಕೇಸರಿಬಾತ್ ರೆಡಿ ಮಾಡಿಕೊಂಡಿದ್ದಳು.ಅವಳು ತಿಳಿಸಿದಂತೆ ಗೆಳತಿಯರು, ಅಕ್ಕಪಕ್ಕದವರು ಶೂಟಿಂಗ್ ನೋಡಲು ಗುಂಪು ಗುಂಪಾಗಿ ಬಂದು ಸೇರಿದರು.

ಅವರನ್ನು ಕರೆದು ಕೂರಿಸಿ ಉಪಹಾರ ಕೊಡುತ್ತಿದ್ದಾಗ ಪರಮೇಶಿ ಸೆಲ್‌ಗೆ ವಿಶಾಲ್‌ನ ಫೋನ್ ಬಂದಿತು. ಅದನ್ನು ಎತ್ತಿಕೊಂಡ ಪಮ್ಮೀ ಖುಷಿ ಖುಷಿ ಯಿಂದ "ಹಲೋ ನಮಸ್ಕಾರ ಸರ್... ಎಲ್ಲಾ ನೀವು ಹೇಳ್ದಂಗೆ ರೆಡಿ ಮಾಡಿದ್ದೀವಿ.. ಬೇಗ ಬಂದ್ಬಿಡಿ ಉಪಹಾರ ಬಿಸಿ ಬಿಸಿ ಯಾಗಿದೆ" ಎಂದು ಹೇಳಿ ಮುಗಿಸಿದಾಗ ಆತ "ಥ್ಯಾಂಕ್ಸ್ ಮೇಡಂ".. ಎನ್ನುತ್ತಾ, "ಮೇಡಂ, ಇಂದು ಬೆಳಗ್ಗೆ ಬಚ್ಚಲ ಮನೆಯಲ್ಲಿ ನಮ್ಮ ಹಿರೋಯಿನ್ ರಂಜನಾ ಜಾರಿ ಬಿದ್ದು ಕಾಲಿಗೆ ಫ್ರಾಕ್ಚರ್ ಆಗಿದೆ. ಹೀಗಾಗಿ ಅವರು ಫಿಟ್ ಆಗಿ ಬರೋತನಕ ಶೂಟಿಂಗ್ ಕ್ಯಾನ್ಸಲ್ ಮಾಡಿದ್ದೇವೆ"ಎಂದು ಹೇಳಿ ಕಾಲ್ ಕಟ್ ಮಾಡಿದಾಗ ಪಮ್ಮಿಯ ತಲೆಯ ಮೇಲೆ ಧಬ-ದಬನೆ ಎರಡು ಕೊಡ ತಣ್ಣೀರು ಸುರಿದಂತಾಯಿತು. ಸಪ್ಪೆ ಮೋರೆ ಹೊತ್ತು ಪಕ್ಕದಲ್ಲಿದ್ದ ಪತಿ ಪರಮೇಶಿ ಗೆ ತಿಳಿಸಿದಾಗ ಆತ ತನ್ನಷ್ಟಕ್ಕೆ ತಾನು "ತೆಪ್ಪಗೆ ಇರಲಾರದೇ ಎಲ್ಲೋ ಇರುವೆ ಬಿಟ್ಕೊಂಡ್ಹಾಗೆ ಆಯ್ತು"ಎಂದ. ಅದನ್ನು ಆಲಿಸಿದ ಪಮ್ಮೀ-"ಹಾಂ ಏನಂದ್ರೀ?.." ಎಂದಳು. ಆತ ಅತೀವ ಬೇಸರದಿಂದ","ಏನಿಲ್ಲ... ಏನಿಲ್ಲ.. ಪಾಪ! ಆ ಹಿರೋಯಿನ್ಗೆ ಹೀಗಾಗುತ್ತೆ ಯಾರಿಗೆ ಗೊತ್ತಿತ್ತು" ಎಂದಾಗ "ನಿಜಾ ಕಣ್ರೀ...". ಎನ್ನುತ್ತಾ ಅವಳೂ ಧ್ವನಿಗೂಡಿಸಿದಳು. ■

---



**ಸಲಹೆ**

ಭಿಕ್ಷುಕನಿಗೆ
ಕಾಸು ಎಸೆಯದಿದ್ದರೂ ಪರವಾಗಿಲ್ಲ
ಅವನೆದುರು ಕಿಸೆಗೆ ಕೈ ಹಾಕಬೇಡ..

**-ಕೆ.ಎಸ್. ನಿಸಾರ್ ಅಹಮದ್**

# ಮಲೆನಾಡಿನಲ್ಲೊಂದು ಪ್ರಸಂಗ

ಪುಷ್ಪಲತಾ. ಟಿ.ಜಿ.

ಅಂದು ಸೌದೆ ಕಡಿಯಲು ಆರು ಆಳುಗಳು ಬಂದಿದ್ದು ಕಾಡಿಗೆ ಕಾಡೇ ಸದ್ದಿನಿಂದ ತುಂಬಿಹೋಗಿತ್ತು. ಹತ್ತಾರು ಮನೆ ಇರುವ ಊರಿನಲ್ಲಿ ಆರು ಜನ ಆಳು ಬಂದಿರುವುದು ಸಣ್ಣ ಮಾತಲ್ಲ.

ತೋಟದ ಆಚೆ ಕಾನಿನಲ್ಲಿ ಮಾತನಾಡುವ ದನಿ ತೋಟಕ್ಕೆ ಬಡಿದು ಮೊಳಗುತ್ತಿತ್ತು. ಸುಡುವ ಬಿಸಿಲಿಗೆ ಅವರ ಮೈ ನಿಂದ ಬೆವರು ಸ್ನಾನ ಮಾಡುವ ನೀರಿನಂತೆ ಇಳಿಯುತ್ತಿತ್ತು. ಅದರಲ್ಲೂ ಇತ್ತೀಚೆಗೆ ಹೆಚ್ಚು ಹಾವಳಿ ಕೊಡುತ್ತಿದ್ದ ಹುಲಿಯ ಸುದ್ದಿಯೇ ಊರಿನ ತುಂಬಾ ದೊಡ್ಡ ವಿಷಯವಾಗಿ ಹೋಗಿತ್ತು. ಅದರದ್ದೇ ಚರ್ಚೆ ಸೌದಿ ಸದ್ದಿನ ನಡುವೆ ಕೇಳುತ್ತಿತ್ತು. ಮಲೆನಾಡ ದಟ್ಟ ಕಾನನದ ನಡುವಿನ ಜೀವನದಲ್ಲಿ ಇದು ಸಹಜ ಎನಿಸಿದರೂ ಹಿಂದೆಂದೂ ಇರದ ಉಪಟಳ ದಿನೇ ದಿನೆ ಹೆಚ್ಚುತ್ತಿದ್ದು ಆತಂಕಕ್ಕೆ ಕಾರಣವಾಗಿತ್ತು.

ಇದೇ ಸುದ್ದಿ ಮಹೇಶನ ದನಿಯಲ್ಲಿ ತುಸು ದೊಡ್ಡದಾಗಿಯೇ ಕೇಳುತ್ತಿತ್ತು. ಇದ್ದ ಅರ್ಧ ವಿಷಯಕ್ಕೆ ಇನ್ನರ್ಧ ಅವನ ಸಾಧನೆಯನ್ನು ಸೇರಿಸಿ ದೊಡ್ಡದಾಗಿ ಹೇಳುತ್ತಿದ್ದ ಮಹೇಶನ ಕತೆಯನ್ನು ಕಣ್ಣು ಅಗಲಿಸಿ ಕೇಳುತ್ತಿದ್ದ ಗುಂಡ.

ಬೇಸಿಗೆ ರಜೆಗೆಂದು ದೊಡ್ಡಪ್ಪನ ಮನೆಗೆ ಬಂದ ಗುಂಡನಿಗೆ ಇದೆಲ್ಲ ಕುತೂಹಲಕಾರಿ ಸಂಗತಿ. ಮರದ ತುಂಡನ್ನು ಏರಿ ಕುಳಿತು ಸೌದೆ ಕಡಿಯುವವರ ಕತೆ ಕೇಳುತ್ತಾ ಮದ್ಯೆ ಮದ್ಯೆ ಅದಕ್ಕೆಲ್ಲ ಪ್ರಶ್ನೆ ಕೇಳುತ್ತಾ ಕುಳಿತ ಗುಂಡನಿಗೆ ಮಹೇಶನ ಸಾಧನೆ ಪುಸ್ತಕದಲ್ಲಿ ಓದಿದ ಟಿಪ್ಪುವಿನ ಸಾಧನೆಯನ್ನು ಮೀರಿದ್ದು ಎನ್ನಿಸುತ್ತಿತ್ತು.

ಹೊಗಳಿದಷ್ಟೂ ಹೆಚ್ಚುವ ಮಹೇಶನ ಕತೆಯ ಸತ್ಯಾಸತ್ಯತೆ ವಿಷಯ ತಿಳಿಯದ ಗುಂಡ ಮಂತ್ರ ಮುಗ್ಧನಾಗಿ ಕೇಳುತ್ತಿದ್ದ. ಜೊತೆಗೆ ಆಗಾಗ ಅತ್ತಿತ್ತ ಸುತ್ತುವ ಡಿಂಗನನ್ನು ಹುಲಿ ಎಲ್ಲಿ ಹೊತ್ತೊಯ್ಯುವುದೋ ಎಂದು ಕರೆಯುತ್ತಿದ್ದ. ಅಲ್ಲೇ ಅಡಗಿದ್ದ ಬರ್ಕವನ್ನು ಓಡಿಸಿ ಬಿಲವೊಂದಕ್ಕೆ ಸೇರಿಸಿದ್ದ ಡಿಂಗ ತನ್ನ ಕಾಲಿನಲ್ಲಿ ಬಿಲ ತೋಡಲು ಹರ ಸಾಹಸ ಪಡುತ್ತಿದ್ದು ಗುಂಡನ ಕರೆಗೆ ಕಿವಿ ಕೊಡಲೂ ಇಲ್ಲ.

ಡಿಂಗಾ.... ಏ ಡಿಂಗ! ......ಗುಂಡು..... ಎಲ್ಹೋದ್ಯೋ....ದೊಡ್ಡದಾಗಿ ಕೂಗುತ್ತಿದ್ದ ಗುಂಡನನ್ನು ಉದ್ದೇಶಿಸಿ ಮಹೇಶ ಮತ್ತೊಂದು ಕತೆ ಅದಾಗಲೇ ಆರಂಭಿಸಿದ್ದ. ನಾನು ಹೀಗೆ ಮೊನ್ನೆ ಸೊಪ್ಪಿಗೆ ಎರಡು ನಾಯಿ ಕರ್ಕೊಂಡು ಹೋಗಿ ಬೇಕಾ ಫಜೀತಿ.....ಸ್ವಲ್ಪ ದೂರ ಹೋಗಿದ್ದಷ್ಟೆ, ನಾಯಿಗೆ ಹಾರೇ ಬಿಡ್ತು ಕುರ್ಕಿ. ನಾಯಿ ಕಯ್ ಅಂದಿದ್ ಸದ್ದೇ ಇಲ್ಲ. ಇನ್ನೊಂದ್ ನಾಯಿ ಹೆದ್ರಿ ನನ್ ಕಾಲಡಿ ಸುತ್ತಾಡ್ತಾ ಇತ್ತು. ಬಿಡ್ಲಿಲ್ಲ.... ಹೋದೆ... ಕೈಗೆ ಸಿಕ್ಕಿದ್ದ ದೊಣ್ಣೆ ತಗೊಂಡು ಎಳ್ಕೊಂಡು ಹೋದಲ್ಲೇ ಬೆನ್ನಟ್ಟಿದ ಮೇಲ್ ಅರ್ಧ ದಾರಿಗೆ ಬಿಟ್ಟು ಓಡಿ ಹೋಯ್ತು. ಅಲ್ಲಿಂದ ಹೊತ್ಕೋ ಬಂದು ಮನೆಗ್ ಹಾಕಿದ್ದೇನೋ ಹೌದು .ಆದ್ರೆ ಹಿಡಿದ ಗಾಯಕ್ಕೆ ಕುತ್ತಿಗೆ ಹುಳ ಆಗಿ ಬೇಡ ಯಾಪಾರ.....

"ಅಯ್ಯೋ... .ಡಾಕ್ಟರ್ನ ಕರೆಸಿಲ್ವ..?".

"ಕರೆಸಿದೆ. ಇಂಜೆಕ್ಷನ್ ಕೊಟ್ಟು ಹೋದ. ಒಳ್ಳೆ ನಾಯಿ ಆಗಿತ್ತು. ಬರ್ಕ ಕುರಿ ಒಂದೂ ಬಿಡ್ತಿರ್ಲಿಲ್ಲ. ಹಾಗೆ ಹೋಗಿ ಕುರ್ಕಿ ಪಾಲಾಯ್ತು". ಎಂದ ಮಹೇಶನ ಮಾತಿಗೆ ಅದುವರೆಗೂ ಸುಮ್ಮನಿದ್ದ ರಾಜು, "ಹುಲಿ ಹಿಡಿದ ಮೇಲೆ ಹೇಳ್ತಿಯಲ್ಲ ಒಳ್ಳೆ ಬೇಟೆ ಮಾಡೋದು ಅಂತ. ಒಂದು ದಿನಾನೂ ಮಟನ್ ಊಟ ಹಾಕಿಲ್ಲ". ಎಂದದ್ದು ಕೇಳಿ

ಪೆಚ್ಚು ಮೋರೆ ಹಾಕಿದ ಮಹೇಶ ಮೌನವಾಗಿ ಕಟ್ಟಿಗೆ ಕಡಿಯತೊಡಗಿದ.

ಅಷ್ಟರಲ್ಲಿ ಡಿಂಗ ವಿಚಿತ್ರ ದನಿಯಲ್ಲಿ ಕೂಗತೊಡಗಿತು. ಮೊನ್ನೆ ಮೊನ್ನೆಯಷ್ಟೇ ಟಿಪುವನ್ನು ಅಂಗಳಕ್ಕೆ ಬಂದು ಹಿಡಿದಿದ್ದ ಕುರ್ಕಿ ನೆನಪಾಗಿ ಗುಂಡಿಗೆ ಡವಗುಟ್ಟಿತು.

ಮೊನ್ನೆ ರಾತ್ರಿ ಊಟ ಮಾಡಿ ಅಂಗಳಕ್ಕೆ ಬಂದ ಟೀಪು ಸದ್ದನ್ನು ಗ್ರಹಿಸಿ ಅಂಗಳದ ತುದಿಗೆ ಹೋಗಿದ್ದಷ್ಟೇ.... ಕ್ಷಣಾರ್ಧದಲ್ಲಿ ಹೊತ್ತು ಹೋಗಿತ್ತು ದೊಡ್ಡಪ್ಪ ಹೇಳುವ ಕುರ್ಕಿ.

ಸದ್ದಿನ ಹಿಂದೆ ಓಡಿದ್ದ ದೊಡ್ಡಪ್ಪ ತೋಟದ ಆಚೆವರೆಗೂ ಹಿಂಬಾಲಿಸಿ ಹೇಗೋ ಟೀಪುವನ್ನು ಬಿಡಿಸಿದ್ದರು. ಆದರೆ ಸಿಕ್ಕಿದ್ದು ಟೀಪುವಿನ ದೇಹ ಮಾತ್ರ; ಕುತ್ತಿಗೆಯ ಅಂಚಲ್ಲಿ ಆಳವಾಗಿ ಮೂಡಿದ್ದ ಹಲ್ಲಿನ ಗಾಯದ ಜೊತೆಗೆ. ಟೀಪುವಿನ ಮರಿಗಳ ಆಕ್ರಂದನ, ಡಿಂಗನ ಕೂಗು, ತಿಂಗಳ ಬೆಳಕಿನಲ್ಲಿ ಮಲಗಿದಂತೆ ಕಾಣುತಿದ್ದ ಬಿಳಿ ಬಣ್ಣದ ಟೀಪು ಕಣ್ಣಲ್ಲಿ ನೀರು ತರಿಸಿತ್ತು. ಜೊತೆಗೆ ಕೊಟ್ಟಿಗೆಯಲ್ಲಿ ನರಳುತ್ತಿದ್ದ ಕರು ಗುಂಡನಿಗೆ ಕುರ್ಕಿ ಭಯ ಹೆಚ್ಚಿಸಿತ್ತು. ಅವತ್ತು ಸಂಜೆ ಕೊಟ್ಟಿಗೆಗೆ ಬರುತ್ತಿದ್ದ ಕರುವಿಗೆ ಹಾರಿದ್ದ ಕುರ್ಕಿ ಹೊಳೆಯ ದಡದವರೆಗೂ ಎಳೆದೊಯ್ದಿತ್ತು. ದೊಡ್ಡಪ್ಪ ಹೋಗಿ ಹೇಗೋ ಬಿಡಿಸಿಕೊಂಡು ಬಂದಿದ್ದರು. ಕರು ಉಸಿರಾಡಲು ಕಷ್ಟ ಪಡುತ್ತಾ ಗೊರ್ ಗೊರ್ ಸದ್ದು ಗಂಟಲಿನುದ್ದಕ್ಕೂ ಹೊರಡಿಸುತ್ತಿತ್ತು. ನಿತ್ಯ ಡಾಕ್ಟರ್ ಬರುವುದು, ಇಂಜೆಕ್ಷನ್ ಕೊಡುವುದು ನಡೆದೇ ಇತ್ತು. "ಕುತ್ತಿಗೆ ನಾಳವೇ ತುಂಡಾಗಿದೆ" ಎಂದಿದ್ದ ಡಾಕ್ಟರ್ ನಾಗರಾಜ ಒಂದಿಷ್ಟು ಪ್ಲಾಸ್ಟರ್ ಇಂಜೆಕ್ಷನ್ ಎಂದು ಕೈಲಾದಷ್ಟು ಮಾಡಿದ್ದ.



ಹತ್ತಾರು ದಿನ ನಿರಂತರವಾಗಿ ಅವನ ಬೈಕು ಕೀರ್ರೋ್ ಎಂದು ಗುಡ್ಡೆ ಹತ್ತುವುದು,ಕುತ್ತಿಗೆಗೆ ಇಂಜೆಕ್ಷನ್ ಒತ್ತುವುದು, ಒಂದಿಷ್ಟು ನೋಟನ್ನು ಜೇಬಿಗೆ ತುರುಕಿ ಪುನಃ ಬೈಕ್ ಏರುವುದು ನಡೆದೇ ಇತ್ತು. ಒಂದೊಂದೇ ಕಡ್ಡಿ ಹುಲ್ಲು ಮೆಲ್ಲಲು ಪ್ರಯಾಸ ಪಡುತ್ತಿದ್ದ ಕರುವಿಗೆ ಹಳ್ಳಿ ಔಷಧಿ ಎಂದು ನಂದೋಡಿಗೆ ಹೋಗಿ ದೊಡ್ಡಪ್ಪ  ಬೇರು ತಂದದ್ದು ಆಗಿತ್ತು. ಗಾಯಗಳೆಲ್ಲ ದೊಡ್ಡ ಗಂಟುಗಳಾಗಿ ನರಳುವ ಕರುವಿಗೆ ಸದಾ ಅಕ್ಕ ಜೊತೆಯಾಗಿ ಏನೇನೋ ಹಚ್ಚುತ್ತಾ ಇರುವುದು ನೆನಪಾಗಿ ಮಲೆನಾಡು ಎಂದರೆ ಸ್ವರ್ಗ ಎಂದು ಕೊಂಡಿದ್ದ ಗುಂಡುವಿಗೆ ಸಣ್ಣಗೆ ಭಯ ಶುರುವಾಗಿತ್ತು.

ಇದಕ್ಕೆ ಸರಿಯಾಗಿ ಮಹೇಶನ ಕತೆ ಇನ್ನಷ್ಟು ಭಯ ಹೆಚ್ಚಿಸಿತ್ತು. ಜೊತೆಗೆ ಡಿಂಗ ವಿಚಿತ್ರವಾಗಿ ಚೀರಿದ್ದು ದಿಗಿಲು ಹೆಚ್ಚಿಸಿದ್ದೇ ಕೆಳಗೆ ಇಳಿಯಲು ಭಯವಾಗಿ ಕಾಲು ಮರಗಟ್ಟಿದಂತೆ ಆಯಿತು.

“ಇಲ್ಲೇ ಇತ್ತೇನೋ ಮಾರಾಯ!..... ಅದೇ ಸುದ್ದಿ ಮಾತಾಡ್ತಾ ಇದೀವಿ ನೋಡು” ಎಂದ ಮಹೇಶನ ದನಿ ಕೇಳಿ ಗುಂಡನ ಮುಖ ಬಿಳುಚಿತು. “ಡಿಂಗು ಬೇಡ. ನೀ ಬೇಕಿದ್ರೆ ಹೋಗು” ಎಂದಿದ್ದ ಅಕ್ಕನ ಮಾತು ನೆನಪಾಯಿತು.

“ಅಂಕಲ್, ಹೋಗಿ ಗುಂಡನ್ನ ಬಿಡಿಸಿ” ಎಂದ ಗುಂಡನ ಮಾತಿಗೆ, “ಏ! ಹಾಗೆಲ್ಲ ಹೋಗಬಾರದು! ನಮಗೆ ಹಾರಿದ್ರೆ ಕಷ್ಟ” ಎಂದ ಮಹೇಶ. ಡಿಂಗನ ದನಿ ಇನ್ನೂ ನೀಳವಾಗುತ್ತಲೇ ಬೇಲಿ ದಾಟಿ ತೋಟ ಸೇರಿದ್ದ.

ಇವನ ಕತೆಗೆ ಇಷ್ಟು ಹೊತ್ತು ಹೂ ಹಾಕಿದ್ದರ ಜೊತೆಗೆ ಇನ್ನಷ್ಟು ಹೊಗಳಿಕೆ ಸೇರಿಸಿ ಕೊಟ್ಟಿದ್ದಕ್ಕೆ ಮನದಲ್ಲೇ ನಗುತ್ತಾ ಗುಂಡ ಕತ್ತಿ ಹಿಡಿದು ಬರುತ್ತಿದ್ದ ದೊಡ್ಡಪ್ಪನನ್ನು ಪೆಚ್ಚಾಗಿ ನೋಡಿದ. ದೊಡ್ಡಪ್ಪ ಗುಂಡನನ್ನು ನೋಡಿ, “ಮನೆಗೆ ಹೋಗೋದಾದ್ರೆ ಹೋಗು” ಎನ್ನುತ್ತಾ ಡಿಂಗನ ದನಿ ಬಂದತ್ತ ಹೋದರು.

“ಊರಿಗೆ ಬಂದ ಹುಲಿ ಚಿರತೆ ಗಳನ್ನ ಕಾಡು ಅಂತ ಇಲ್ಲಿ ತಂದು ಬಿಡ್ತಾರೆ. ನಮಗೆ ತೊಂದ್ರೆ ಕೊಡೋಕೆ ಹಡಬೆ ಫಾರೆಸ್ಟ್....ಮಕ್ಕಳು. ಈ ಕಡೆ ಬಂದ್ರೆ ಎರಡೆರಡು ಒಗೀಬೇಕು ಆ ಲಾಚಾರ್ ಬೀರುಗೆ” ಎನ್ನುತ್ತಾ ಲಕ್ಷಣ ಕಣ್ಣು ಕೆಂಪಾಗಿಸಿದ.

ಸಣ್ಣ ದನಿಯಲ್ಲಿ ಚೀರುತಿದ್ದ ಡಿಂಗನ ದನಿ ನಿಂತಿತ್ತು. ಗುಂಡನಿಗೆ ಮನೆಗೆ ಹೋಗಲು ಅಕ್ಕನ ಭಯ. ಇಲ್ಲಿ ಕೂರಲು ಹುಲಿಯ ಭಯ. ಆದರೂ ಅಲ್ಲೇ ಕುಳಿತು ದೊಡ್ಡಪ್ಪನ ದಾರಿ ನೋಡುತಿದ್ದ.

ಸ್ವಲ್ಪ ಹೊತ್ತಿಗೆ ದೊಡ್ಡಪ್ಪನ ಹಿಂದೆ ಬಾಲ ಆಡಿಸಿಕೊಂಡು ಬಂದ ಡಿಂಗನಿಗೆ ಏನಾದರೂ ಆಗಿದೆಯೇ ಎಂದು ಸೂಕ್ಷ್ಮವಾಗಿ ನೋಡಿದ ಗುಂಡು ದೊಡ್ಡಪ್ಪನ ಕೈಲಿದ್ದ ಬರ್ಕಾವನ್ನು ನೋಡಿದ. ಮೂತಿಗೆಲ್ಲ ಮಣ್ಣು ಮೆತ್ತಿಕೊಂಡು ನಿಂತಿದ್ದ ಗುಂಡು ಬರ್ಕಾವನ್ನು ಹಿಡಿಯಲು ಮಣ್ಣನ್ನೆಲ್ಲ ಅಗೆದು ಗುಂಡಿ ತೋಡಿದ್ದನ್ನು ದೊಡ್ಡಪ್ಪ ಹೇಳುತ್ತಿದ್ದರೆ ‘ಈ ಮಹೇಶನ ಕತೆ ಕೇಳದೆ ಇದ್ದರೆ ತಾನು ದೊಡ್ಡಪ್ಪನ ಹಿಂದೆ ಹೋಗಿ ಗುಂಡ (ಡಿಂಗ)ನ ಸಾಹಸ ನೋಡಬಹುದಿತ್ತು’ ಎನ್ನಿಸಿ, ತೋಟದಿಂದ ದಾಟುತ್ತಾ ಪುನಃ ಕತೆಗೆ ಇಳಿದ ಮಹೇಶನ ಮೇಲೆ ಗುಂಡನಿಗೆ ಸಿಟ್ಟು ಬಂತು.

ಮೈ ಕೊಡವುತ್ತಾ ನಿಂತ ಗುಂಡು ಬರ್ಕವನ್ನು ಮಹೇಶ ಮುಟ್ಟುತ್ತಲೇ ಗುರ್ ಎನ್ನುತ್ತಾ ಹಿಡಿದೆಳೆಯಿತು. ■



# ಋತು ಸಂಹಾರ

ಇ.ಆರ್. ರಾಮಚಂದ್ರನ್

ಅಮರಾವತಿಯಲ್ಲಿ ಇಂದ್ರ ತನ್ನ ಋತುಗಳನ್ನು ಕರೆಸಿದ. ವಸಂತ, ಬೇಸಿಗೆ, ಮಳೆ ಮತ್ತು ಚಳಿಗಾಲಗಳು ಬಂದು ಕೂತ್ವು.

"ನಾನು ನಿಮ್ಮ ಕಾನ್ಫಿಡೆನ್ಷಿಯಲ್ ರಿಪೋರ್ಟ ಬರೆದಿದೀನಿ. ಏಸಿಆರ್ನ ಇಲ್ಲಿ ಎಲ್ಲರ ಮುಂದೆ ಓದೋದಿಲ್ಲ. ರಿಲಾಕ್ಸ್. ಆದರೂ ಜನರಲ್ ಆಗಿ ವಿಷಯ ಒಂದಿಷ್ಟು ಹೇಳಬೇಕಾಗಿದೆ.'

ಬೆವತು ಕೂತಿದ್ದವರ ಮುಖಗಳಲ್ಲಿ ಸ್ವಲ್ಪ ನಗು ಕಾಣಿಸಿತು.

"ನಾನು ಮಳೆಗಾಲಕ್ಕೆ ಬರ್ತೀನಿ... ನೀನು ಈ ವರ್ಷ ಕೆಲಸ ಚೆನ್ನಾಗಿ ಮಾಡಿದೀಯ, ಒಪ್ತೀನಿ. ಆದ್ರೂ ಕೆಲ್ಸ ತೀರಾ ಸೀರಿಯಸ್ ಆಗಿ ತೊಗೊಂಡು ನಿನ್ನ ಲಿಮಿಟ್ಸ್ ಕ್ರಾಸ್ ಮಾಡ್ತಿದೀಯ!.."

"ಹೇಗೆ ಸಾರ್?"

"ಅಲ್ಲಯ್ಯಾ... ಮರುಭೂಮೀಲಿ 50 ಡಿಗ್ರೀಲಿ ಅರಬ್ಬರು ಬಾದಾಮಿ, ಖರ್ಜೂರ ತಿನ್ಕೊಂಡು ಖುಶಿಯಾಗಿ ಅವ್ರ ಒಂಟೆಗಳನ್ನ ಓಡಿಸ್ಕೊಂಡು ಅಥವ ರೋಲ್ಸ್ರಾಯ್ಸ್ ಬುಗ್ಗೋಟಿ, ಬೆಂಝ್ ಬಿಡ್ಕೊಂಡು ಓಡಾಡ್ತಾ ಇರ್ತಾರೆ... ಅವರಿಗೆ ಮಳೆ ಅಂದ್ರೆ ಆಗಲ್ಲಾಂತ ನಿಂಗೆ ಚೆನ್ನಾಗಿ ಗೊತ್ತು. ನೀನು ಅಲ್ಲಿ ಹೋಗಿ ಹುಯ್ಯೋ ಹುಯ್ಯೋ ಮಳೆರಾಯ ಅಂತ ಹುಯ್ದಿದಿಯಲ್ಲಾ... ನಿನಗೆ ಯಾರು ಪರ್ಮಿಷನ್ ಕೊಟ್ರು ನಿನ್ನ ಏರಿಯಾ ಜ್ಯುರಿಸ್ಡಿಕ್ಷನ್ ಕ್ರಾಸ್ ಮಾಡಕ್ಕೆ? ಅಶ್ವಿನಿ ನಕ್ಷತ್ರ ಮತ್ತು  ಭರಣೀಲಿ ಮಳೆ ಹುಯ್ಯಕ್ಕೆ ಕರ್ನಾಟಕಕ್ಕೆ ನಾನು ಹತ್ತು ಸಾವಿರ ವರ್ಷದ ಹಿಂದೇನೇ ಸ್ಯಾಂಕ್ಷನ್ ಮಾಡೀದೀನಿ..  ಅಲ್ಲಿ ಹೊಡೀದೇ ನೀನು ಇದ್ದಕಿದ್ದಂತೆ  ದುಬೈಗೆ ಹೋಗಿ ಸೊಂಟದ ತನಕ ಮಳೆ ಹ್ಯಾಗೆ ಹೊಡೆದೆ? ಅಲ್ಲಿ ಗಾಡಿಗಳು ಕೆಟ್ಹೋಗಿ ಇನ್ಸ್ಯೂರೆಂಸ್ ಹಣ ನನ್ನ ಕಟ್ಟಕ್ಕೆ ಕೇಳಿದಾರೆ... ಕುಬೇರನ್ನ ಚೆಕ್ ಮಾಡಕ್ಕೆ ಕಳಿಸ್ತಿದೀನಿ... ನಾಳೆ ಆಡಿಟ್ ಅಬ್ಜಕ್ಷನ್ ಬಂದ್ರೆ ನಾನು ಆನ್ಸರ್ ಮಾಡ್ಬೇಕಾಗುತ್ತೇ,.. ನೀವಲ್ಲ.. ಜ್ಞಾಪಕ ಇರ್ಲಿ!.."

"ಬಹಳ ಸಾರಿ ಸರ್. ನನ್ನ ಹೆಂಡತಿ ಸ್ವಾತಿ ಮಳೆ, ತಂಗಿಯರು – ತುಂತುರು ಮಳೆ, ಮತ್ತು ಜಡಿ ಮಳೆ – ನಡಿ ದುಬೈಗೆ ಹೋಗೋಣ ಅಂತ ನನ್ನೂ ಎಳಕೊಂಡು ಹೋಗ್ಬಿಟ್ರು ಸಾರ್. ಅಲ್ಲಿ ಷಾಪಿಂಗ್ ಮಾಲ್ಗಳು, ಬುರ್ಝ್ ಖಲೀಫ ಹೊಟೆಲ್ ನೋಡಿ ಎಕ್ಸೈಟ್ ಆಗ್ಬಿಟಟ್ಟರು. ಅಲ್ಲೇ ರೆಕಾರ್ಡ ಮಳೆ ಆಗೋಯ್ತು. ಇನ್ಯಾವತ್ತೂ ಹೀಗೆ ಮಾಡಲ್ಲ .. ಇದೊಂದು ಸರ್ತಿ ನನ್ನ ಎಕ್ಸ್ಯೂಸ್ ಮಾಡ್ಬಿಡಿ ಸಾರ್".

"ಆಲ್ಟಿಮೀಟರ್ ಕೆಲಸ ಮಾಡ್ತಿರ್ಲಿಲ್ಲ ಅಂತ ನನ್ನ ಹತ್ರ ಸುಳ್ಳು ಹೇಳಿದ್ಯಾ ಮತ್ತೆ? ಐರಾವತನ ಕೈಲಿ ಕಳಿಸಿ, ಅದು  ಕನ್ಫ್ಯೂಸ್ ಮಾಡ್ಕೊಂಡು, ಮೆಜಸ್ಟಿಕ್ನ ಕೆಎಸ್ಆರ್ಟಿಸಿ ಬಸ್ ಸ್ಟಾಂಡ್ಗೆ ಹೋಗ್ಬಿಟ್ಟು. ದೊಡ್ಡ ಫಜೀತಿ ಆಯ್ತು... ನೆಕ್ಸ್ಟ ಟೈಮ್ ಬಿ ಕೇರ್ಫುಲ್. ನೆಕ್ಸ್ಟ... ಬೇಸಿಗೆ.'

'ಯಸ್ ಸಾರ್.'

"ನಿಮ್ಹತ್ರ  ಸರ್ಪ್ಲಸ್ ಬಿಸಿಲು ಇದೆ ಅಂತ ಒಂದೇ ಸಮ ಹೊಡೆಯೋದೇನ್ರೀ? ಮುಖ ಮೂತಿ ನೋಡ್ದೆ ಸುಡ್ತಾ ಇದ್ರಲ್ರೀ ಎಲ್ರನ್ನ ಡೇ ಅಂಡ್ ನೈಟ್?'



"ಸಾರಿ ಸರ್. ನನ್ನ ಮಕ್ಳು ಎಳೆ ಬಿಸಿಲು, ಹೊಂಬಿಸಿಲು ಇಬ್ರಿಗೂ ನಾವು ಚಿಕ್ಕಮಂಗಳೂರಿಗೆ ಮದುವೆಗೆ ಹೋಗಿದ್ದಾಗ ಮಲೇರಿಯ ಬಂದು ಮೈ ನಡುಕ ನಿಲ್ಲಲೇ ಇಲ್ಲ. ಅವರ್ನ ಹಾಟ್ ಟೆಂಪರೇಚರ್ ಜಾಗ ಇರೋ ಕಡೆ ಕರ್ಕೊಂಡು ಹೋಗಿ, ಇಲ್ಲದಿದ್ದರೆ ಉಳಿಯಲ್ಲಾ ಅಂತ ಡಾಕ್ಟರ್ ಹೇಳಿಬಿಟ್ರು. ಚೆನ್ನೈಗೆ ಹೋಗೋಣಾಂತ ಇದ್ವಿ... ನನಗೆ ಸಿಎಲ್ ಇರ್ಲಿಲ್ಲ ಸರ್. ಮನೇಲಿ ಇಟ್ಕೊಂಡೇ ವೆದರ್ ನಲ್ಲೇ ಅಡ್ಜಸ್ಟ್ ಮಾಡಿ ಟ್ರೀಟ್‌ಮೆಂಟ್ ಕೊಡಬೇಕಾಗಿ ಬಂತು ಸಾರ್. ಹೊಂಬಿಸಿಲುಗೆ ಈಗ ವಾಸಿ ಸಾರ್. ಸ್ಕೂಲ್ ಗೆ ಹೋಗ್ತಾಳೆ. ಚಿಕ್ಕೋವ್ಳು ಎಳೇಬಿಸಿಲುಗೆ ಇನ್ನೂ ಚಳಿ ಪೂರ್ತಿ ಹೋಗಿಲ್ಲ.'

"ಮನೇಲಿ ಹೀಟರ್ ಇಟ್ಕೊಂಡು ಟ್ರೀಟ್ಮೆಂಟು ಕೊಡಿ. ಊರ್‍ಗೆಲ್ಲಾ ಯಾಕೆ ಬಿಸಿ ಕೊಡ್ತೀರ? ಪಬ್ಲಿಕ್ಗೆ ಏನಾದ್ರೂ ಹೆಚ್ಚು ಕಡಿಮೆ ಆಗಿದ್ರೆ ಯಾರು ರೆಸಪಾನ್ಸಿಬಿಲಿಟಿ ತೊಗೊಳ್ತಾರೆ? ಎರಡು ತಿಂಗ್ಳು ಯಾರೂ ಮನೆಯಿಂದ ಹೊರಗೆ ಹೋಗ್ದೇ ಇರೋ ಹಾಗೆ ಮಾಡಿದ್ರಲ್ಲ... ತ್ರಿಮೂರ್ತಿಗಳು ನನಗೆ ಕಾಷನ್ ಮಾಡಿ ಹೋಗಿ ನೋಡ್ಕೊಂಡು ಬರಕ್ಕೆ ಹೇಳಿದ್ದರು... ನಾನು ಒಂದು ಸರ್ತಿ ಬಂದು ನೋಡಿ ಮತ್ತೆ ಕೋವಿಡ್-19 ಲಾಕ್ ಡೌನ್ ಆಗಿದೆ ಅಂದ್ಕೊಂಡೆ. ಅಲ್ಲಿ ನಿಮಗೆ ಯಾರಾದ್ರೂ ಗ್ಯಾರಂಟಿ ಪ್ರಾಮಿಸ್ ಮಾಡಿದಾರಾ.. ಪ್ರತಿ ತಿಂಗಳು ಇಷ್ಟು ಬಿಸಿಲು ಹೊಡೀಂತ?'

'ಇಲ್ಲ ಸಾರ್. ಸಾರಿ ಸಾರ್'.

'ಈಗ ಅಲ್ಲಿ ಇರೋ ಕಂಪ್ಲೇಂಟ್ ನೋಡಿದ್ರೆ ನಂಗೇ ಹೆದರ್ಕೆ ಆಗುತ್ತೆ.. ಡಿಹೈಡ್ರೇಷನ್, ಲೊ ಬಿಪಿ, ಹೆಡ್ ಏಕ್, ಕಣ್ಣಲ್ಲಿ ಪ್ರಾಬ್ಲಂ, ಡಿಪ್ರೆಷನ್ ಎಲ್ಲಾರ್‍ಗೂ... ಓಲ್ಡ್, ಯಂಗ್, ಮಕ್ಳು ಮತ್ತು ಮಹಿಳೆಯರು... ಎಲೆಕ್ಷನ್ ಅಂದ್ರಿ... ಯಾರಾದ್ರೂ ಪಾಲಿಟೀಷಿಯನ್ ದುಡ್ಕೊಟ್ಟು ಈ ಟೈಮ್ನಲ್ಲಿ ಹೀಗೆ ಮಾಡೂಂತ ಹೇಳ್ಕೊಟ್ರೇನ್ರಿ?.. ಆನ್ಸರ್ ಮಿ.?'

'ಇಲ್ಲ ಸಾರ್. ತಪ್ಪಾಯ್ತು ಸರ್. ನಮ್ ಹುಡುಗ್ರ ಹೆಲ್ತ್ ಇಂದ ಹೀಗೆ ಆಯ್ತು ಸಾರ್. ಇನ್ನು ಮುಂದೆ ಕೇರ್ಫುಲ್ ಆಗಿರ್ತೀನಿ.'

'ಹುಷಾರಾಗಿರಿ.. ನೆಕ್ಸ್ಟ್ ಟೈಮ್ ಹೀಗಾದ್ರೆ ಡಿಸ್ಮಿಸ್ ಆಗುತ್ತೆ....... ಅಮ್ಮ ವಸಂತ ಋತು,.. ನಿನಗೆ ಇಲ್ಲಿ ಇನ್ಮೇಲೆ ಕೆಲಸ ಏನೂ ಇರಲ್ಲ.. ಮುಂದೆ ಈ ಏರಿಯಾನ ಪುಣೆ ರಿಸರ್ಚ್ ಟೀಮು "ಇದೊಂದು ಪರ್ಮನೆಂಟ್ ಹೀಟ್ ವೇವ್ ಜಾಗ' ಅಂಥ ಘೋಷಣೆ ಮಾಡಿದಾರೆ. 2020 ಯಿಂದ 2100 ತನಕ... ಸಮುದ್ರ ಟೆಂಪರೇಚರ್ 3 ರಿಂದ 5 ಡಿಗ್ರಿ ಜಾಸ್ತಿ ಆಗುತ್ತಂತೆ... ನೀನು ಕಾಶ್ಮೀರಕ್ಕೆ ಹೋಗೋದು ಒಳ್ಳೆದು.. ನೀನು ಹೂಂ ಅಂದ್ರೆ

ಇವತ್ತೇ ಟ್ರಾನ್ಸ್‌ಫರ್ ಮಾಡ್ತೀನಿ'.

'ಅಲ್ಲಿ ಬಹಳ ಚಳಿ ಸಾರ್'.

'ಅಲ್ಲಿ ಹೀಟರ್ ಹಾಕ್ಕೊಂಡು ಮ್ಯಾನೇಜ್ ಮಾಡಮ್ಮ.. ನಾನು ಇಲ್ಲಿಂದ್ಲೇ ಹೀಟರ್ಗೆ ಸಾಂಕ್ಷನ್ ಮಾಡ್ತಿನಿ.... ಈಗ ಅಲ್ಲಿ ಆರ್ಟಿಕಲ್ 370 ತೆಗೆದಿದಾರೆ. ನೀನು ಅಲ್ಲಿ ಲ್ಯಾಂಡ್ಸ್ ಕೊಂಡುಕೋಬಹುದು. ಅಲ್ಲೇ ಸೆಟಲ್ ಆಗಿ ಒಬ್ಬ ಕಶ್ಮೀರಿನ ಮದುವೆ ಮಾಡ್ಕೊಂಡು ಸುಖವಾಗಿರ್ಬಹುದು. ಯೋಚ್ನೆ ಮಾಡು.. ಇಲ್ಲಿ ವಸಂತ ಋತು ಅದೆಲ್ಲಾ ಮುಗೀತಮ್ಮ.. ಅದೆಲ್ಲಾ ಕನ್ನಡ ಪದ್ಯದಲ್ಲಿ,.. ಭಾವಗೀತೆಗೇ ಮುಗಿದುಹೋಯ್ತು'.

'ನೋಡ್ತೀನಿ ಸಾರ್'.


' ನೆಕ್ಸ್ಟ್, ಚಳಿಗಾಲ.... ಅಲ್ಲಯ್ಯಾ ಈ ಮಿಟಿಂಗಿಗೆ ವುಲ್ಲನ್ ಡ್ರೆಸ್ ಹಾಕಿಕೊಂಡು ಬಂದ್ಯಲ್ಲಾ,.. ಇವರಿಬ್ಬರಿಂದ ಹೋಲ್ ಕಂಟ್ರಿ ಸುಡುತಾ ಇದೆ. ವೆದರ್ ಮ್ಯಾಪ್ನಲ್ಲಿ ನಮ್ಮ ಕಂಟ್ರಿನ ಬ್ಯಾಡಗಿ ಕೆಂಪು ಮೆಣಸಿನಕಾಯಿ ಬಣ್ಣ ಹಾಕಿ ತೋರಿಸ್ತಾ ಇದಾರೆ ಬಿಬಿಸಿ – ಬುರುಡೆ ಬ್ರಾಡ್ಕಾಸ್ಟ್‌ನವರು! ಏನಿದ್ರೂ ಚಳಿ ಇನ್ನು ರಷ್ಯದಲ್ಲಿ ಅಷ್ಟೆ. ಎಸ್ಕಿಮೊಗಳು ಎಲ್ಲೆಲ್ಲಿ ಇರುತ್ತೆ ಅಂತ ನೋಡಿ ಹೇಳು. ಫಿನ್ಲಾಂಡ್ಗೆ ಹೋಗ್ತಿಯಾ ? ಆರು ತಿಂಗಳು ಹಗಲು, 6 ತಿಂಗಳು ರಾತ್ರಿ ಅಲ್ಲಿ.. ಅಲ್ಲಿಗೆ ಟ್ರಾನ್ಸ್‌ಫರ್ ಮಾಡ್ತೀನಿ'.

'ಫ್ಯಾಮಿಲಿಗೆ ಅಲ್ಲಿ ತಡೆಯೋಕ್ಕೆ ಆಗಲ್ಲ ಸಾರ್ ಆ ಚಳೀನ'.

'ಅಲ್ಲಿ ಪೂರ್ತಿ ಬಿಲ್ಡಿಂಗಿಗೇ ಹೀಟರ್ ಹಾಕಿರ್ತಾಪ್ಪಾ... ನೀನು ಷಾರ್ಟ್ಸ್ ಟಿ ಷರ್ಟನಲ್ಲಿ ಓಡಾಡಬಹುದು..... ನೋ ಪ್ರಾಬ್ಲಂ... ನಾಳೆ ಸಾಯಂಕಾಲದ ಒಳಗೆ ಹೇಳು. ಕೊನೇ ಮಾತು... ನಿಮ್ಮ ಕೆಲಸದಲ್ಲಿ ನಿಗಾ ಇಡಿ. ಲಿಮಿಟ್ನಲ್ಲಿ ಇರಿ. ಹೀಗೇ ಮುಂದೆ ಆದ್ರೆ ತ್ರಿಮೂರ್ತಿಗಳು ನನ್ನ ರಿಸೈನ್ ಮಾಡು ಅಂತಾರೆ.. ನಾನು ನಿಮ್ಮನ್ನ ಸೇವ್ ಮಾಡಕ್ಕೆ ಆಗಲ್ಲ.. ಟೇಕ್ ಕೇರ್'.

'ಆಗ್ಲಿ ಸಾರ್! ಥಾಂಕ್ಯೂ ಸಾರ್.'

■



# ಫ್ರಾನ್ಸ್ ಪ್ರವಾಸದಲ್ಲಿ ಒಂದು ನಿಗೂಢ ಪ್ರಸಂಗ

ಲಕ್ಷ್ಮೀ ಶ್ರೀಧರ್

ಕೆಲವು ವರ್ಷಗಳ ಹಿಂದೆ ಬೇಸಿಗೆ ರಜೆಯಲ್ಲಿ ನಾವು ಫ್ರಾನ್ಸ್ ದೇಶದ ಪ್ರವಾಸಕ್ಕೆ ಹೋಗಿದ್ದೆವು. ನನ್ನ ಮಗಳು ಪ್ಯಾರಿಸ್‌ನಲ್ಲಿ ಪ್ಯಾಶ್ಚರ್ ಇನ್ಸ್ಟಿಟ್ಯೂಟ್‌ನಲ್ಲಿ ಕೆಲಸ ಮಾಡುತ್ತಿದ್ದಳು. ವಾರಾಂತ್ಯ ಬಂದಾಗಲೆಲ್ಲ ಹತ್ತಿರದ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಲು ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದಳು.

ಒಮ್ಮೆ ಪ್ಯಾರೀಸ್ ನಿಂದ 3 ಗಂಟೆಗಳ ಕಾಲ ರೈಲಿನಲ್ಲಿ ಲಾಹ್ರಾವ್ ಎಂಬ ಪುಟ್ಟ ಊರಿಗೆ ಹೋಗಿ ಅಲ್ಲಿಂದ ಬಸ್ಸಿನಲ್ಲಿ ಏತ್ರಿತಾತ್ ಎಂಬ ಸ್ಥಳಕ್ಕೆ ಹೋದೆವು. ವಿಶಾಲವಾದ ಬ್ರಿಟಿಷ್ ಕಡಲುಗಾಲುವೆಯ ತೀರದಲ್ಲಿರುವ ಈ ಪ್ರದೇಶವು ತನ್ನ ಸಹಜವಾದ ಪ್ರಕೃತಿ ಸೌಂದರ್ಯಕ್ಕೆ ಹೆಸರಾಗಿದೆ. ಸಮುದ್ರತೀರದ ಕೋಡುಗಲ್ಲುಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಎತ್ತರವಾದ ವಿವಿಧ ಆಕಾರದ ಕೋಡುಗಲ್ಲುಗಳನ್ನು ಏರಿ ಸಮುದ್ರವನ್ನು ವೀಕ್ಷಿಸುವುದು ರೋಚಕ ಅನುಭವವನ್ನು ನೀಡುತ್ತದೆ. ದಿನ ನಿತ್ಯ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುತ್ತದೆ. ನಾವು ಸಹ ಅಲ್ಲಿಯ ಸೌಂದರ್ಯವನ್ನು ಸವಿದು, ಅಲ್ಲೇ ಸಮುದ್ರದಡದಲ್ಲಿ ನಡೆದಾಡಿ ಸಮಯ ಕಳೆದು ಮಧ್ಯಾಹ್ನದ ಊಟಕ್ಕೆ ಹೋದೆವು.

ಊಟವಾದ ನಂತರ ಮತ್ತೆ ಬಸ್ಸಿನಲ್ಲಿ ಪ್ರಯಾಣಿಸಿ ಲಾಹ್ರಾವ್ ಎಂಬ ಊರಿಗೆ ಬಂದೆವು. ಅಲ್ಲಿಂದ ಪ್ಯಾರಿಸ್‌ಗೆ ಹೋಗಲು ನಮ್ಮ ರೈಲು ಹಿಡಿಯಬೇಕಿತ್ತು. ನಮ್ಮ ರೈಲಿಗಾಗಿ ಮೂರು ಗಂಟೆಗಳ ಕಾಲ ಕಾಯಬೇಕಿತ್ತು. ನಾನು ಮತ್ತು ನನ್ನ ಪತಿ ರೈಲ್ವೆ ನಿರೀಕ್ಷಣಾ ಕೊಠಡಿಯಲ್ಲಿ ಸುಮ್ಮನೆ ಕುಳಿತು ಸುತ್ತ ಮುತ್ತ ನೋಡುತ್ತಾ ಕಾಲ ಕಳೆದೆವು. ನನ್ನ ಮಗಳು ಪುಸ್ತಕ ಓದುತ್ತಾ ಕುಳಿತಳು. ನನ್ನ ಅಕ್ಕಪಕ್ಕ ಕುಳಿತವರನ್ನು ಹಾಗೂ ಅಲ್ಲಿ ಓಡಾಡುವವರನ್ನು ಗಮನಿಸುತ್ತಾ ನಾನು ಕಾಲ ಕಳೆಯುತ್ತಿದ್ದೆ. ಹೊರಗಡೆ ತುಂಬಾ ಚಳಿ ಗಾಳಿ ಇತ್ತು. ಆ ಪುಟ್ಟ ನಿರೀಕ್ಷಣಾ ಕೋಣೆಯಲ್ಲಿ ಕೇವಲ 20 ಜನ ಕೂರಬಹುದು.

ಸ್ವಲ್ಪ ಹೊತ್ತು ಕಳೆದ ಮೇಲೆ ಅಲ್ಲಿಗೆ ಏಳೆಂಟು ಜನರ ಒಂದು ಗುಂಪು ಬಂದಿತು. ಅವರೆಲ್ಲ ಫ್ರೆಂಚ್ ಭಾಷೆಯಲ್ಲಿ ಜೋರಾಗಿ ಮಾತನಾಡುತ್ತಾ ನಗುತ್ತಿದ್ದ ಕಾರಣ ಎಲ್ಲರ ಗಮನ ಅವರ ಕಡೆ ಹರಿಯಿತು. ಅವರಲ್ಲಿ ಇಬ್ಬರು ಹುಡುಗಿಯರು, ಐದಾರು ಯುವಕರು ಇದ್ದರು. ಅವರಲ್ಲಿ ಒಬ್ಬನು ತಳ್ಳುವ ಗಾಡಿಯಲ್ಲಿ ತನ್ನ ಮಗುವನ್ನು ಕೂಡಿಸಿಕೊಂಡು ಬಂದಿದ್ದ. ಅವರೆಲ್ಲ ತಮ್ಮ ಮಾತಿನಲ್ಲೇ ಮುಳುಗಿದ್ದರು. ನಂತರ ಮಗುವಿನ ಕೈಗೆ ಹಾಲಿನ ಬಾಟಲಿ ಕೊಟ್ಟೊಡನೆ ಅದು ಹಾಲು ಕುಡಿಯುತ್ತಾ ಹಾಗೆಯೇ ನಿದ್ರಿಸಿತು. ಮಗುವನ್ನು ಸುಮ್ಮನೆ ನೆಪ ಮಾತ್ರಕ್ಕೆ ಕರೆತಂದಂತೆ ನನಗೆ ತೋರಿತು.

ಅವರೆಲ್ಲ ಜೋರಾಗಿ ಮಾತಾಡುತ್ತಿದ್ದಾಗ, ಅವರ ಪೈಕಿ ಒಬ್ಬ ಯುವಕ ಆ ಕೊಠಡಿಯಲ್ಲಿದ್ದ ಕಸದ ಬುಟ್ಟಿಗಳ ಬಳಿಯೇ ನಿಂತಿದ್ದು ನೋಡಿ ನನಗೆ ಅಸಹ್ಯವೆನಿಸಿತು. "ಅವನು ಯಾಕೆ ಆ ಗಲೀಜಿನ ಹತ್ತಿರ ನಿಂತಿದ್ದಾನೆ" ಎಂದು ನನ್ನ ಮಗಳನ್ನು ಕೇಳಿದೆ.

ಅವಳು "ಅದೆಲ್ಲ ನಿನಗ್ಯಾಕಮ್ಮ, ಸುಮ್ಮನೆ ಕೂತ್ಕೋ!" ಎಂದಳು. ರೈಲು ನಿಲ್ದಾಣದ ಸೆಕ್ಯೂರಿಟಿಯವನು ಅಲ್ಲೇ ಓಡಾಡುತ್ತಿದ್ದ. ಅವನು ಸಹ ಈ ಗುಂಪಿನ ಚಲನವಲನಗಳನ್ನು ಗಮನಿಸುತ್ತಿದ್ದನೋ ಏನೋ! ಆತ ಹಲವು ಬಾರಿ ಆ ಕೋಣೆಯೊಳಗೆ ಬಂದು ಹೋದ. ನಾನು ನೋಡುತ್ತಾ ಇದ್ದಂತೆ ಮೂಲೆಯಲ್ಲಿದ್ದ ಒಂದು ಸ್ವಿಚ್ ಆಫ್ ಮಾಡಿ ಹೋದ. ನಾನು ಏಕಿರಬಹುದೆಂದು ಯೋಚಿಸಿದೆ. ನಂತರ ಆ ಗುಂಪಿನವರೂ ತಮ್ಮ ಚೀಲದಿಂದ

ಏನೋ ತಿಂಡಿ ಪೊಟ್ಟಣ ಬಿಚ್ಚಿ ತಿಂದು ಕಸದ ಬುಟ್ಟಿಗೆ ಹಾಕಿದರು.

ಅಷ್ಟರಲ್ಲಿ ಮಗುವನ್ನು ಕರೆದು ತಂದವನು ಗಾಡಿ ತಳ್ಳುತ್ತಾ ಹೊರಗೆ ಹೋದ. ನಾವು ಕುಳಿತಿದ್ದ ಕೋಣೆಯಿಂದ ಹೊರಗೆ ನಡೆಯುವುದು ಕಾಣುತ್ತಿತ್ತು. ನಾನು ಕುತೂಹಲದಿಂದ ಅವರನ್ನೇ ನೋಡುತ್ತಿದ್ದಾಗ ಬೇರೊಬ್ಬ ಹೊಸ ವ್ಯಕ್ತಿ ಎಲ್ಲಿಂದಲೋ ಬಂದು ಆ ಮಗುವನ್ನು ಮತ್ತು ಆ ಯುವಕನನ್ನು ಮಾತಾಡಿಸುವುದು ನನ್ನ ಗಮನಕ್ಕೆ ಬಂತು. ಇದ್ದಕ್ಕಿದ್ದಂತೆ ಒಂದು ಪ್ಯಾಕೆಟ್ ಮಗುವಿನ ತಂದೆಯ ಕೈಗೆ ಹಸ್ತಾಂತರವಾಯಿತು. ಇವರ ವ್ಯವಹಾರ ಏಕೋ ಅನುಮಾನಾಸ್ಪದವಾಗಿ ತೋರಿತು. ನೋಡುತ್ತಿದ್ದಂತೆ ಆ ಕೋಣೆಯಲ್ಲಿದ್ದವರೆಲ್ಲ ಎದ್ದು ಬೇರೆ ಬೇರೆ ದಿಕ್ಕಿನಲ್ಲಿ ಹೊರಟು ಹೋದರು. ಅವರನ್ನು ನೋಡುತ್ತಿದ್ದ ನನ್ನ ಮಗಳು "ಅಮ್ಮ, ಇವರೆಲ್ಲ ಒಳ್ಳೆ ಕಳ್ಳರ ತರಹ ಕಾಣಿಸುತ್ತಾರೆ" ಎಂದಳು.

ಸಧ್ಯ ಗಲಾಟೆ ಕಡಿಮೆಯಾಯಿತು ಎಂದು ನಿಟ್ಟುಸಿರು ಬಿಟ್ಟೆ. ಆ ಸೆಕ್ಯೂರಿಟಿಯವನು ಗಂಭೀರವಾಗಿ ತನ್ನ ಡ್ಯೂಟಿ ಮಾಡುವ ಹಾಗೆ ಒಳಗೂ ಹೊರಗೂ ಓಡಾಡುತ್ತಿದ್ದ. ನಮ್ಮ ರೈಲು ಬರಲು ಇನ್ನೂ ಅರ್ಧ ಗಂಟೆ ಇತ್ತು. ಅಷ್ಟರಲ್ಲಿ ಸ್ಟೇಷನ್ ಕ್ಲೀನ್ ಮಾಡುವ ಒಬ್ಬ ಕೆಲಸಗಾರ ಒಳಗೆ ಬಂದು ಕಸದ ಬುಟ್ಟಿ ತುಂಬದಿದ್ದರೂ ಸಹ ಬುಟ್ಟಿಗೆ ಹಾಕಿಟ್ಟಿದ್ದ ಕವರ್‌ಗಳನ್ನು ಬದಲಾಯಿಸಿದ. ಅವನು ಹಸಿ ಕಸ ಮತ್ತು ಒಣ ಕಸ ಎರಡನ್ನು ಒಂದೇ ಕವರಿನಲ್ಲಿ ಹಾಕಿಕೊಂಡು ಅವಸರದಿಂದ ಹೊರಟು ಹೋದ. ನನ್ನ ಮಗಳು ಸಹ ಅವನನ್ನೇ ಗಮನಿಸಿದಳು ಅನಿಸುತ್ತದೆ. "ಅಮ್ಮ, ಅವನ ಕಣ್ಣು ನೋಡಿದೆಯಾ? ಒಳ್ಳೆ ನಶೆಯಲ್ಲಿರುವಂತೆ ಕಾಣಿಸುತ್ತಿತ್ತು" ಎಂದಳು. ನಾವಿಬ್ಬರೂ ಹೊರಗೆ ನೋಡುತ್ತಿದ್ದಂತೆ ನಮಗೆ ಆಘಾತವಾದ ದೃಶ್ಯವೆಂದರೆ ಕಸದ ಕವರ್ ತೆಗೆದುಕೊಂಡು ಹೋದ ಆ ಕೆಲಸಗಾರ ಎದುರಿಗೆ ಬಂದ ಇನ್ನೊಬ್ಬ ವ್ಯಕ್ತಿಯ ಕೈಗೆ ಅದನ್ನು ಕೊಟ್ಟು ಬೇಗ ಕಣ್ಮರೆಯಾದ. ಆಶ್ಚರ್ಯವೆಂಬಂತೆ ಆ ಗುಂಪಿನವರು ಒಬ್ಬೊಬ್ಬರೇ ಕೋಣೆಯ ಒಳಗೆ ಬಂದು ಸುತ್ತಲೂ ಏನಾದರೂ ಸುಳಿವು ಬಿಟ್ಟಿರಬಹುದೇನೋ ಎಂದು ಕಣ್ಣಾಡಿಸಿ ಹೋದರು. ನಂತರ ಒಂದು ಗಂಡು ಹೆಣ್ಣಿನ ಜೋಡಿ ಮತ್ತೆ ಒಳಗೆ ಬಂದು ಆ ಕಸದ ಬುಟ್ಟಿಯ ಅಕ್ಕ ಪಕ್ಕ ಕಣ್ಣಾಡಿಸಿ ಹೊರಟು ಹೋದರು. ಅವರು ಸಹ ಯಾವುದೋ ನಶೆಯಲ್ಲಿದ್ದಂತೆ ತೋರಿತು. ಇಷ್ಟೆಲ್ಲಾ ಆದಮೇಲೆ ಕೊನೆಗೆ ಬಂದವರು ಯಾರು ಗೊತ್ತಾ? ಆ ಸೆಕ್ಯೂರಿಟಿ ಅವನು. ಏನೋ ಮರೆತಂತೆ ಒಳಗೆ ಬಂದವನು ಮೂಲೆಯಲ್ಲಿದ್ದ ಸ್ವಿಚ್ ಅನ್ನು ಆನ್ ಮಾಡಿ ಏನು ಅರಿಯದಂತೆ ಹೊರಟು ಹೋದ. ಎಲ್ಲವೂ ನಿಗೂಢ ಎನಿಸಿತು. ಇಷ್ಟು ಹೊತ್ತು ನಡೆದ ನಾಟಕದ ಹಿಂದೆ ಒಂದು ದೊಡ್ಡ ಗ್ಯಾಂಗ್ ಇರಬೇಕು. ಇದು ಮಾದಕ ದ್ರವ್ಯವನ್ನು ಕಳ್ಳ ಸಾಗಣೆ ಮಾಡುವ ಒಂದು ತಂತ್ರವಿರಬೇಕು ಎಂದು ನನಗೆ ತೋರಿತು. ಆ ಸೆಕ್ಯೂರಿಟಿಯವನು ಸಿಸಿಟಿವಿ ಕ್ಯಾಮೆರಾದಲ್ಲಿ ರೆಕಾರ್ಡ್ ಆಗದಂತೆ ಎಚ್ಚರಿಕೆ ವಹಿಸಿ, ಆ ನಿರೀಕ್ಷಣಾ ಕೋಣೆಯಲ್ಲಿದ್ದ ಸಿಸಿ ಕ್ಯಾಮೆರಾವನ್ನು ಆಫ್ ಮಾಡಿ, ಎಲ್ಲಾ ವ್ಯವಹಾರ ಮುಗಿದ ಮೇಲೆ ಆನ್ ಮಾಡಿದ್ದೇಕೆ? ಅವನೂ ಈ ಕೃತ್ಯದಲ್ಲಿ ಶಾಮೀಲಾಗಿದ್ದಾನೆಯೇ? ನೂರಾರು ಯೋಚನೆಗಳು ತಲೆಯಲ್ಲಿ ಮೂಡಿಬಂದವು. ಅಷ್ಟರಲ್ಲಿ ನಮ್ಮ ರೈಲು ಪ್ಲಾಟ್‌ಫಾರ್ಮ್ ಮೇಲೆ ಬಂದು ನಿಂತ ಕಾರಣ ನಾವು ಅಲ್ಲಿಂದ ಹೊರಟುಬಿಟ್ಟೆವು. ಏತ್ರಿತಾತ್ ಪ್ರದೇಶದ ನಿಸರ್ಗ ಸೌಂದರ್ಯವನ್ನು ಮನದಲ್ಲಿ ತುಂಬಿಕೊಂಡು ಜೊತೆಗೆ ಈ ನಿಗೂಢ ಪ್ರಸಂಗವನ್ನು ಮೆಲುಕು ಹಾಕುತ್ತಾ ಪ್ಯಾರಿಸ್‌ಗೆ ಹಿಂತಿರುಗಿದೆವು.

■

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**ದಂನಆ**

- ✓ ನೀವು ಹೇಗೆ ಮಾತನಾಡಬೇಕೆಂದರೆ ಇತರರು ನಿಮ್ಮನ್ನು ಕೇಳಿಸಿಕೊಳ್ಳಲು ಹಾತೊರೆಯಬೇಕು. ಹೇಗೆ ನೀವು ಕೇಳಿಸಿಕೊಳ್ಳಬೇಕೆಂದರೆ ಇತರರು ನಿಮ್ಮೊಡನೆ ಮಾತನಾಡಲು ಹಾತೊರೆಯಬೇಕು.
- ✓ ತರುಣ ಬರಹಗಾರರನ್ನು ಬರೆಯಲು ಪ್ರೋತ್ಸಾಹಿಸಬೇಕು ಆದರೆ ತಾವು ಬರಹಗಾರರಾಗಿದ್ದೇವೆ ಎಂಬ ಭ್ರಮೆಯಲ್ಲಿ ಇರದಂತೆ ಅವರನ್ನು ಎಚ್ಚರಿಸಬೇಕು.
- ✓ ಇಫ್ ವಿ ಜಡ್ಜ್ ಪೀಪಲ್ ನೊಬಡಿ ಈಸ್ ಅವರ್ಸ್, ಇಫ್ ವಿ ಅಂಡರ್‌ಸ್ಟಾಂಡ್ ಪೀಪಲ್ ಎವೆರಿಬಾಡಿ ಈಸ್ ಅವರ್ಸ್.
- ✓ ವಯಸ್ಸಾಯಿತೆಂದು ಖುಷಿ ಪಡಬೇಕಾದುದನ್ನು ನಿಲ್ಲಿಸಬೇಕಾಗಿಲ್ಲ. ಖುಷಿ ಪಡುವುದನ್ನು ನಿಲ್ಲಿಸಿದಾಗಲೇ ವಯಸ್ಸಾಗತೊಡಗುತ್ತದೆ.
- ✓ ಅವನು ಎಷ್ಟು ಸುಳ್ಳು ಹೇಳುತ್ತಾನೆಂದರೆ ತಾನು ಹೇಳಿದ ಸುಳ್ಳನ್ನು ತಾನೇ ನಂಬುವ ಸ್ಥಿತಿ ತಲುಪಿದ್ದಾನೆ.
- ✓ ಪರ್ಫೆಕ್ಷನ್ ಮೀನ್ಸ್ ಡೂಯಿಂಗ್ ದಿ ಬೆಸ್ಟ್ ಬಟ್ ಕಾನ್ಫಿಡೆನ್ಸ್ ಮೀನ್ಸ್ ನೋಯಿಂಗ್ ಹೌ ಟು ಹ್ಯಾಂಡಲ್ ದಿ ವರ್ಸ್ಟ್.
- ✓ ನಗಬೇಕಾದಾಗ ನಕ್ಕು ಬಿಡಿ. ಕ್ಷಮೆ ಕೇಳಬೇಕಾದಾಗ ಕೇಳದೆ ಇರಬೇಡಿ. ನಿಮ್ಮ ಕೈಲಿ ಬದಲಾಯಿಸಲು ಸಾಧ್ಯವಿಲ್ಲದ್ದನ್ನು ಬಿಟ್ಟುಬಿಡಿ.
- ✓ ದಿ ಬೆಸ್ಟ್ ವೆ ಟು ವಿನ್ ಎ ವಾರ್ ಈಸ್ ಟು ಲರ್ನ್ ನಾಟ್ ಟು ಫೈಟ್ ಒನ್.
- ✓ ಸಾಧಕರು ಯಾರೂ ತಮ್ಮ ಸಾಧನೆಗಳ ಬಗ್ಗೆ ಹೇಳಿಕೊಳ್ಳರು. ಅವರ ಸಾಧನೆಗಳೇ ಅವರ ಬಗ್ಗೆ ಹೇಳಿಕೊಳ್ಳುವಂತೆ ಮಾಡುತ್ತದೆ.
- ✓ ನಿಮ್ಮ ಬಳಿ ಎಷ್ಟು ಹಣ ಇದೆ ಎಂಬುದು ನಿಮಗೆ ಯಾವಾಗಲೂ ತಿಳಿದಿರುತ್ತದೆ ಆದರೆ ಎಷ್ಟು ಸಮಯ ಇದೆ ಎಂಬುದು ಗೊತ್ತಿರುವುದಿಲ್ಲ.
- ✓ ಇಫ್ ಯು ನೊ ಹೌ ಸೂನ್ ಪೀಪಲ್ ಫರ್‌ಗೆಟ್ ದಿ ಡೆಡ್ ಯು ವಿಲ್ ಸ್ಟಾಪ್ ಲಿವಿಂಗ್ ಟು ಇಂಪ್ರೆಸ್ ಪೀಪಲ್.
- ✓ ಭರವಸೆ ಕಳೆದುಕೊಳ್ಳುವುದು ಬೇಡ. ಒಂದು ಎಲೆಯಿಂದ ಕಾಡು ಪ್ರಾರಂಭವಾಗಲು ಸಾಧ್ಯ.
- ✓ ಬದುಕೇ ತಾತ್ಕಾಲಿಕ ಆಗಿರುವಾಗ ಸಮಸ್ಯೆಗಳು ಹೇಗೆ ಶಾಶ್ವತ?
- ✓ ದಿ ಓನ್ಲಿ ವೆ ಟು ಎಂಟರ್‌ಟೈನ್ ಸಂ ಪೀಪಲ್ ಈಸ್ ಟು ಲಿಸನ್ ಟು ದೆಮ್.

# ನಗೆಗಾರ ಗಾಂಧಿ

**ಬೇಲೂರು ರಾಮಮೂರ್ತಿ**

ಜೀವನದಲ್ಲಿ ಬರುವ ಎಲ್ಲ ಘಟನೆಗಳನ್ನೂ ಹಾಸ್ಯ ಮನೋಭಾವದಿಂದ ನೋಡುವ ಸ್ವಭಾವವನ್ನು ಮಹಾತ್ಮ ಗಾಂಧಿ ಬೆಳೆಸಿಕೊಂಡಿದ್ದರು. ಅವರ ಬದುಕಿನ ಕೆಲವು ಆಯ್ದ ಸಂಗತಿಗಳು ಹೀಗಿವೆ.

ಒಮ್ಮೆ ಆಘಾಖಾನ್ ಅರಮನೆಯಲ್ಲಿದ್ದಾಗ ಗಾಂಧಿಜಿಗೆ ಮಲೇರಿಯಾ ರೋಗ ತಗುಲಿತು. ಆಗ ಡಾ. ಬಿ.ಸಿ. ರಾಯ್ ಎನ್ನುವವರು ಸುಪ್ರಸಿದ್ಧ ಡಾಕ್ಟರು. ಅವರು ಆಗ ಮುಂಬೈನಲ್ಲಿದ್ದರು. ದೆಹಲಿ ಸರ್ಕಾರ ಮುಂಬೈಯಿಂದ ಡಾ. ಬಿ.ಸಿ. ರಾಯ್ ಅವರು ಬಂದು ಗಾಂಧಿಜಿಗೆ ಚಿಕಿತ್ಸೆ ಕೊಡಲು ಅನುಮತಿ ನೀಡಲಿಲ್ಲ. ಆದರೆ ಅನೇಕರು ಮನವಿ ಸಲ್ಲಿಸಿದ ಮೇಲೆ ಡಾ. ರಾಯ್ ಅವರು ದೆಹಲಿಗೆ ಬಂದು ಗಾಂಧಿಜಿಗೆ ಚಿಕಿತ್ಸೆ ಕೊಡಲು ಅನುಮತಿ ನೀಡಿದರು. ಡಾ. ರಾಯ್ ಅವರು ಗಾಂಧಿಜಿ ಅವರ ಬಳಿ ಬಂದು ಮಹಾತ್ಮ ಅವರೇ ನಾನು ಇಲ್ಲಿಗೆ ಯಾರಿಗೆ ಚಿಕಿತ್ಸೆ ನೀಡಲು ಬಂದಿದ್ದೀನಿ ಎಂದುಕೊಂಡಿದ್ದೀರಿ. ಮೋಹನ್ ದಾಸ್ ಕರಮ್ ಚಂದ್ ಗಾಂಧಿಯವರಿಗೋ ಇಲ್ಲಾ ನಮ್ಮ ರಾಷ್ಟ್ರದ 400 ಮಿಲಿಯನ್ ಭಾರತೀಯರನ್ನು ಪ್ರತಿನಿಧಿಸುತ್ತಿರುವ ವ್ಯಕ್ತಿಯನ್ನೋ? ಒಂದು ವೇಳೆ ಮಹಾತ್ಮಾ ಗಾಂಧಿ ಬದುಕಿದರೆ ಎಲ್ಲಾ 400 ಮಿಲಿಯನ್ ಭಾರತೀಯರೂ ಬದುಕುತ್ತಾರೆ. ಒಂದು ವೇಳೆ ಮಹಾತ್ಮಾ ಗಾಂಧಿ ಸತ್ತರೆ ಆ ಎಲ್ಲಾ 400 ಮಿಲಿಯನ್ ಭಾರತೀಯರೂ ಸತ್ತಂತೆಯೇ. ಎಂದರು. ಗಾಂಧಿಜಿ ಆ ಮಾತಿಗೆ ಏನೂ ಪ್ರತಿಕ್ರಿಯೆ ನೀಡಲಿಲ್ಲ. ಕೆಲವು ಕ್ಷಣಗಳ ನಂತರ ಗಾಂಧಿಜಿ ಆಯ್ತು ಡಾಕ್ಟರೇ, ನೀವು ನನಗೆ ಚಿಕಿತ್ಸೆ ನೀಡಿ ಪರವಾಗಿಲ್ಲ. ಆದರೆ ನನಗೊಂದು ಅನುಮಾನ ನೀವು ವೈದ್ಯಕೀಯ ಶಿಕ್ಷಣ ಪಡೆಯುವ ಬದಲು ಕಾನೂನು ಶಿಕ್ಷಣ ಏಕೆ ಪಡೆಯಲಿಲ್ಲ. ಏಕೆಂದರೆ ನಿಮ್ಮ ಮಾತಿನಲ್ಲಿ ವಾದ ಮಾಡುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ ಎಂದರು. ಅದಕ್ಕೆ ರಾಯ್ ಅವರು. ಒಂದಲ್ಲಾ ಒಂದು ದಿನ ಭಗವಂತನ ಅಚ್ಚು ಮೆಚ್ಚಿನ ಸೃಷ್ಟಿಯಾದ ಮಹಾತ್ಮಾ ಗಾಂಧಿಯನ್ನು ಚಿಕಿತ್ಸೆ ನೀಡಿ ಗುಣಮುಖನನ್ನಾಗಿ ಮಾಡುವ ಅವಕಾಶ ನನಗೆ ಸಿಗುತ್ತದೆ ಎಂದು ಆ ಭಗವಂತ ನನ್ನನ್ನು ವೈದ್ಯನನ್ನಾಗಿ ಮಾಡಿದ ಎಂದರು. ಚಿಕಿತ್ಸೆ ಪಡೆಯುತ್ತಾ ಗಾಂಧಿಜಿ ನಗುತ್ತಾ ಪರವಾಗಿಲ್ಲ ನೀವು ವೈದ್ಯರಾದರೂ ವಕೀಲರಂತೆಯೇ ವಾದ ಮಾಡುತ್ತೀರಿ ಎಂದರು.

ಇನ್ನೊಮ್ಮೆ ಒಬ್ಬ ಪತ್ರಿಕಾ ಪ್ರತಿನಿಧಿ ಗಾಂಧಿಜಿಗೆ ನೀವು ಯಾಕೆ ರೈಲಿನಲ್ಲಿ ಯಾವಾಗಲೂ ಮೂರನೇ ದರ್ಜೆಯ ಬೋಗಿಯಲ್ಲೇ ಪ್ರಯಾಣ ಮಾಡುತ್ತೀರಿ ಅಂತ ಕೇಳಿದ. ಗಾಂಧಿಜಿ ಏನು ಮಾಡುವುದು ನಮ್ಮ ದೇಶದ ಯಾವ ರೈಲಿನಲ್ಲೂ ನಾಲ್ಕನೇ ದರ್ಜೆಯ ಬೋಗಿಗಳು ಇಲ್ಲವೇ ಇಲ್ಲ ಹೀಗಾಗಿ ನಾನು ಮೂರನೇ ದರ್ಜೆಯ ಬೋಗಿಯಲ್ಲೇ ಪ್ರಯಾಣ ಮಾಡುತ್ತೇನೆ ಎಂದರು.

ಗಾಂಧಿಜಿಯ ಈ ರೀತಿಯ ಸರಳ ಮಾತುಕತೆಗಳೇ ಅವರನ್ನು ಎಲ್ಲಾ ವರ್ಗದ ಜನರ ನಡುವೆ ಜನಾನುರಾಗಿಯನ್ನಾಗಿ ಮಾಡಿತ್ತು. ಒಮ್ಮೆ ಭಾರತದ ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿದ ಅನೇಕ ಮಹನೀಯರುಗಳಲ್ಲಿ ಒಬ್ಬರಾದ ಚಕ್ರವರ್ತಿ ರಾಜಗೋಪಾಲಚಾರಿಯವರು ಗಾಂಧಿಜಿಯ ಬಗ್ಗೆ "ಅವರು ಜನರ ಜೊತೆ ಬೆರೆಯಲು ಬಹಳ ಸಂತೋಷ ಪಡುತ್ತಾರೆ. ಅವರು ತಾವೂ ನಗುತ್ತಾ, ಇತರರನ್ನೂ ನಗಿಸುತ್ತಾ, ಎಲ್ಲರಲ್ಲೂ ನಗುವಿನ ಮನೋಭಾವವನ್ನು ಪಸರಿಸುತ್ತಾ ಇರುವ ಗಣ್ಯ ವ್ಯಕ್ತಿ. ಸದಾ ತುಂಟಾಟವಾಡುವ ಮಕ್ಕಳನ್ನೂ, ಸದಾ ಸಂತಸದಲ್ಲಿರುವ ಮಹಿಳೆಯರನ್ನೂ ಗಾಂಧಿಜಿ ಬಹಳ ಮೆಚ್ಚುತ್ತಿದ್ದರು. ಮಕ್ಕಳೊಂದಿಗೆ ಆಡುವುದು ಗಾಂಧಿಜಿಯ ಬಹಳ ಇಷ್ಟದ

ಹವ್ಯಾಸಗಳಲ್ಲೊಂದು.

ಗಾಂಧಿಜಿಯ ಪರಮಾಪ್ತರಲ್ಲೊಬ್ಬರಾದ ಸರೋಜಿನಿ ನಾಯ್ಡು ಅವರು ಗಾಂಧಿಜಿಯ ಬಗೆಗೆ ಮಾತಾಡುತ್ತಾ, ಅವರನ್ನು ಬೆಳಗಿನ ಹೊತ್ತು ನೋಡುವುದೇ ಒಂದು ಚೆಂದ. ಅವರ ಬೆಳಗಿನ ನಗುವಿನ ಮೊಗವನ್ನು ಒಮ್ಮೆ ನೋಡಿಬಿಟ್ಟರೆ, ಅಂದಿನ ದಿನವೆಲ್ಲಾ ಬಹಳ ಮಧುರತೆಯಿಂದ ಕೂಡಿರುತ್ತದೆ. ಗಾಂಧೀಜಿಯ ನಗುವಿನಲ್ಲಿ ಅಂಥಾದ್ದೊಂದು ಶಕ್ತಿ ಇದೆ. ಅವರ ತುಸು ಬಾಗಿದ ನಡೆ, ಜನರನ್ನು ನೋಡುವ ರೀತಿ ಇವುಗಳಲ್ಲೇ ಒಂದು ರೀತಿಯ ಸದಭಿರುಚಿಯ ಹಾಸ್ಯ ಹೊಮ್ಮುತ್ತಿರುತ್ತದೆ. ಇದರ ಜೊತೆಗೆ ಅವರಿಗೆ ಇದ್ದ ಜೀವನೋತ್ಸಾಹ ಅವರನ್ನು ಭೇಟಿ ಮಾಡಿದವರನ್ನೂ ಬಡಿದೆಬ್ಬಿಸುತ್ತದೆ ಎಂದಿದ್ದರು.




ಇನ್ನೊಂದು ಸಂದರ್ಭದಲ್ಲಿ ಅವರು ಗಾಂಧಿಜಿ ನಗುತ್ತಾರೆ ಏಕೆಂದರೆ ಅವರು ಜೀವನದ ಎಲ್ಲ ಕಹಿ ಘಟನೆಗಳನ್ನೂ ಮರೆಯುವಂತೆ ಮತ್ತು ಗಾಂಧಿಜಿ ನಗುತ್ತಾರೆ ಅವರಿಗಿರುವ ದೇಶದ ಎಲ್ಲ ಸಮಸ್ಯೆಗಳ ಭಾರದ ಪರಿವೆಯನ್ನು ಮರೆಯಲು ಎಂದಿದ್ದರು.

ಈ ಎಲ್ಲಾ ಮಾತಿಗೆ ಕಳಸವಿಟ್ಟಂತೆ ಗಾಂಧಿಜಿ ಒಮ್ಮೆ ನನಗೇನಾದರೂ ಹಾಸ್ಯ ಪ್ರಜ್ಞೆ, ಹಾಸ್ಯ ಮನೋಭಾವ, ಹಾಸ್ಯವನ್ನು ಅರಗಿಸಿಕೊಳ್ಳುವ ಶಕ್ತಿ, ಹಾಸ್ಯವನ್ನು ಆಸ್ವಾದಿಸುವ ಗುಣ ಇವುಗಳು ಇಲ್ಲದೇ ಹೋಗಿದ್ದರೆ ಬಹಶ: ನಾನು ಎಂದೋ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ ಎಂದಿದ್ದರು. ಇವುಗಳಿಂದ ಗಾಂಧಿಜಿಯ ಬದುಕಿನಲ್ಲೂ ಹಾಸ್ಯ ಅದೆಂಥಾ ಮಹತ್ತರ ಪಾತ್ರ ವಹಿಸುತ್ತು ಎಂದು ತಿಳಿಯುತ್ತದೆ. ಗಾಂಧಿಜಿ ನಾನು ಅಹಿಂಸಾ ಸೇನೆಯ ದಂಡನಾಯಕ ಎಂದು ಕರೆದುಕೊಂಡಿದ್ದರು. ಒಮ್ಮೆ ಅವರು ಚೀನಾ ಪ್ರವಾಸದಲ್ಲಿದ್ದಾಗ ಅವರಿಗೆ ಒಂದು ಶಾಲು ಉಡುಗೊರೆಯಾಗಿ ಬಂತು. ಅದನ್ನು ನೋಡಿದ ಗಾಂಧಿಜಿ ಶಾಲು ಇಷ್ಟೊಂದು ಗುಣಮಟ್ಟದ್ದಾಗಿದೆ. ಚೀನಾ ದೇಶದಲ್ಲಿ ಇಂಥಾ ಶಾಲನ್ನು ಹೆಣೆಯುವ ಹುಡುಗಿ ಇದ್ದಾಳೆ ಎಂದರೆ ನಾನು ನನ್ನ ವಯಸ್ಸನ್ನೂ ಮೀರಿ ಅವಳನ್ನು ಮದುವೆಯಾಗುವ ಆಸೆ ಹೊಂದಿದ್ದೇನೆ ಎಂದರು. ತಮ್ಮ ಮಾತುಗಳನ್ನು ತಿರುಚಿ ಬರೆದಿರುವ ಪತ್ರಿಕೆಯ ವರದಿಗಾರನನ್ನು ಕಂಡ ಗಾಂಧಿಜಿ ನನಗೆ ಹಾಸ್ಯ ಮನೋಭಾವ ಇರುವುದರಿಂದಲೇ ಇಂಥಾ ಆಭಾಸಗಳನ್ನೂ ನಾನು ಸಹಿಸಿಕೊಂಡು ಬಂದಿದ್ದೇನೆ. ಇಲ್ಲದಿದ್ದರೆ ನಿಮ್ಮ ವರದಿಗಳನ್ನು ನೋಡಿ ನಾನು ಹುಚ್ಚನಾಗಿಬಿಡುತ್ತಿದ್ದೆ. ನಿಮ್ಮನ್ನು ಕಂಡು ನಾನು ಸಿಟ್ಟಿನಿಂದ ನೀವು ನಾನು ಹೇಳಿದ ಮಾತುಗಳನ್ನು ತಿರುಚಿ ಬರೆದಿದ್ದೀರಿ, ನಿಮಗೂ ನಿಮ್ಮ ಪತ್ರಿಕೆಗೂ ನನಗೂ ಯಾವ ಸಂಬಂಧವೂ ಇಲ್ಲ. ಇನ್ನು ಮುಂದೆ ನೀನು ನನ್ನ ಸಂದರ್ಶನಕ್ಕೆ ಬರಬೇಡಿ ಎಂದು ಗದರಿಬಿಡಬಹುದಿತ್ತು. ಆದರೆ ನಾನು ಆಗಲೇ ಹೇಳಿದ ಹಾಗೆ ನನಗೆ ಹಾಸ್ಯ ಮನೋಭಾವ ಇರುವುದರಿಂದ ನಿಮ್ಮ


ಕೆಲಸವನ್ನು ನಿರ್ಲಕ್ಷಿಸಿ ನೀವು ಮತ್ತೆ ಮತ್ತೆ ಬಂದರೂ ನಾನು ಸಂದರ್ಶನವನ್ನು ಕೊಡುತ್ತೇನೆ ಎಂದಿದ್ದರು.

ಒಂದು ಸಾರಿ ಗಾಂಧಿಜಿ ಸಬರಮತಿ ಆಶ್ರಮದಲ್ಲಿದ್ದಾಗ ಒಂದು ಹುಡುಗಿ ಅವರನ್ನು ಭೇಟಿ ಮಾಡಲು ಓಡೋಡಿ ಬಂದಿದ್ದಳು. ಆಗ ಅವಳು ತನ್ನ ಬಿಳಿ ಉಡುಪಿನ ಮೇಲೆ ನೀಲಿ ಶಾಯಿ ಚೆಲ್ಲಿಕೊಂಡಿದ್ದನ್ನೂ ಗಮನಿಸದೇ ಓಡಿ ಬಂದಿದ್ದಳು. ಅವಳನ್ನು ನೋಡಿದ ಗಾಂಧಿಜಿ ಹಾರ್ದಿಕವಾಗಿ ನಗುತ್ತಾ ಬಾಮ್ಮ, ನಿನ್ನ ಜೊತೆ ಗಂಗಾ ಜಮುನಾ ಇಬ್ಬರನ್ನೂ ಕರೆತಂದಿದ್ದೀಯಲ್ಲ ಅಂದಾಗ ಅಲ್ಲಿದ್ದವರೆಲ್ಲಾ ನಕ್ಕರು. ಗಾಂಧಿಜಿ ಯಾಕೆ ಹಾಗೆ ಹೇಳಿದ್ದು ಅಂತ ಕುತೂಹಲದಿಂದ ಇದ್ದಾಗ ಗಾಂಧಿಜಿ ನೋಡಿ ಜಮುನಾ ನದಿಯ ನೀರಿನ ಬಣ್ಣ ಸ್ವಲ್ಪ ಗಾಢವಾಗಿದೆ, ಆದರೆ ಗಂಗಾ ನದಿಯ ನೀರಿನ ಬಣ್ಣ ಬಹಳ ತೆಳು. ಇಲ್ಲಿ ಈ ಹುಡುಗಿಯ ಉಡುಪಿನಲ್ಲೂ ತೆಳು ಮತ್ತು ಗಾಢ ಮಿಶ್ರಣವಾಗಿದೆ ಅದಕ್ಕೆ ಗಂಗಾ ಜಮುನಾ ಇಬ್ಬರನ್ನೂ ಕರೆತಂದಿದ್ದೀಯ ಎಂದಾಗ ಅಲ್ಲಿದ್ದವರ ಮುಖದಲ್ಲಿ ಮತ್ತೊಮ್ಮೆ ನಗು ಪ್ರಜ್ವಲಿಸಿತು.

ಮಹಾತ್ಮಾ ಗಾಂಧಿಯವರು ಒಮ್ಮೆ ಬೆಂಗಳೂರಿಗೆ ಬಂದಿದ್ದಾಗ ಅವರಿಗಾಗಿ ಅವರ ಸ್ನೇಹಿತರು ಚೌಡಯ್ಯನವರ ಪಿಟೀಲು ವಾದನದ ಕಛೇರಿ ಏರ್ಪಾಡು ಮಾಡಿದ್ದರು. ಆಗ ಸಭಾಂಗಣದಲ್ಲಿ ಗಾಂಧಿಜಿಯ ಪಕ್ಕ ಕೂತಿದ್ದವರು ನಮ್ಮ ಟಿ.ಪಿ. ಕೈಲಾಸಂ. ಸ್ವಲ್ಪ ಹೊತ್ತು ಪಿಟೀಲು ವಾದನವನ್ನು ಕೇಳಿ ಆನಂದಿಸಿದ ಗಾಂಧಿಜಿ ಪಕ್ಕದಲ್ಲಿ ಕೂತಿದ್ದ ಕೈಲಾಸಂ ಅವರನ್ನು ಪಿಟೀಲು ನುಡಿಸುತ್ತಿರುವವರ ಹೆಸರು ಏನು ಅಂತ ಕೇಳಿದರು. ಅದಕ್ಕೆ ಕೈಲಾಸಂ, ನೋಡಿ ಗಾಂಧಿಜಿ ನೀವಾದರೂ ಪ್ರಖ್ಯಾತ ನಾನ್–ವಯೋಲನಿಸ್ಟ್ ಆದರೆ ಪಿಟೀಲು ನುಡಿಸುತ್ತಿದ್ದಾರಲ್ಲ ಚೌಡಯ್ಯ ಅವರು ಪಕ್ಕಾ ವಯೊಲನಿಸ್ಟ್ ಅಂದಾಗ ಗಾಂಧಿಜಿ ಹಲ್ಲಿಲ್ಲದ ತಮ್ಮ ಬೊಚ್ಚು ಬಾಯಿ ತೆರೆದು ನಕ್ಕಿದ್ದೇ ನಕ್ಕಿದ್ದು.

ಒಮ್ಮೆ ಒಂದು ಮಗು ಗಾಂಧಿಜಿಯನ್ನು ಬಾಪೂ ನಾವು ಎಷ್ಟೊಂದು ಪ್ರಶ್ನೆ ಕೇಳಿದರೂ ನೀವು ಬಹಳ ಚುಟುಕಾಗಿ ಉತ್ತರ ಕೊಡುತ್ತೀರ. ಆದರೆ ಭಗವದ್ಗೀತೆಯಲ್ಲಿ ಅರ್ಜುನ ಒಂದು ಸಣ್ಣ ಪ್ರಶ್ನೆ ಕೇಳಿದರೂ ಸಾಕು ಶ್ರೀಕೃಷ್ಣ ಒಂದು ಅಧ್ಯಾಯದಷ್ಟು ಉತ್ತರ ಕೊಡುತ್ತಾನಲ್ಲ ಅಂತ. ಅದಕ್ಕೆ ಗಾಂಧಿಜಿ ನಗುತ್ತಾ ಏನು ಮಾಡಲಿ ಮಗು, ಶ್ರೀಕೃಷ್ಣನಿಗಾದರೂ ಪ್ರಶ್ನೆ ಕೇಳುತ್ತಾ ಇದ್ದದ್ದು ಅರ್ಜುನ ಒಬ್ಬನೇ. ಆದರೆ ನನಗೆ ನಿನ್ನಂಥಾ ನೂರಾರು ಅರ್ಜುನರು ಇದ್ದಾರಲ್ಲ, ನಾನು ಅವರಿಗೆಲ್ಲಾ ಉತ್ತರ ಕೊಡಬೇಕಲ್ಲ ಎಂದು ನಕ್ಕರು.

(ಸಂಗ್ರಹ)



## ಮುಗಿಯದ ಆಟ, ಆ ತುಂಟಾಟ!

ಪ್ರಭಾಮಣಿ ನಾಗರಾಜ

ಅಕ್ಕಪಕ್ಕದ ಮನೆಗಳಿಲ್ಲದ ಹಳ್ಳಿಯ ನಮ್ಮ ಮನೆಯಲ್ಲಿ ನಮ್ಮ ಬಾಲ್ಯ ಚಿಕ್ಕ ಮಕ್ಕಳಾಗಿದ್ದ ನಾವು ನಾವೇ ಆಟವಾಡಿಕೊಳ್ಳುವುದರಲ್ಲೇ ಸರಿದುಹೋಯಿತು.

ನಮ್ಮ ಮನೆಯಲ್ಲಿ ಸುಂದರವಾಗಿ ಕೆತ್ತನೆ ಮಾಡಿದ್ದ ಒಂದು ಸಣ್ಣ ಮರದ ತೊಟ್ಟಿಲು ಇತ್ತು. ನಾನು ಚಿಕ್ಕವಳಾಗಿದ್ದಾಗ ಅದನ್ನು ಜಗುಲಿಯ ಮೇಲಿನ ಸೂರಿಗೆ ಕಟ್ಟಿಸಿಕೊಂಡು ತೂಗುವ ಆಟ ಅಡುತ್ತಿದ್ದೆ. ನನಗಿಂತ ಎರಡು ವರ್ಷ ಚಿಕ್ಕವನಾದ ನನ್ನ ತಮ್ಮ ಬಹಳ ಬಲಶಾಲಿಯಾಗಿದ್ದ. ದಿನದಲ್ಲಿ ಕನಿಷ್ಠ ಒಂದು ಸಾರಿಯಾದರೂ ಏನಾದರೂ ಕ್ಯಾತೆ ತೆಗೆದು ಹೊಡೆದು ನನ್ನನ್ನು ಅಳಿಸುತ್ತಿದ್ದ. ಅವತ್ತೂ ಹಾಗೇ ತನ್ಮಯತೆಯಿಂದ ತೊಟ್ಟಿಲು ತೂಗುತ್ತಿದ್ದವಳನ್ನು ಹಿಂದಿನಿಂದ ಅನಾಮತ್ತಾಗಿ ನೂಕಿಬಿಟ್ಟ! ನಾನು ಆಯ ತಪ್ಪಿ ಜಗುಲಿಯಿಂದ ಕೆಳಗುರುಳಿದಾಗ ನನ್ನ ತಲೆ ಜಗುಲಿಯ ಕೆಳಗೆ ದನ ಕಟ್ಟಲು ಹೊಡೆದಿದ್ದ ಗೂಟಕ್ಕೆ ಬಡಿದು ಬುರುಡೆ ಒಡೆದು ರಕ್ತ ಸುರಿಯಲಾರಂಭಿಸಿತು. ನನ್ನ ಕಿರುಚಾಟಕ್ಕೆ ಓಡಿಬಂದ ಹಿರಿಯರಲ್ಲಿ ಚಿಕ್ಕತ್ತೆ ನನ್ನ ಗಾಯ ತೊಳೆದು ಆ ಕಾಲದ ಪ್ರಥಮ ಚಿಕಿತ್ಸೆಯಾದ ಕಾಫಿಪುಡಿಯನ್ನು ತುಂಬಿದರೆ ದೊಡ್ಡತ್ತೆ ಹೇಗಾಯಿತು ಎಂದು ವಿಚಾರಿಸುವ ಮೊದಲೇ ನನ್ನ ತಮ್ಮನನ್ನು ಎಳೆದುಕೊಂಡು ಬಂದು ನಾಲ್ಕೇಟು ಬಾರಿಸಿ ಕೈಗಳನ್ನು ಹಿಂದಕ್ಕೆ ಕಟ್ಟಿ ಕಾಲನ್ನೂ ಕಟ್ಟಿ ಕೂರಿಸಿಯಾಗಿತ್ತು! ಅಳುತ್ತಿದ್ದ ನನ್ನ ಮುಂದೆ ಕಡಲೆಕಾಯಿ ಸುರಿದು, ಬೆಲ್ಲ ಕೊಟ್ಟು ರಮಿಸಿದರೆ ಅವನಿಗೆ ಏನನ್ನೂ ಕೊಡದೆ ಮನೆಗೆ ಬಂದವರೆಲ್ಲಾ ಬಯ್ಯುವುದೇ ಆಯಿತು. ದಿನವೂ ಅವನಿಂದ ಹೊಡೆತ ತಿಂದು ಏನೂ ಮಾಡಲಾಗದಿದ್ದ ಅಸಹಾಯಕ ಸ್ಥಿತಿಯಲ್ಲಿದ್ದ ನಾನು ಇದೇ ಸುಸಮಯವೆಂದು ಯಾರಾದರೂ ಬಂದಾಕ್ಷಣವೇ ಹೊಸದಾಗಿ ಅಳುತ್ತಾ ಅವನನ್ನು ಮತ್ತಷ್ಟು ಬೈಸಿ ಸೇಡು ತೀರಿಸಿಕೊಳ್ಳುತ್ತಿದ್ದೆ!

ಬಹಳ ತುಂಟನಾಗಿದ್ದ ನನ್ನ ತಮ್ಮ ಒಮ್ಮೆ ದನೀನ ಕೊಟ್ಟಿಗೆಯಲ್ಲಿ ಒಂದು ಹಾವಿನಮರಿಯನ್ನು ಹಿಡಿದುಕೊಂಡು ಬಿಟ್ಟ. ಮನೆಯವರೆಲ್ಲರೂ ಜಮೀನು ಹಾಗೂ ಹೊರಗಿನ ಕೆಲಸಗಳಿಗೆ ಹೋಗಿದ್ದು, ದೊಡ್ಡವರಾಗಿ ನಮ್ಮ ಚಿಕ್ಕತ್ತೆ ಒಬ್ಬರೇ ಮನೆಯಲ್ಲಿದ್ದದ್ದು. ನಾವೆಲ್ಲಾ ಓಡಿಹೋಗಿ ಅವರನ್ನು ಕರೆದುಕೊಂಡು ಬಂದೆವು. ಪಾಪ, ಕಣ್ಣೂ ಸರಿಯಾಗಿ ಕಾಣದ ಅವರು ಏನು ತಾನೇ ಮಾಡ್ತಾರೆ! ಅವನು ಹಾವಿನಮರಿ ತಲೆ ಮೇಲೆತ್ತದಂತೆ ಒಂದೇ ಸಮನೆ ಕೊಡವುತ್ತಿದ್ದಾನೆ. ಏನೂ ತೋಚದೆ ಅವರು ಇನ್ನೆಲ್ಲಿ ಸ್ವಲ್ಪ ಹೆಚ್ಚುಕಮ್ಮಿಯಾದ್ರೆ ಕಚ್ಚಿಬಿಡುತ್ತೋ ಅಂತ ದೇವರನ್ನ ಪ್ರಾರ್ಥಿಸುತ್ತಾ, 'ಕಂದಾ, ದೂರಕ್ಕೆ ಎಸೆದುಬಿಡಪ್ಪ' ಅಂತ ಗೋಗರೆಯಲಾರಂಭಿಸಿದರು. ಇದ್ದಕ್ಕಿದ್ದಂತೆಯೇ ಅವನು ಜೋರಾಗಿ ಬೀಸಿ ಎಸೆದುಬಿಟ್ಟ! ಅದು ಎಲ್ಲಿ ಹೋಯಿತೋ ಯಾರಿಗೂ ಕಾಣಲಿಲ್ಲ.


ನನ್ನ ತಮ್ಮನ ತುಂಟಾಟಗಳಿಗೆ ಕೊನೆಮೊದಲೇ ಇರಲಿಲ್ಲ. ದಿನದಲ್ಲಿ ಒಂದು ಸಾರಿಯಾದರೂ ಏನಾದರೂ ಒಂದು ಚೇಷ್ಟೆ ಮಾಡಿ ನಮ್ಮ ದೊಡ್ಡತ್ತೆಯಿಂದ ಹೊಡೆಸಿಕೊಳ್ಳುತ್ತಿದ್ದ. 'ಮೂರ್ತಿ ಬರಲಿ ತಾಳು,' ಎಂದು ಅವರು ತಮ್ಮ ಅಣ್ಣನಿಗೂ ಕಂಪ್ಲೇಂಟ್ ಮಾಡಲು ಹೇಳಿದರೆ ಅಮ್ಮ ರಾತ್ರಿ ಅವರು ಬರುವ ವೇಳೆಗೆ ನಮಗೆಲ್ಲಾ ಊಟ ಬಡಿಸಿ ಮಲಗಿಸಿಬಿಡುತ್ತಿದ್ದರು! ಎದ್ದಿದ್ದರೆ ನಾವೂ ಸಾಕ್ಷಿ ಹೇಳಬೇಕಲ್ಲ! ಮಲಗಿದ್ದ ಮಕ್ಕಳನ್ನು ಎಬ್ಬಿಸಿ ಹೊಡೆಯುತ್ತಿರಲಿಲ್ಲ ನಮ್ಮ ತಂದೆ!

ಹಬ್ಬಗಳು ಬಂತೆಂದರೆ ತಿನ್ನಲು ಸಿಗುತ್ತಿದ್ದ ವಿಶೇಷ ತಿಂಡಿಗಳ ಬಗ್ಗೆ ಆಸೆ ಇದ್ದರೂ, 'ಪೂಜೆಯಾಗುವವರೆಗೂ ಮಕ್ಕಳು ಏನೂ ತಿನ್ನುವುದು ಬೇಡ,' ಎನ್ನುವ ನಿಯಮವಿರುತ್ತಿದ್ದುದರಿಂದ ಸಂಕಟವೇ ಹೆಚ್ಚಾಗುತ್ತಿತ್ತು. ಅದೂ ವಿಶೇಷವಾಗಿ ಗಣಪತಿ ಹಬ್ಬದಲ್ಲಿ ಬಹಳ ಕಟ್ಟುನಿಟ್ಟು! ನನ್ನ ತಮ್ಮನಿಗೋ ಹಸಿವು ತಡೆಯಲೇ ಆಗುತ್ತಿರಲಿಲ್ಲ. ಅಮ್ಮನಿಗೂ ಮಕ್ಕಳು ಉಪವಾಸವಿರುವುದು ಇಷ್ಟವಾಗುತ್ತಿರಲಿಲ್ಲ. ಆದರೆ ಹಿರಿಯರ ಕಣ್ಣು ತಪ್ಪಿಸಿ ಏನನ್ನೂ ಕೊಡಲೂ ಆಗುತ್ತಿರಲಿಲ್ಲ. ತಮ್ಮ ಪ್ರೀತಿಯ ಕಿರಿಮಗನ ಪಾಡು ನೋಡಲಾಗದೇ ಅವನಿಗೆ ಒಂದು ಚೊಂಬಿನಲ್ಲಿ ಹಿಂದಿನ ದಿನದ ಗೌರಿಹಬ್ಬದ ನಾಲ್ಕು ಒಬ್ಬಟ್ಟುಗಳನ್ನು ಹಾಕಿ ಕೊಡುತ್ತಿದ್ದರು. ಅವನು ಚೊಂಬು ಹಿಡಿದುಕೊಂಡು(!) ನಮ್ಮ ಮನೆಯ ಹಿಂದಿನ ಬಾವಿಕಟ್ಟೆಯ ಮೂಲೇಲಿ ಕುಳಿತು ತಿಂದು ಬರುತ್ತಿದ್ದ! 'ಅಯ್ಯೋ ಸೂರ್ಯ ನೆತ್ತೀಗೆ ಸಿಕ್ಕಿಹಾಕಿಕೊಂಡರೂ ಇನ್ನೂ ಪೂಜೆ ಆಗಿಲ್ಲ. ಬೇಗ ಮಾಡೋ ಮೂರ್ತಿ, ಪಾಪ ನಮ್ಮ ಚಿಕ್ಕದೂ ಉಪವಾಸ ಇದೆ,' ಎಂದು ಹಲುಬುತ್ತಿದ್ದರು ನಮ್ಮತ್ತೆ!

ಸದಾ ಆಟ, ಓಡಾಟಗಳಲ್ಲೇ ತೊಡಗಿರುತ್ತಿದ್ದ ನಮಗೆ ಅಗಾಧ ಹಸಿವು! ಇನ್ನೂ ಅಡುಗೆ ಪಾತ್ರೆ ಒಲೆಯಿಂದ ಇಳಿಯುವ ಮೊದಲೇ ತಟ್ಟೆ ಇಟ್ಟುಕೊಂಡು ಊಟಕ್ಕೆ ಕುಳಿತುಬಿಡುತ್ತಿದ್ದೆವು. ಪಲ್ಯ, ಗೊಜ್ಜುಗಳ ರುಚಿಗೆ ಇನ್ನಷ್ಟು, ಮತ್ತಷ್ಟು ಎಂದು ದುಂಬಾಲು ಬೀಳುತ್ತಿದ್ದೆವು. ಅಮ್ಮ, 'ಹಿಂದೆ–ಮುಂದೆ ನೋಡಿಕೊಂಡು ಊಟ ಮಾಡಿ ಎನ್ನುತ್ತಿದ್ದರು. ಅಮ್ಮ ಈ ಮಾತನ್ನು ನಂತರದವರಿಗೂ ಉಳಿಸಿ ಎಂಬ ಅರ್ಥದಲ್ಲಿ ಹೇಳಿದ್ದರೂ ನಾವು ಹಿಂದೆ ಮುಂದೆ ನೋಡುತ್ತಾ ಗದ್ದಲವೆಬ್ಬಿಸುತ್ತಿದ್ದೆವು! ಹುಳಿ ಮಾಡಿದರಂತೂ , 'ಹೋಳು, ಹೋಳು' ಎಂದು ಕಿರುಚಲಾರಂಭಿಸುತ್ತಿದ್ದೆವು ಅಮ್ಮ, 'ಇನ್ನು ಹುಳಿಯೊಳಗೆ ಮುಳುಗಿ ತೆಗೆದು ಹಾಕಬೇಕು ಅಷ್ಟೆ,' ಎನ್ನುತ್ತಿದ್ದರು. ಸಾರಿನ ಕಲ್ಲುಸೋರೆಯೊಳಗೆ ಘನ ಗಾತ್ರದ ಅಮ್ಮ ಮುಳುಗುವ ಕಲ್ಪನೆಯಲ್ಲಿ ನಮಗೆ ನಕ್ಕುನಕ್ಕು ಸಾಕಾಗುತ್ತಿತ್ತು!

ಅನುದಿನವೂ ನವನವೀನವಾಗಿರುತ್ತಿದ್ದ ಈ ಬಾಲ್ಯದಾಟಗಳಿಗೆ ಕೊನೆ ಎಂಬುದೇ ಇರುತ್ತಿರಲಿಲ್ಲ!

■



# ಎಮ್ಸ್ವರ್ಥ್ ಸಾಹೇಬರ ಕನ್ನಡಕ

ಪಾಲಹಳ್ಳಿ ವಿಶ್ವನಾಥ್

ಬ್ಲಾಂಡಿಂಗ್ಸ್ ಎಂಬುದು ಈ ದೊಡ್ಡಮನೆಯ ಹೆಸರು. ಮನೆ ಏನು, ಅದು ಅರಮನೆಯೇ! ಎಲ್ಲರೂ ಅದನ್ನು ಕರೆಯ್ಯುತ್ತಿದ್ದು ಬ್ಲಾಂಡಿಂಗ್ಸ್ ಬಂಗಲೆ ಎಂದು. ಅದರ ಮಾಲೀಕರು ಎಮ್ಸ್ವರ್ಥ್ ಸಾಹೇಬರು. ಇಂದು ಅವರ ಮುಖದ ಮೇಲೆ ವಿಷಾದದ ಖಳೆ ಇದ್ದಿತು. ಅದು ಸ್ವಲ್ಪ ವಿಚಿತ್ರವೇ... ಏಕೆಂದರೆ ತಾವು ಆರೋಗ್ಯವೇ ಎಂದು ಅವರನ್ನು ಕೇಳಿದಾಗ ಅವರು ಯಾವತ್ತೂ ಸರಿ ಇಲ್ಲ ಎಂದು ಹೇಳಿದವರಲ್ಲ. ಹಣದ ತೊಂದರೆಯೇ ಎಂದು ಕೇಳಲೂ ಬಾರದಷ್ಟು ಶ್ರೀಮಂತರು ಅವರು. ಆದ್ದರಿಂದಲೇ ಏನೋ ಅವರು ಯಾವಾಗಲೂ ಹಸನ್ಮುಖರಾಗಿರುತ್ತಿದ್ದರು. ಐವತ್ತಕ್ಕೂ ಹೆಚ್ಚು ವರ್ಷಗಳು ಯಾವ ತರಹದ ಕಷ್ಟವನ್ನೂ ಅರಿಯದ ಜೀವ ಅದು. ಅವರ ಅ0ತಹ ಶಾ0ತ ಚಿತ್ತವನ್ನು ಕದಲಿಸುವುದೂ ಸುಲಭ ವೇನಿರಲಿಲ್ಲ ಅವರ ಚಿಕ್ಕ ಮಗ ಫ್ರೆಡ್ಡಿ ಕೂಡ ಆ ಪ್ರಯತ್ನದಲ್ಲಿ ಕೆಲವು ಬಾರಿ, ಹೌದು ಕೆಲವೇ ಬಾರಿ, ಮಾತ್ರ ಸಫಲನಾಗಿದ್ದ... ಆದರೂ ಈ ಬೆಳಿಗ್ಗೆ ನಮ್ಮ ಈ ಸಾಹೇಬರ ಮುಖದಲ್ಲಿ ದು:ಖದ ಛಾಯೆ.!

ತಮ್ಮ ಕಿಟಕಿಯಿಂದ ಕಾಣುತ್ತಿದ್ದ ವಿಶಾಲ ತೋಟದ ಮೆಲೆ ಎಳೆ ಬಿಸಿಲು ಬೀಳುತ್ತಿದೆ ಎಂದು ಅವರಿಗೆ ಚೆನ್ನಾಗಿ ತಿಳಿದಿತ್ತು. ಹೊರಗೆಹೋಗಿ ಹೂಗಿಡಗಳನ್ನು ಆರೈಕೆ ಮಾಡುವ ಹಂಬಲ ಅವರಿಗೆ. ಆದರೆ ಪ್ರಪಂಚವೇ ಮಂಜಾಗಿ ಕಂಡಾಗ, ಪಾಪ, ಎನು ಆರೈಕೆ ಮಾಡಬಲ್ಲರು ಅವರು? ಆಷ್ಟರಲ್ಲಿ ಅವರ ಹಿಂದಿದ್ದ ಬಾಗಿಲ ಸದ್ದಾಯಿತು. ಅವರ ಬಟ್ಲರ್ ಬೀಚ್ ನಿಧಾನವಾಗಿ ಒಳ ಬಂದನು. ಯಾರದು ಎಂದು ಸಾಹೇಬರು ಹಿಂದೆ ತಿರುಗಿದರು.

'ನಾನು ಸಾಬ್' ಎಂದ ಬೀಚ್,

'ಅವು ಸಿಕ್ಕಿತೇ'

'ಇಲ್ಲ ಸಾಬ್'

'ನೀನು ಸರಿಯಾಗಿ ಹುಡುಕಿಲ್ಲ ಅಂತ ಕಾಣುತ್ತದೆ.'

'ನಾನು ಎಲ್ಲ ಕಡೆ ನೊಡಿದ್ದೇನೆ. ಥಾಮಸ್ ಮತ್ತು ಚಾರ್ಲ್ಸ್‌ರು ಕೂಡ ಹುಡುಕಿದ್ದಾರೆ... ಸ್ಟೋಕ್ಸ್ ನಿಂದ ಇನ್ನೂ ವರದಿ ಬಂದಿಲ್ಲ... ಸಾಬ್! ನಾನು ಥಾಮಸ್ ಮತ್ತು ಚಾರ್ಲ್ಸ್‌ರನ್ನು ನಿಮ್ಮ ಮಲಗುವ ಮನೆಗೆ ಕಳಿಸಿದ್ದೇನೆ. ಅವರ ಪ್ರಯತ್ನ ಈಗಲಾದರೂ ಸಫಲವಾಗುತ್ತೆ ಎಂದು ನಂಬಿದ್ದೇನೆ – ಹೀಗೆ ಹೇಳಿ ಬೀಚ್ ಕೋಣೆಯ ಹೊರಹೋದ.

ವಿಷಯ ಏನಿರಬಹುದು ಎಂದು ನೀವು ಹೆಚ್ಚು ಯೋಚನೆ ಮಾಡ್ಬೇಡಿ. ಅವರು ಏನೋ ಕಳೆದುಕೊಂಡಿದ್ದಾರೆ. ಅದೇ ಅವರ ವಿಷಾಧಕ್ಕೆ ಕಾರಣವಾಗಿದ್ದಿತು. ಅದು ಎನು ಎಂಬುದನ್ನು ಹೇಳಿ ಬಿಡುತ್ತೇವೆ. ಪಾಪ ! ಎಮ್ಸ್ವರ್ಥ್ ಸಾಹೇಬರು ತಮ್ಮ ಕನ್ನಡಕವನ್ನು ಎಲ್ಲೋ ಇಟ್ಟಿಬಿಟ್ಟಿದ್ದಾರೆ. ಅವರೇ ಎಲ್ಲೆಲ್ಲೂ ಹುಡುಕಿದ್ದಾರೆ, ಆದರೆ ಸಿಕ್ಕಿಲ್ಲ ! ಅದು ಎನು ಮಹಾ ಎನ್ನಬೇಡಿ. ಆಗಾಗ್ಗೆ ಅವರೇ ಹೇಳಿಕೊಂಡಿರುವಂತೆ 'ಕನ್ನಡಕವಿಲ್ಲದಿದ್ದರೆ ನಾನು ಬಾವುಲಿಯಷ್ಟೇ ಕುರುಡು'.

ಎಮ್ಸ್ವರ್ಥ್ ಮತ್ತೆ ಕಿಟಕಿಯಲ್ಲಿ ನೋಡಿದರು. ಅವರ ಕನ್ನಡಕವಿದ್ದಿದ್ದರೆ ಅವರು ಅತಿ ಸುಂದರ ದೃಶ್ಯವೊಂದನ್ನು ನೋಡಬಹುದಿತ್ತು. ಇಂಗ್ಲೆಂಡಿನ ಪುರಾತನ ಮನೆಗಳಲ್ಲಿ

ಒಂದಾದ ಬ್ಲಾಂಡಿಂಗ್ಸ್ ಬಂಗಲೆಯನ್ನು ಒಂದು ಚಿಕ್ಕ ಬೆಟ್ಟದ ಮೇಲೆ ಕಟ್ಟಲಾಗಿತ್ತು. ಶ್ರಾಪ್ ಶೈರ್ ತಾಲೂಕಿನ ಅತಿಸುಂದರ ಮನೆ ಇದು.

ಅಂದಿನ ತಾರೀಖು ಜೂನ್ 30 ಆದ್ದರಿಂದ ಉದ್ಯಾನದಲ್ಲಿ ಅಗಾಧ ಸಂಖ್ಯೆಯಲ್ಲಿ ಎಲ್ಲ ತರಹದ ಹೂಗಳೂ ಬಿಟ್ಟಿದ್ದವು. ಆ ಎಲ್ಲ ಹೂಗಳ ಹೆಸರುಗಳು ಗೊತ್ತಿರುವುದು ಪ್ರಾಯಶ: ಒಬ್ಬನಿಗೇ – ಬ್ಲಾಂಡಿಂಗ್ಸ್ ಬಂಗಲೋವಿನ ಮಾಲಿ ಆಂಗಸ್ ಮೆಕಲಿಸ್ಟರ್. ಉದ್ಯಾನದಲ್ಲಿ ಅಪಾರ ಆಸಕ್ತಿ ಇದ್ದ ಮಾಲೀಕರು ಆಗ ಈಗ ಕೈ ಹಾಕುತ್ತಿದ್ದರೂ ಕೂಡ ತೋಟ ಚೆನ್ನಾಗಿಯೇ ಇರುವುದಕ್ಕೆ ಮಾಲಿ ಮೆಕಲಿಸ್ಟರ್ ಏಕಮಾತ್ರ ಕಾರಣವಾಗಿದ್ದನು.

ಬಾಗಿಲು ಮತ್ತೆ ಶಬ್ದ ಮಾಡಿದಾಗ ಎಮ್ಸ್ವರ್ತ್ ಹಿಂದೆ ತಿರುಗಿದರು. ಒಳ್ಳೆಯ ಬಟ್ಟೆಗಳನ್ನು ಧರಿಸಿದ್ದ ಯುವಕನೊಬ್ಬ ಬಾಗಿಲಲ್ಲಿ ನಿಂತಿದ್ದ. ಎಣ್ಣೆ ಹಾಕಿ ತೀಡಿದ್ದ ಹೊಳೆಯುವ ಕೂದಲನ್ನು ಹಿಂದೆ ಬಾಚಿಕೊಂಡಿದ್ದ ಯುವಕನ ಮುಖದಲ್ಲಿ ಯಾವ ಭಾವವೂ ಇರಲಿಲ್ಲ. ಹಾಗೂ ಆತ ಒಂದು ಕಾಲಿನ ಮೇಲೆ ನಿಂತಿದ್ದ.... ತನ್ನ ತಂದೆಯ ಮುಂದೆ ಫ್ರೆಡ್ಡಿ ಎಂದೂ ನೆಮ್ಮದಿಯಿಂದಿರಲಿಲ್ಲ

"ಅಪ್ಪಾಜಿ"

"ಓ! ಫ್ರೆಡರಿಕ್"

ಎಮ್ಸ್ವರ್ಥ್‌ರ ಮಾತುಗಳಲ್ಲಿ ಪುತ್ರವಾತ್ಸಲ್ಯವಿದ್ದಿತು ಎಂದು ಹೇಳಿದರೆ ಅದು ಸುಳ್ಳು ಹೇಳಿದ ಹಾಗೆ ಆಗುತ್ತದೆ. ಕಳೆದ ತಿಂಗಳು ತಾನೆ ಮಗ ಜೂಜಿನಲ್ಲಿ ಸೋತಿದ್ದ 500 ಪೌಂಡ್‌ಗಳನ್ನು ಅವರೇ ಕೊಡಬೇಕಾಗಿ ಬಂದಿತ್ತು ಇದರಿಂದ ಬ್ಯಾಂಕಿನಲ್ಲಿ ಅವರ ನಿಧಿಗೆ ಅಷ್ಟೇನೂ ಏಟುಬೀಳದಿದ್ದರೂ ಅವರ ಮಗ ಅವರ ಕಣ್ಣಿನಲ್ಲಿ ಹಲವಾರು ಮೆಟ್ಟಲು ಕೆಳಗೆ ಹೋಗಿದ್ದ.

"ಅಪ್ಪಾಜಿ, ನೀವು ಕನ್ನಡಕ ಕಳೆದುಕೊಂಡಿರಂತೆ"

"ಹೌದು"

"ಇನ್ನೊಂದು ಜೊತೆ ಇಟ್ಟುಕೊಳ್ಳಬೇಡವೇ"

ತಮ್ಮ ಜೀವನಶೈಲಿಗೆ ಮಗನಿಂದ ಇಂತಹ ಸಲಹೆಗಳು ಅವರಿಗೆ ಇಷ್ಟವಿರಲಿಲ್ಲ.

"ಅದು ಒಡೆದು ಹೋಯಿತು"

"ಕನ್ನಡಕ ಸರಿಯಾಗಿ ಹುಡುಕುತ್ತಿದೀರಾ?"

ಮಗನ ಸಾಂತ್ವನದ ಪ್ರಯತ್ನ ಅವರಿಗೆ ಯಾವ ಸಮಾಧಾನವನ್ನೂ ಕೊಡಲಿಲ್ಲ.

"ಫ್ರೆಡ್ಡಿ, ಇಲ್ಲಿಂದ ಹೊರಟುಹೋಗು !"

"ಹೊರಟುಹೋಗು?"

"ಹೌದು, ಈಗಲೇ!"

ಮಗ ಹೊರಗೆ ಹೋದ ನಂತರ ಎಮ್ಸ್ವರ್ಥ್ ಮತ್ತೆ ಕಿಟಕಿಯ ಕಡೆ ತಿರುಗಿದರು. ಸ್ವಲ ಸಮಯ್ದ ನಂತರ ಕೋಣೆಯ ಒಳಗೆ ಬಂದ ರೂಪರ್ಟ್ ಬಾಕ್ಸ್ಟರ್ ಕೆಮ್ಮಿದ. ಅದು ಕೇಳಿಸಿದಾಗ ಸಾಹೇಬರು ಕಿಟಕಿಯಿಂದ ಬಾಗಿಲಕಡೆಗೆ ತಿರುಗಿದರು...ಹಿಂದೆ ಹೇಳಿದಂತೆ ಎಮ್ಸ್ವರ್ಥ್ ಸಾಹೇಬರ ಮುಖ ಕನ್ನಡಕರಹಿತವಾಗಿದ್ದಿತು;


ಆದರೆ ಬಾಕ್ಸ್ಟರನ ಮುಖ ಕನ್ನಡಕ ಸಮೇತವಾಗಿದ್ದಿತು. ಬಾಕ್ಸ್ಟರನ ಮುಖಕ್ಕೆ ಕನ್ನಡಕ ಎಷ್ಟು ಒಪ್ಪವಾಗಿದ್ದಿತೆಂದರೆ ಒಂದಿಲ್ಲದೆ ಇನ್ನೊಂದನ್ನು ಯೋಚಿಸುವುದೂ ಕಷ್ಟವಾಗಿದ್ದಿತು. ಬಾಕ್ಸ್ಟರ್ ಕನ್ನಡಕ ಹಾಕಿಕೊಂಡೇ ಹುಟ್ಟಿದನೆಂದು ಗುಸು ಗುಸು ಮಾತಾಡಿಕೊಳ್ಳುವವರೂ ಇದ್ದರು. ಅದು ಏನೇ ಇರಲಿ, ಆ ದಪ್ಪ ಗಾಜುಗಳ ಹಿಂದೆ ಇದ್ದ ಮನುಷ್ಯ ಸಾಧಾರಣದವನೇನಲ್ಲ.... ಆತ ದಕ್ಷರಲ್ಲಿ ದಕ್ಷ ಎಂದರೂ ಅತಿಶಯೋಕ್ತಿಯಾಗಲಾರದು. ಬ್ಲಾಂಡಿಂಗ್ ಬಂಗಲೋವಿನ ಎಲ್ಲ ಕೆಲಸಗಾರರಂತೆ ಈ ಕಾರ್ಯದರ್ಶಿಯೂ ಸಂಬಳ ಪಡೆಯುತ್ತಿದ್ದರೂ ತನ್ನ ಮಾಲೀಕನ ಮೃದು ವ್ಯಕ್ತಿತ್ವದಿಂದ ಬಾಕ್ಸ್ಟರ್ ತಾನೆ ಯಜಮಾನನಂತೆ ವರ್ತಿಸುತ್ತಿದ್ದ. ಅಲ್ಲಿಯ ದೈನಂದಿನ ತುಮುಲಗಳನ್ನು ಎದುರಿಸುತ್ತಿದ್ದು ಬಾಕ್ಸ್ಟರ್, ಎಮ್ಸ್ವರ್ಥ್ ಸಾಹೇಬರಲ್ಲ. ಎಮ್ಸ್ವರ್ಥ್ ಬಾಕ್ಸ್ಟರನಿಗೆ ಎಲ್ಲ ಉಸ್ತುವಾರಿಯನ್ನೂ ಒಪ್ಪಿಸಿ ತಾನಾಯಿತು, ತನ್ನ ತೋಟವಾಯಿತು ಎಂದುಕೊಂಡು ಇರುತ್ತಿದ್ದರು. ಬಾಕ್ಸ್ಟರ್ ಕೋಣೆಗೆ ಬಂದು ಕೆಮ್ಮಿದಾಗ ನನ್ನ ಕನ್ನಡಕವನ್ನು ಹುಡುಕಲು ಈ ಸಾಮರ್ಥ್ಯಶಾಲಿಯೆ ಸರಿ ಎಂದು ಸಾಹೇಬರು ನಿರ್ಧರಿಸಿದರು.

"ನೋಡಪ್ಪ ಬಾಕ್ಸ್ಟರ್. ನನ್ನ ಕನ್ನಡಕ ಎಲ್ಲೋ ಹೊರಟುಹೋಗಿದೆ... ಎಲ್ಲ ಕಡೆ ಹುಡುಕಿಯಾಯಿತು. ನೀನೇನಾದರೂ ನೋಡಿದೆಯಾ?"


"ಹೌದು ಸರ್ ಎಂದ ಬಾಕ್ಸ್ಟರ್" ನೋಡಿ, ನಿಮ್ಮ ಬೆನ್ನಿನ ಮೇಲೆಯೇ ನೇತಾಡುತ್ತಿದೆ"

"ನನ್ನ ಬೆನ್ನಿನ ಮೇಲೆ? ಓ ಹೌದಲ್ಲ. ಏನು ಮಾಡೋಣ ಬಾಕ್ಸ್ಟರ್. ನನ್ನ ಮನಸ್ಸು ಎಲ್ಲೆಲ್ಲೋ ಇರುತ್ತೆ ಅಂತ ಕಾಣುತ್ತೆ. ನೀನು ನಿಜವಾಗಿಯೂ ಸಮರ್ಥನಯ್ಯ." ಎಂದು ಎಮ್ಸ್ ವರ್ಥ್ ಸಾಹೇಬರು ಮಾಲಿ ಮೆಕ್ಲಿಸ್ಟರನ ಜೊತೆ ಸಸ್ಯಗಳ ಆರೈಕೆಗೆ ತೋಟದ ಕಡೆ ಹೊರಡಲು ತಯಾರಾದರು.

(ಪಿ. ಜಿ. ವುಡ್ಹೌಸ್ ರ್ 'ಲೀವ್ ಇಟ್ ಟು ಸ್ಮಿತ್' ಪುಸ್ತಕದ ಮೊದಲನೆಯ ಅಧ್ಯಾಯದ ಭಾವಾನುವಾದ) ■



## ಪುಸ್ತಕ ಪರಿಚಯ




### ನಗೆ ಚಿಮ್ಮಿಸುವ 'ನಗೆ–ಚಿಂತನ'

**ಲೇಖಕರು: ಗಣೇಶ್ ಹೆಗ್ಗಡೆ**

ಗಣೇಶ್ ಹೆಗ್ಗಡೆ ಅಲಿಯಸ್ ಎಚ್ ಎಸ್ ಬಾಬು ಅವರ 'ನಗೆ–ಚಿಂತನ' ಈ ಐದು ದಶಕಗಲ್ಲಿ ಅವರಿಂದ ಮೂಡಿ ಬಂದಿರುವ ಬರಹಗಳ ಒಂದು ಸಮಗ್ರ ಸಂಕಲನ. ವೃತ್ತಿಂಯುಲ್ಲಿ ಎಲೆಕ್ಟಿಕಲ್ ಇಂಜನಿಯರ್ ಪ್ರವೃತ್ತಿಯಲ್ಲಿ ಬರಹಗಾರ ಅಪರಂಜಿ ಓದುಗರಿಗೆ ಚಿರಪರಿಚಿತರಾಗಿರುವ ಬಾಬು ಅಥವಾ ಗಣೇಶ್ ಹೆಗ್ಗಡೆ ವೃತ್ತಿಯ ಜತೆಗೆ ನಕ್ಕು ನಗಿಸುವ ಕಲೆ ಲೇಸು ಎಂಬ ಧ್ಯೇಯದಿಂದ 350 ಪುಟಗಳಲ್ಲಿ ನಗುವಿನ ಹೊಳೆಯನ್ನೇ ಹರಿಸಿದ್ದಾರೆ. ಹೆಗಡೆಯವರ 360 ಡಿಗ್ರೀ ಕಣ್ಣು ಯಾವುದನ್ನೂ ಬಿಟ್ಟಿಲ್ಲ. ಅವರ ಬರಹಗಳಲ್ಲಿ ಬರುವ ಪ್ರೀತಿಯ ಮಡದಿ ಪದ್ದಿ. ಹಿರಿಯ ಸ್ನೇಹಿತ ಮಾರ್ಗದರ್ಶಿ ತೋಲಾಂಡರಾಯ ಮುಂತಾದವರು ನಮ್ಮ ಅಕ್ಕಪಕ್ಕದಲ್ಲೇ ಸಿಗುವ ವ್ಯಕ್ತಿಗಳು. ಅವರ ಮೂಲಕ ಹೆಗ್ಗಡೆಯವರು ತಮಗೆ ಆಪ್ಯಾಯಮಾನವಾದ ರಾಜಕಾರಣಿಗಳ ಜೀವನ ಕಾರ್ಯಶೈಲಿಗಳ ಬಗ್ಗೆ ವಿಶೇಷ ಗಮನ ಹರಿಸಿದ್ದಾರೆ. ಪ್ರತಿ ಪುಟದಲ್ಲೂ ನಮಗೆ ಯಾರೋ ಕಚಗುಳಿ ಇಟ್ಟಂತೆ ಭಾಸವಾಗಿ ನಗನಗುತ್ತಾ ಪುಟ ತಿರುವುತ್ತೇವೆ. ನಾ ಕಸ್ತೂರಿಯವರಂತೆ ಪದಗಳೊಡನೆ ಲೀಲಾಜಾಲವಾಗಿ ಆಟವಾಡುತ್ತಾರೆ– ಚಿರಸ್ಮರಣೀಯರು ಚಿರರಮಣೀಯರು ಆಗುತ್ತಾರೆ. ಘೋರವ್ಯಾಧಿ ಚಿಕನ್‌ಗುನ್ಯಾದಿಂದಾಗಿ ಸೌಟುಹಿಡಿಯಬೇಕಾಗಿ ಬರುವ ಗಂಡನಿಗೆ ಅದು ಕಿಚನ್‌ಗುನ್ಯವಾಗಿ ಕಾಣುತ್ತದೆ: ಟ್ಯೂಷನ್ ಹೇಳುವ ಮಾಸ್ಟರ್ ಮನಿಕಂಠನ್ ಆಗುತ್ತಾರೆ: ಕರೆಂಟ್ ಅನ್ನು ವ್ಯಾಂಪೈರಲ್ಲಿ ಅಳೆಯುತ್ತಾರೆಂದು ನಂಬಿರುವ ಇಂಧನ ಖಾತೆಯ ಮಂತ್ರಿಗಳಿಗೆ ವಿದ್ಯುತ್ ಬಗ್ಗೆ ಪಾಠ ಹೇಳುತ್ತಾ ಬಾಬು ಇಲೆಕ್ಟಿಕ್ ಶಾಕ್‌ಗಳ ನಗೆ ಚಿಮ್ಮಿಸುತ್ತಾರೆ. ಖಂಡಿತ ಕೊಳ್ಳಬಹುದಾದ ಕೃತಿ.

**–ಇ ಆರ್ ರಾಮಚಂದ್ರನ್**

ಪ್ರಕಾಶಕರು: ಭಾರತಿ ಪ್ರಕಾಶನ, ಮೈಸೂರು

ಮೊ: 9448413188 ರೂ. 350.